ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 18 ಮಂಗಳವಾರ 2023

ಸಂಪುಟ: 44 | ಸಂಚಿಕೆ: 93 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಪ್ರಧಾನಿ ಮೋದಿ ಹಿಮ್ಮೆಟ್ಟಿಸಲು

ಮಹಾಘಟಬಂಧನ್ ಬೆಂಗಳೂರಲ್ಲಿ ಕಸರತ್ತು

ಇಂದು ಕಾಂಗ್ರೆಸ್ ಅಧಿನಾಯಕರಾದ ಸೋನಿಯಾ ಗಾಂಧಿ, ರಾಹುಲ್, ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ, ಉ.ಪ್ರದೇಶ ಮಾಜಿ ಸಿಎಂ ಅಖಿಲೇಶ್ ಯಾದವ್ ಇನ್ನಿತರೆ ಘಟಾನುಘಟಿ ನಾಯಕರ ಗಾಢ ಚಿಂತನ–ಮಂಥನ

ಬೆಂಗಳೂರು, ಜು.17 (ಕೆಎಂಶಿ)– **ಪ್ರಧಾನಿ ನರೇಂದ್ರ ಮೋದಿ ಹಾಗೂ ಎನ್‌ಡಿಎ ಒಕ್ಕೂಟವನ್ನು ಹಿಮ್ಮೆಟ್ಟಿಸಲು ಬಿಜೆಪಿಯೇತರ ಪಕ್ಷಗಳ ಮಹಾಘಟಬಂಧನ್, ಕಸರತ್ತು ಆರಂಭಿಸಿದೆ.**

ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಭಾರಿಸಿದ್ದು, ಮುಂಬರುವ ಲೋಕಸಭಾ ಚುನಾವಣೆಯಲ್ಲೂ ವಿರೋಧ ಪಕ್ಷಗಳು ಒಂದಾಗಿ ಇಡೀ ರಾಷ್ಟ್ರದಲ್ಲಿ ಇದೇ ಫಲಿತಾಂಶ ಮರುಕಳಿಸುವಂತೆ ಮಾಡುವ ಉದ್ದೇಶದಿಂದ ಈ ಸಭೆ ನಡೆಸಲಾಗುತ್ತಿದೆ. ಸಭೆಯಲ್ಲಿ ಭಾಗವಹಿಸಲು ಕಾಂಗ್ರೆಸ್‌ನ ಅಧಿ ನಾಯಕರಾದ ಸೋನಿಯಾಗಾಂಧಿ, ರಾಹುಲ್ ಗಾಂಧಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಸೇರಿದಂತೆ ಬಿಜೆಪಿ ವಿರೋಧಿ ಪಕ್ಷಗಳ ನಾಯಕರು ನಗರಕ್ಕೆ ಆಗಮಿಸಿದ್ದಾರೆ. ಸಭೆಯ ಹಿನ್ನೆಲೆಯಲ್ಲಿ ಮಾಹಿತಿ ನೀಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ರಾಷ್ಟ್ರದಲ್ಲಿ ಪ್ರಜಾಪ್ರಭುತ್ವವನ್ನು ರಕ್ಷಿಸಲು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡಿ, ಯುಪಿಎ ಸರ್ಕಾರವನ್ನು ಮತ್ತೆ ಅಧಿಕಾರಕ್ಕೆ ತರಲು ಕಾರ್ಯತಂತ್ರ ರೂಪಿಸಲು ನಾವು ಸಭೆ ಸೇರುತ್ತಿದ್ದೇವೆ ಎಂದರು. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಾಂವಿಧಾನಿಕ ಹಕ್ಕುಗಳು ಮತ್ತು ನಮ್ಮ ಸಂಸ್ಥೆಗಳ ಸ್ವಾತಂತ್ರ್ಯವನ್ನು ಕಸಿದುಕೊಂಡು ದುರ್ಬಳಕೆ ಮಾಡಿಕೊಂಡಿವೆ ಎಂದರು. ಬಿಜೆಪಿ ಸರ್ಕಾರ ವಿರೋಧ ಪಕ್ಷಗಳ ಧ್ವನಿ ಅಡಗಿಸಲು ಸಾಂವಿಧಾನಿಕ ಸಂಸ್ಥೆಗಳಾದ ಇಡಿ, ಸಿಬಿಐ, ಐಟಿ

●9ನೇ ಪುಟಕ್ಕೆ



ಬೆಂಗಳೂರಿಗೆ ಆಗಮಿಸಿದ ಕಾಂಗ್ರೆಸ್ ಅಧಿನಾಯಕರಾದ ಸೋನಿಯಾಗಾಂಧಿ, ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ವಾಗತಿಸಿದರು.

ಜಯದೇವ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಸೇವಾವಧಿ ಮತ್ತೆ ಆರು ತಿಂಗಳು ವಿಸ್ತರಣೆ



ಬೆಂಗಳೂರು: ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರ ಸೇವಾವಧಿಯನ್ನು ಮತ್ತೆ 6 ತಿಂಗಳು ವಿಸ್ತರಿಸಿ ರಾಜ್ಯ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ. 2007ರಿಂದ ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಅವರ ಅಧಿಕಾರ ಅವಧಿ ಕಳೆದ ವರ್ಷವೇ ಮುಕ್ತಾಯವಾಗಿತ್ತು. ಈ ಹಿಂದಿನ ಬಿಜೆಪಿ ಸರ್ಕಾರ ಮಂಜುನಾಥ್ ಅವರ ಅವಧಿಯನ್ನು 1 ವರ್ಷ ವಿಸ್ತರಣೆ ಮಾಡಿತ್ತು. ಜು.19ಕ್ಕೆ ಡಾ. ಸಿ.ಎನ್. ಮಂಜುನಾಥ್ ಅವರ ಅವಧಿ ಮುಕ್ತಾಯಗೊಳ್ಳಲಿರುವ ಹಿನ್ನೆಲೆಯಲ್ಲಿ ವಿಧಾನಸೌಧದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಿಎಂ ಸಿದ್ದರಾಮಯ್ಯ, ಕಲಬುರಗಿ ಜಯದೇವ ಆಸ್ಪತ್ರೆಯ ಕೆಲಸ ಜವಾಬ್ದಾರಿ ಹಿನ್ನೆಲೆಯಲ್ಲಿ ಜನವರಿ ತಿಂಗಳವರೆಗೆ ಡಾ.ಸಿಎನ್.ಮಂಜುನಾಥ್‌ನ್ನು ನಿರ್ದೇಶಕರಾಗಿ ಮುಂದುವರಿಸುವ ನಿರ್ಧಾರ ಕೈಗೊಂಡಿದ್ದಾರೆ.

ಕರ್ನಾಟಕ ಸಂಪದ್ಭರಿತ ರಾಜ್ಯ; ಮೇಯ್ದುಕೊಂಡು ಹೋಗಲು ಬಂದಿದ್ದಾರೆ...



● ಬಿಜೆಪಿ ವಿರೋಧಿ ಮಹಾಘಟಬಂಧನ್ ಸಭೆಗೆ ಮಾಜಿ ಸಿಎಂ ಕುಮಾರಸ್ವಾಮಿ ವ್ಯಂಗ್ಯ ● ನಿತೀಶ್ ಕುಮಾರ್ 'ಅವಕಾಶವಾದಿತನ' ಹೇಳಿಕೆಗೆ ಎದಿರೇಟು; ಒಮ್ಮೆ ಬಿಜೆಪಿ, ಮತ್ತೊಮ್ಮೆ ಆರ್‌ಜೆಡಿ ಹಿಡಿದಿದ್ದು ಅವಕಾಶವಾದಿತನವಲ್ಲವೆ?

ಬೆಂಗಳೂರು, ಜು.17 (ಕೆಎಂಶಿ)–ಕರ್ನಾಟಕ ಸಂಪದ್ಭರಿತ ರಾಜ್ಯ. ಇಲ್ಲಿ ಒಳ್ಳೆಯ ಮೇವು ಸಿಗಲಿದೆ ಎಂದು ಮೇಯ್ದುಕೊಂಡು ಹೋಗಲು ಬಿಜೆಪಿ ವಿರೋಧ ಪಕ್ಷಗಳ ನಾಯಕರು ಒಂದೆಡೆ ಸೇರಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಹಾರ ಮುಖ್ಯಮಂತ್ರಿ ನಿತಿಶ್ ಕುಮಾರ್ ಅವರು, ಜೆಡಿಎಸ್ ಅವಕಾಶವಾದಿ ಪಕ್ಷವೆಂದು ವ್ಯಂಗ್ಯವಾಡಿರುವುದಕ್ಕೆ ತಮ್ಮದೇ ಧಾಟಿಯಲ್ಲಿ ಬಿಜೆಪಿಯೇತರ ಮುಖಂಡರನ್ನು ತರಾಟೆಗೆ ತೆಗೆದುಕೊಂಡರು. ಅಧಿಕಾರಕ್ಕಾಗಿ ನಿತೀಶ್ ಕುಮಾರ್ ಅವರು ಬಿಜೆಪಿ ಜತೆ, ಆರ್‌ಜೆಡಿ ಜತೆ ಬೇಕು ಎಂದಾಗಲೆಲ್ಲಾ ಹೋಗಿದ್ದಾರೆ. ಇದು ಅವಕಾಶವಾದಿತನವಲ್ಲವೇ ಎಂದು ಪ್ರಶ್ನಿಸಿದರು. ಕರ್ನಾಟಕದ ಚುನಾವಣೆ ಬಗ್ಗೆ ಕೆಲವು ನಾಯಕರು ಮಾತನಾಡಿದ್ದಾರೆ. ರಾಷ್ಟ್ರದಲ್ಲೂ ಇದು ಪುನರಾವರ್ತನೆಯಾಗಲಿದೆ ಎಂಬ ಭ್ರಮೆಯಲ್ಲಿ ಇದ್ದಂತಿದೆ. ನಮಗೇನು ಅವರು ಆಹ್ವಾನ ನೀಡಿಲ್ಲ. ಹಿಂದಿನ ಪ್ರಮುಖ ಚುನಾವಣೆಗಳ ಸಂದರ್ಭದಲ್ಲೂ ಮಹಾಘಟಬಂಧನ್ ಸಭೆಗಳು ನಡೆದಿವೆ. ಆ ಸಭೆಗಳ ನಂತರ ಬಂದ ಫಲಿತಾಂಶವೇನು ಎಂದು ಪ್ರಶ್ನಿಸಿದರು. ಘಟಬಂಧನ್ ಮಾಡುತ್ತಿರುವುದು

●6ನೇ ಪುಟಕ್ಕೆ

ದೇವಾಲಯಗಳಲ್ಲಿ ಮೊಬೈಲ್ ನಿಷಿದ್ಧ


ಮೈಸೂರು, ಜು.17(ಎಂಕೆ)– ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳಲ್ಲಿ ಮೊಬೈಲ್ ಫೋನ್ ಬಳಸದಂತೆ ಸರ್ಕಾರದ ಅಧೀನ ಕಾರ್ಯದರ್ಶಿ(ಧಾರ್ಮಿಕ ದತ್ತಿ) ಕೆ.ಪಿ.ಹೇಮಂತ ರಾಜು ಸುತ್ತೋಲೆ ಹೊರಡಿಸಿದ್ದಾರೆ.



ದೇವಾಲಯಗಳ ಆವರಣದಲ್ಲಿ ಮೊಬೈಲ್ ಫೋನ್ ಬಳಕೆ ಹೆಚ್ಚಾಗಿದೆ. ಮೊಬೈಲ್ ಬಳಕೆಯಿಂದ ಬರುವ ಶಬ್ದಗಳಿಂದ ದೇವಾಲಯದ ಸಿಬ್ಬಂದಿ ಹಾಗೂ ದೇವರ ದರ್ಶನಕ್ಕೆ ಬರುವ ಭಕ್ತರು ಧ್ಯಾನ ಮತ್ತು ಪೂಜಾದಿಗಳನ್ನು ನಡೆಸಲು ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಬರುವ ದೇವಾಲಯಗಳಲ್ಲಿ ದೇವರ ದರ್ಶನಕ್ಕೆ ಬರುವ ಭಕ್ತಾದಿಗಳು ದೇವರ ದರ್ಶನ ಸಮಯದಲ್ಲಿ ತಮ್ಮ ಮೊಬೈಲ್ ಫೋನ್‌ಗಳನ್ನು ಸ್ವಿಚ್ ಆಫ್ ಮಾಡಿ, ದೇವರ ದರ್ಶನ ಮಾಡುವಂತೆ ಸೂಚಿಸಲಾಗಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ ಅಪಘಾತ: ಪರಿಶೀಲನೆಗೆ ಮೂವರು ತಜ್ಞರ ಸಮಿತಿ ರಚನೆ

● ಅಪಘಾತ ಸ್ಥಳಗಳ ಪರಿಶೀಲನೆ ನಡೆಸುವ ಸಮಿತಿ ● 10 ದಿನದಲ್ಲಿ ವರದಿ ನೀಡುವಂತೆ ಸೂಚನೆ



ಮೈಸೂರು, ಜು.17(ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಸಂಭವಿಸುತ್ತಿರುವ ಸರಣಿ ಅಪಘಾತಗಳ ಪರಿಶೀಲನೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಹೆದ್ದಾರಿ ಸುರಕ್ಷತೆಯ ಪರಿಶೀಲನೆಗಾಗಿ ಮೂವರು ತಜ್ಞರ ಸಮಿತಿ ರಚನೆ ಮಾಡಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಪ್ರತಿದಿನ ಅಪಘಾತ ಸಂಭವಿಸುತ್ತಲೇ ಇದೆ. ಈತನಕ ಸುಮಾರು 500ಕ್ಕೂ ಹೆಚ್ಚು ಅಪಘಾತಗಳು ಸಂಭವಿಸಿದ್ದು, 150ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ಈ ಹಿನ್ನೆಲೆಯಲ್ಲಿ ಅಪಘಾತ ಗಳನ್ನು ತಡೆಗಟ್ಟಲು ಖುದ್ದು ಪರಿಶೀಲನೆ ನಡೆಸಿದ ಸಂಚಾರ ಮತ್ತು ಸುರಕ್ಷತಾ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್, ಅತೀ ವೇಗವಾಗಿ ಚಾಲನೆ ಮಾಡುವ ವಾಹನಗಳ ಚಾಲಕರಿಗೆ ದಂಡಾಸ್ತ್ರ ಪ್ರಯೋಗ ಮಾಡಿದ್ದರು. ಜೊತೆಗೆ ಅತೀ ವೇಗದಲ್ಲಿ ಚಾಲನೆ ಮಾಡದಂತೆ ಜಾಗೃತಿ ಮೂಡಿಸಲು ಡಿಜಿಟಲ್ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ. ಆದರೂ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಅಪಘಾತಗಳು ಸಂಭವಿಸುತ್ತಲೇ ಇವೆ. ಈ ಹಿನ್ನೆಲೆಯಲ್ಲಿ ಅಪಘಾತಗಳನ್ನು ತಡೆಗಟ್ಟಲು ತಾಂತ್ರಿಕ ಸಮಿತಿ ರಚನೆ ಮಾಡುವುದಾಗಿ ರಾಜ್ಯ ಸರ್ಕಾರ ಕೂಡ ಪ್ರಕಟಿಸಿತ್ತು. ಇದರ ಬೆನ್ನಲ್ಲೇ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹೆದ್ದಾರಿ ಸುರಕ್ಷತೆಯ ಪರಿಶೀಲನೆಗಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮೂವರು ತಜ್ಞರ ಸಮಿತಿ

●9ನೇ ಪುಟಕ್ಕೆ

ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ಮುಂದಿನ ವರ್ಷಾಂತ್ಯ ಸಂಚಾರಕ್ಕೆ ಮುಕ್ತ

● ಸಂಸದ ಪ್ರತಾಪ್ ಸಿಂಹ ಮಾಹಿತಿ ● 2024ರ ಸೆಪ್ಟೆಂಬರ್‌ನಲ್ಲಿ ಕಾಮಗಾರಿ ಪೂರ್ಣ ● 24 ತಿಂಗಳಲ್ಲಿ ಕಾಮಗಾರಿ ಮುಗಿಸುವ ಗುರಿ ● 4130 ಕೋಟಿ ರೂ. ಯೋಜನಾ ಅಂದಾಜು ವೆಚ್ಚ ● 93 ಕಿಲೋ ಮೀಟರ್ ಹೆದ್ದಾರಿಗೆ 1200 ಎಕರೆ ಭೂಮಿ ಸ್ವಾಧೀನ ● ಕೊಡಗು, ಮಂಗಳೂರು, ಕೇರಳಾಗೆ ಹೋಗುವವರಿಗೆ ಅನುಕೂಲ ● ಕೈಗಾರಿಕಾ ಬೆಳವಣಿಗೆಗೂ ಇದರಿಂದ ಅನುಕೂಲಕಾರಿ



ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ನಿರ್ಮಾಣ ಸಂಬಂಧ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳೊಂದಿಗೆ ಸಂಸದ ಪ್ರತಾಪ್‌ಸಿಂಹ ಸಭೆ ನಡೆಸಿದರು.

ಮೈಸೂರು, ಜು.17(ಬಿಎಲ್‌ಯು)–ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ನಿರ್ಮಾಣ ಕಾಮಗಾರಿ ಸೆಪ್ಟೆಂಬರ್ ಎರಡನೇ ವಾರದಲ್ಲಿ ಆರಂಭವಾಗಲಿದ್ದು, 2024ರ ಡಿಸೆಂಬರ್‌ನಲ್ಲಿ ಲೋಕಾರ್ಪಣೆ ಮಾಡಲಾಗುವುದು ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ತಿಳಿಸಿದ್ದಾರೆ.

ಮೈಸೂರು ಜಿಲ್ಲಾಧಿಕಾರಿ ಹಳೆ ಕಚೇರಿಯಲ್ಲಿ ಸೋಮವಾರ ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ನಿರ್ಮಾಣ ಸಂಬಂಧ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಸೇರಿದಂತೆ ಸಂಬಂಧಿಸಿದ ಇತರೆ ಇಲಾಖೆ ಅಧಿಕಾರಿಗಳ ಸಭೆಯ ನಂತರ ಈ ವಿಚಾರ ತಿಳಿಸಿದರು. ಮೈಸೂರಿನಿಂದ ಕುಶಾಲ ನಗರದ ಗುಡ್ಡೆ ಹೊಸೂರುವರೆಗೆ 4130 ಕೋಟಿ ರೂ. ವೆಚ್ಚದಲ್ಲಿ ಚತುಷ್ಪಥ ಹೆದ್ದಾರಿ ನಿರ್ಮಾಣ ಮಾಡಲಾಗುತ್ತಿದೆ. 93 ಕಿಲೋ ಮೀಟರ್ ಉದ್ದದ ಎನ್‌ಹೆಚ್–275 ಹೆದ್ದಾರಿ ನಿರ್ಮಾಣಕ್ಕೆ 1200 ಎಕರೆ ಭೂಮಿಯನ್ನು ಭೂ ಸ್ವಾಧೀನ ಮಾಡಿಕೊಳ್ಳಲಾಗಿದೆ. ಭೂಮಿ ಪಡೆದ ರೈತರಿಗೆ 600 ಕೋಟಿ ರೂ. ಪರಿಹಾರ ನೀಡಲಾಗುತ್ತಿದ್ದು, ಈಗಾಗಲೇ 300 ಕೋಟಿ ರೂ. ನೀಡಲಾಗಿದೆ ಎಂದು ಪ್ರತಾಪ್‌ಸಿಂಹ ಹೇಳಿದರು. ಚತುಷ್ಪಥ ಹೆದ್ದಾರಿ

●9ನೇ ಪುಟಕ್ಕೆ

ನಿದ್ರೆ ಮಾಡಲು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ ನಿರ್ಮಾಣ ಮಾಡಿಲ್ಲ

ಮೈಸೂರು, ಜು.17(ಬಿಎಲ್‌ಯು)–ನಿದ್ರೆ ಮಾಡಲು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ ನಿರ್ಮಾಣ ಮಾಡಿಲ್ಲ ಎಂದು ಸಂಸದ ಪ್ರತಾಪ್ ಸಿಂಹ, ಹೆದ್ದಾರಿಯಲ್ಲಿ ಕಾರು ನಿಲ್ಲಿಸಿ ವಿಶ್ರಾಂತಿ ಪಡೆಯುವವರಿಗೆ ಚಾಟಿ ಬೀಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಸರಣಿ ದರೋಡೆ ಪ್ರಕರಣಗಳು ನಡೆಯುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದರು. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಹೋಗುವ ಬಹಳಷ್ಟು ಪ್ರಯಾಣಿಕರು ರಾತ್ರಿ ವೇಳೆ ಹೆದ್ದಾರಿ ಮಧ್ಯೆ ವಾಹನ ನಿಲ್ಲಿಸಿ ನಿದ್ರೆಗೆ ಜಾರುತ್ತಾರೆ. ಅದನ್ನೆ ಕಾಯುವ ದರೋಡೆಕೋರರು ತಮ್ಮ ಕೃತ್ಯ ಎಸಗುತ್ತಾರೆ ಎಂದು ಹೇಳಿದರು. ನಿದ್ರೆ ಮಾಡುವವರಿಗೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ ನಿರ್ಮಾಣ ಮಾಡಿಲ್ಲ. ಒಂದು ವೇಳೆ ವಿಶ್ರಾಂತಿ ಪಡೆಯಬೇಕೆಂದರೆ ಬೆಂಗಳೂರಿನ ಕಣ್ಮಿಣಿಕೆ ಟೋಲ್ ಪ್ಲಾಜಾ ಅಥವಾ ಗಣಂಗೂರಿನ ಟೋಲ್ ಪ್ಲಾಜಾದಲ್ಲಿ ವಿಶ್ರಾಂತಿ ಪಡೆಯಲಿ. ಒಂದು ಗಂಟೆಯಲ್ಲ ನಾಲ್ಕು ಗಂಟೆ ವಾಹನ ನಿಲ್ಲಿಸಿ ನಿದ್ರೆ ಮಾಡಲಿ, ಯಾರ ಅಭ್ಯಂತರವೂ ಇರುವುದಿಲ್ಲ ಎಂದು ಪ್ರತಾಪ್ ಸಿಂಹ ಹೇಳಿದರು. ಆದರೂ ಎಕ್ಸ್‌ಪ್ರೆಸ್ ಹೈವೆಯಲ್ಲಿ ದರೋಡೆ ಪ್ರಕರಣಗಳನ್ನು ತಡೆಯಲು ಸಿಸಿಟಿವಿಗಳನ್ನು ಅಳವಡಿಸಲಾಗುತ್ತಿದೆ. ಈ ಮೂಲಕ ಅಪರಾಧ ಕೃತ್ಯಗಳನ್ನು ತಡೆಗಟ್ಟಲಾಗುತ್ತಿದೆ ಎಂದು ಅವರು ತಿಳಿಸಿದರು. ಮೈಸೂರಿನ ರಿಂಗ್ ರಸ್ತೆಯಲ್ಲಿ ವಿದ್ಯುತ್ ದೀಪಗಳ ಅಳವಡಿಕೆಗೆ 12 ಕೋಟಿ ರೂ. ಟೆಂಡರ್ ನೀಡಲಾಗಿತ್ತು. ಆದರೆ ಸಿದ್ದರಾಮಯ್ಯ ಅವರ ಸರ್ಕಾರ ಆರು ಕೋಟಿ ರೂ. ಹಣವನ್ನು ಗುತ್ತಿಗೆದಾರರಿಗೆ ಬಿಡುಗಡೆ ಮಾಡದ ಕಾರಣ ವಿದ್ಯುತ್ ದೀಪಗಳ ಅಳವಡಿಕೆ ಕಾರ್ಯ ಅಪೂರ್ಣಗೊಂಡು ರಿಂಗ್ ರಸ್ತೆ ಕತ್ತಲಲ್ಲಿ ಮುಳುಗಿತ್ತು. ಈಗ ಉಳಿದ ಆರು ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ಈಗ ರಿಂಗ್ ರಸ್ತೆಯ ಎಲ್ಲಾ ದೀಪಗಳು ಬೆಳಗುತ್ತಿವೆ ಎಂದು ಪ್ರತಾಪ್ ಸಿಂಹ ತಿಳಿಸಿದರು.



ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಮೈಸೂರಿನ ಶ್ರೀ ಕೃಷ್ಣ ಎಂಟರ್‌ಪ್ರೈಸಸ್‌ನ ಮಾಲೀಕರಾದ ಪ್ರದೀಪ್‌ಸಿಂಗ್, ಮುಖಂಡರಾದ ಜಾಕೀರ್ ಹುಸೇನ್, ಸಂದೀಪ್, ಗಗನ್ ದೀಪ್, ಅಮೃತ್, ಮುದಾಸಿ ಹಾಗೂ ಸ್ನೇಹಿತರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಮೈಸೂರು ಮಿತ್ರ

ಸಂಚಾರ ನಿಯಮ ಉಲ್ಲಂಘನೆ ಪ್ರಕರಣ
ಶೇ.50 ರಿಯಾಯಿತಿ: 11 ದಿನದಲ್ಲಿ 25.17 ಲಕ್ಷ ರೂ.ದಂಡ ಸಂಗ್ರಹ



> ಇದೀಗ ಮೈಸೂರು ನಗರದಾದ್ಯಂತ ವಾಹನ ತಪಾಸಣಾ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದು, ಸಿಗ್ನಲ್ ಜಂಪ್, ಹೆಲ್ಮೆಟ್ ಧರಿಸದೇ ವಾಹನ ಚಾಲನೆ, ತ್ರಿಬಲ್ ರೈಡಿಂಗ್, ನೋ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲುಗಡೆಯಂತಹ ನಿಯಮ ಉಲ್ಲಂಘನೆ ಕಂಡು ಬಂದಲ್ಲಿ ಪ್ರಕರಣ ದಾಖಲಿಸಿ ಸ್ಥಳದಲ್ಲೇ ದಂಡ ವಿಧಿಸಲಾಗುತ್ತಿದೆ. ಸಾರ್ವಜನಿಕರು ಎಚ್ಚರದಿಂದ ವಾಹನ ಚಲಾಯಿಸಿ.
> –**ಪರಶುರಾಮಪ್ಪ,** ಎಸಿಪಿ ಸಂಚಾರ ವಿಭಾಗ.

ಮೈಸೂರು, ಜು.17(ಆರ್‌ಕೆ)– ಶೇ.50ರಷ್ಟು ವಿನಾಯಿತಿ ಅವಕಾಶ ಬಳಸಿಕೊಂಡು ವಾಹನ ಮಾಲೀಕರು ದಂಡದ ಹಣ ಪಾವತಿಸಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಇತ್ಯರ್ಥಗೊಳಿಸಿಕೊಳ್ಳಲು ಮುಂದಾಗುತ್ತಿದ್ದಾರೆ.

ಸರ್ಕಾರವು ಜು.6ರಿಂದ ಮತ್ತೆ ದಂಡದ ಮೊತ್ತದಲ್ಲಿ ಶೇ.50 ರಿಯಾಯಿತಿ ಘೋಷಣೆ ಮಾಡಿದ ಮೇಲೆ ಮೈಸೂರಿನ ಎಲ್ಲಾ ಸಂಚಾರ ಪೊಲೀಸ್ ಠಾಣೆಗಳಲ್ಲಿ ಜು.17ರವರೆಗೆ ಒಟ್ಟು 9,819 ಪ್ರಕರಣಗಳಲ್ಲಿ 25,17,450 ರೂ.ಗಳನ್ನು ದಂಡದ ರೂಪದಲ್ಲಿ ಸಂಗ್ರಹಿಸಲಾಗಿದೆ ಎಂದು ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಜು.6ರಿಂದ 15ರವರೆಗೆ 8,579 ಪ್ರಕರಣಗಳಲ್ಲಿ 21,49,300 ರೂ.ಗಳ ದಂಡ ಸಂಗ್ರಹಿಸಲಾಗಿತ್ತು. ಜು.16ರಂದು ಭಾನುವಾರ ಒಂದೇ ದಿನ 829 ಪ್ರಕರಣಗಳಲ್ಲಿ 2,45,750 ರೂ. ಸಂಗ್ರಹಿಸಲಾಗಿದೆ. ದಂಡ ರಿಯಾಯಿತಿ ಅವಕಾಶವನ್ನು ಬಳಸಿಕೊಂಡು ವಾಹನ ಮಾಲೀಕರು, ಬಾಕಿ ಪ್ರಕರಣಗಳನ್ನು ಇತ್ಯರ್ಥಗೊಳಿಸಿಕೊಳ್ಳಲು ಮುಂದಾಗುತ್ತಿರುವುದು ಶ್ಲಾಘನೀಯ ಎಂದರು.

ಹಳೇ ಕೇಸುಗಳನ್ನು ಇತ್ಯರ್ಥಗೊಳಿಸುವ ಜೊತೆಗೆ ಹೊಸ ಪ್ರಕರಣಗಳು ದಾಖಲಾಗದಂತೆ ಎಚ್ಚರ ವಹಿಸಬೇಕು. ಸಂಚಾರ ನಿಯಮ ಪಾಲಿಸಿ ವಾಹನ ಚಲಾಯಿಸಿದರೆ ಅಪಘಾತಗಳನ್ನು ತಪ್ಪಿಸಬಹುದಲ್ಲದೆ, ತಮ್ಮ ಪ್ರಾಣದ ಜೊತೆಗೆ ಇತರರ ಪ್ರಾಣ ಉಳಿಸಬಹುದು ಎಂದು ಪರಶುರಾಮಪ್ಪ ತಿಳಿಸಿದ್ದಾರೆ.



ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯಿಂದ ಮೈಸೂರಿನ ಪುರಭವನದಲ್ಲಿ ನಡೆದ ದಿವಂಗತ ಕೆ.ಹೆಚ್.ರಾಮಯ್ಯರ ಜಯಂತ್ಯುತ್ಸವದಲ್ಲಿ ಈಜು ತರಬೇತುದಾರ ವಿ.ಜಗದೀಶ್ ಅವರಿಗೆ ವಿಕಾಸ ಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ವೇದಿಕೆ ರಾಜ್ಯಾಧ್ಯಕ್ಷೆ ಹೆಚ್.ಎಲ್.ಯಮುನಾ, ವೇದಿಕೆ ಗೌರವಾಧ್ಯಕ್ಷ ಹೆಚ್.ಕೆ.ರಾಮು, ಶ್ರೀ ಸಿದ್ದರಾಮ ಚೈತನ್ಯ ಸ್ವಾಮೀಜಿ ಉಪಸ್ಥಿತರಿದ್ದರು.

ಜು.21ರಂದು ಮಧುರ ಕಾವ್ಯ ಬಿಡುಗಡೆ



ಮೈಸೂರು, ಜು.17(ಜಿಎ)–ವಿಖ್ಯಾತ್ ಕ್ರಿಯೇಷನ್ ನಿರ್ಮಾಣದ 'ಮಧುರ ಕಾವ್ಯ' ಚಲನಚಿತ್ರವು ಜು.21ರಂದು ಬಿಡುಗಡೆಯಾಗಲಿದೆ ಎಂದು ಚಿತ್ರದ ನಿರ್ದೇಶಕ, ನಿರ್ಮಾಪಕ ಹಾಗೂ ನಾಯಕ ನಟರೂ ಆದ ಮಧುಸೂಧನ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಧುರ ಕಾವ್ಯ ಚಿತ್ರವು ಅಲೋಪತಿ ಆಸ್ಪತ್ರೆಯವರು ಮತ್ತು ಆಯುರ್ವೇದ ಪಂಡಿತರ ನಡುವೆ ನಡೆಯುತ್ತಿರುವ ಹಲವಾರು ವರ್ಷಗಳ ಸಂಘರ್ಷವನ್ನು ಚಿತ್ರದಲ್ಲಿ ತೋರಿಸಿದ್ದು, ತಾಯಿ–ಮಗನ ಬಾಂಧವ್ಯ ಕೂಡ ಅಳವಡಿಸಲಾಗಿದೆ ಎಂದರು. ಚಿತ್ರದ ಸಂಗೀತ ನಿರ್ದೇಶಕ ಸತೀಶ್ ಮೌರ್ಯ ಮಾತನಾಡಿ, ಚಿತ್ರವು ದೇಸಿ ಅಂಶವನ್ನು ಒಳಗೊಂಡಿರುವುದರಿಂದ ದೇಸಿ ವಾದ್ಯಗಳನ್ನು ಬಳಸಿ ಸಂಗೀತ ನಿರ್ದೇಶನ ಮಾಡಲಾಗಿದೆ. ಚಿತ್ರದಲ್ಲಿ ನಾಲ್ಕು ಗೀತೆಗಳಿದ್ದು, ಗಾಯಕರಾದ ರಾಜೇಶ್ ಕೃಷ್ಣನ್, ಚಿತ್ರ ಸೇರಿದಂತೆ ಪ್ರಮುಖರು ಹಾಡಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನಟರಾದ ರಾಜುಕುಮಾರ್ ನಾಯಿಕ್, ಅಣ್ಣಪ್ಪ ಸ್ವಾಮಿ ಉಪಸ್ಥಿತರಿದ್ದರು.

ತಂದೆ, ತಾಯಿ, ಇಬ್ಬರು ಮಕ್ಕಳು ನಾಪತ್ತೆ



ಶೇಕ್ ಜಿಷಾನ್



ಬಿ.ಹಾಜೀರಾ



ನೂರ್ ಅಫ್ಜ್



ಶೇಕ್ ಜೈಯಾನ್

ಮೈಸೂರು, ಜು. 17– ತಂದೆ–ತಾಯಿ ಹಾಗೂ ಇಬ್ಬರು ಮಕ್ಕಳು ಸೇರಿದಂತೆ ಕುಟುಂಬದ ನಾಲ್ವರು ನಾಪತ್ತೆಯಾಗಿರುವ ಬಗ್ಗೆ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶೇಕ್ ಜಿಷಾನ್ (34), ಬಿ. ಹಾಜೀರಾ (25), ನೂರ್ ಅಫ್ಜ್ (6) ಮತ್ತು ಶೇಕ್ ಜೈಯಾನ್ (3) ಕಾಣೆಯಾದವರು. ಇವರು ಮೇ 28ರಂದು ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಆಟೋದಲ್ಲಿ ಹೋಗುತ್ತಿದ್ದು, ಎಲ್ಲಿಗೆ ಹೋಗುತ್ತಿದ್ದೀರಾ ಎಂದು ಕೇಳಿದ್ದಕ್ಕೆ ಹೊಸಕೋಟೆಯಲ್ಲಿರುವ ಆಸ್ಪತ್ರೆಗೆ ಹೋಗಿ ಬರುವುದಾಗಿ ಹೇಳಿ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಹಾಜೀರಾ ತಾಯಿ ರೇಷ್ಮಾಬಾನು ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಉದಯಗಿರಿ ಪೊಲೀಸ್ ಠಾಣೆಗೆ ತಿಳಿಸಲು ಕೋರಲಾಗಿದೆ. ಇಲ್ಲವೆ ಪೊಲೀಸ್ ಕಂಟ್ರೋಲ್ ರೂಂ 100, 2418339 ಸಂಪರ್ಕಿಸಬಹುದು.

ನಿಧನ

ಕೆ. ಶಾಜಿ



ಮೈಸೂರು, ಜು. 17– ಮೈಸೂರಿನ ನಾಯ್ಡುನಗರ ಮೂರನೇ ಹಂತದ ನಿವಾಸಿ ಕೆ.ಶಾಜಿ (48) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಉಮಾ, ಪುತ್ರ ಪ್ರತ್ಯುಶ್, ಪುತ್ರಿ ಅಶ್ವತಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅವರ ಹುಟ್ಟೂರು ಕೇರಳದ ಕಣ್ಣೂರಿನಲ್ಲಿ ನಾಳೆ (ಜು.18) ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಸನ್ನ



ಮೈಸೂರಿನ ಗಾಂಧಿನಗರದ ಶ್ರೀ ದುರ್ಗಾದೇವಿ ದೇವಸ್ಥಾನದ ರಸ್ತೆ ನಿವಾಸಿ ಲೇಟ್‌ಮಾದಯ್ಯನವರ ಪುತ್ರ ಪ್ರಸನ್ನ (ಪಸ್ಸಿ–39) ಅವರು ಅನಾರೋಗ್ಯದಿಂದ ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಅವಿವಾಹಿತರಾಗಿದ್ದು, ತಾಯಿ ಭಾಗ್ಯಮ್ಮ, ಅಣ್ಣಂದಿರಾದ ಮೂರ್ತಿ, ಶ್ರೀನಿವಾಸ್, ಅತ್ತಿಗೆಯಂದಿರಾದ ಗೀತಾ, ರಂಗುಶ್ರೀ ಹಾಗೂ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಸಿ. ಮರೀಗೌಡ



ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಅವರ ಮಾವ ಹಾಗೂ ವಿದ್ಯಾ ವಿಕಾಸ್ ಶಿಕ್ಷಣ ಸಂಸ್ಥೆಯ ವಿಶೇಷಾಧಿಕಾರಿ ಸಿ. ರಾಮಣ್ಣ ಅವರ ಸಹೋದರ ಹಾಗೂ ಸರಸ್ವತಿಪುರಂ 6ನೇ ಮುಖ್ಯ ರಸ್ತೆಯ ನಿವಾಸಿ ಕೆ.ಸಿ. ಮರೀಗೌಡ (78) ಭಾನುವಾರ ನಿಧನರಾದರು.

ಅವರು ಎನ್‌ಸಿಸಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ನಿವೃತ್ತರಾಗಿದ್ದರು. ಮೃತರು ಪತ್ನಿ ಲಕ್ಷ್ಮಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಲಕ್ಷ್ಮಣ ಅವರ ಪತ್ನಿ ಹಿರಿಯ ಪುತ್ರಿ, ಎರಡನೇ ಪುತ್ರಿ ಅಮೆರಿಕಾದಲ್ಲಿದ್ದಾರೆ. ಕುವೆಂಪುನಗರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಮತ್ತಿತರರು ಭೇಟಿ ನೀಡಿ, ಅಂತಿಮ ನಮನ ಸಲ್ಲಿಸಿದರು.

ರಾಜ್ಯಮಟ್ಟದ ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ ಆಹ್ವಾನ


ಮೈಸೂರು,ಜು.17–2023–24ನೇ ಸಾಲಿನಲ್ಲಿ ರಾಜ್ಯಮಟ್ಟದ ಕೃಷಿ ಪಂಡಿತ ಪ್ರಶಸ್ತಿಗಳನ್ನು ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ ಕೃಷಿ, ಅರಣ್ಯ ಕೃಷಿ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿರುವ ರೈತರನ್ನು ಗುರುತಿಸಿ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ರಾಜ್ಯಮಟ್ಟದ ಕೃಷಿ ಪಂಡಿತ ಪ್ರಶಸ್ತಿಗಳಲ್ಲಿ ಆಯ್ಕೆಯಾದ ಪ್ರಥಮ ಸ್ಥಾನಕ್ಕೆ 1,25,000. ದ್ವಿತೀಯ ಸ್ಥಾನಕ್ಕೆ 1.00.000, ತೃತೀಯ ಸ್ಥಾನಕ್ಕೆ 75,000 ರೂ,. ಉಳಿದಂತೆ ರಾಜ್ಯದ 10 ರೈತರಿಗೆ (ಕೃಷಿ ಪಂಡಿತ ಉದಯೋನ್ಮುಖ ಎಂದು ತಲಾ 50.000 ದಂತೆ) ಆಯ್ಕೆ ಸಮಿತಿ ತೀರ್ಮಾನದಂತೆ ನೀಡಲಾಗುವುದು. ಅರ್ಹ ರೈತರು, ರೈತ ಮಹಿಳೆಯರು ಸಂಬಂಧಪಟ್ಟ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಿಂದ ಅರ್ಜಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಜು.24ರೊಳಗೆ ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಲ್ಲಿಸುವುದು.

ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಜು.17–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜು.20ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಕೆಟ್ಟು ನಿಂತಿರುವ ಮೈಸೂರು ರೈಲ್ವೆ ನಿಲ್ದಾಣದ ಎಸ್ಕಲೇಟರ್

ಪ್ರಯಾಣಿಕರ ಅದರಲ್ಲೂ ವಯೋವೃದ್ಧರ ಪರದಾಟ, ಕೆಲವರಿಗೆ ರೈಲು ಸಿಗದೆ ಒದ್ದಾಟ



ಮೈಸೂರು, ಜು.17(ಬಿಎಲ್ ಯು)– ಮೈಸೂರಿನ ರೈಲ್ವೆ ನಿಲ್ದಾಣದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಅಳವಡಿಸಿರುವ ಎಸ್ಕಲೇಟರ್ ಕೆಟ್ಟು ನಿಂತಿದೆ. ಇದರಿಂದ ಭಾರದ ಲಗೇಜ್ ಹಿಡಿದು ಪ್ಲಾಟ್‌ಫಾರ್ಮ್‌ಗಳಿಗೆ ತೆರಳುವ ಪ್ರಯಾಣಿಕರು ಬಹಳ ಪ್ರಯಾಸಪಡುತ್ತಿದ್ದಾರೆ.

ಮೈಸೂರಿನ ರೈಲ್ವೆ ನಿಲ್ದಾಣದ ನವೀಕರಣಕ್ಕಾಗಿ ಸರ್ಕಾರ ನೂರಾರು ಕೋಟಿ ರೂ. ವೆಚ್ಚ ಮಾಡಿದೆ. ಪ್ರಯಾಣಿಕರು ಸುಲಭವಾಗಿ ಸಾಗಲು ಆಧುನಿಕ ತಂತ್ರಜ್ಞಾನ ಸೌಲಭ್ಯ ಕಲ್ಪಿಸಿದೆ. ಮೇಲ್ಸೇತುವೆ ಮೂಲಕ ಪಕ್ಕದ ಪ್ಲಾಟ್ ಫಾರ್ಮ್‌ಗೆ ಹೋಗಲು ಲಕ್ಷಾಂತರ ರೂ. ವೆಚ್ಚದಲ್ಲಿ ಎಸ್ಕಲೇಟರ್ ನಿರ್ಮಾಣ ಮಾಡಿದೆ. ಆದರೆ ಎಸ್ಕಲೇಟರ್ ಈಗ ಕೆಟ್ಟು ನಿಂತಿದೆ. ಇದರಿಂದ ಭಾರದ ಲಗೇಜ್ ಹಿಡಿದು ಎಕ್ಸಲೇಟರ್ ಹತ್ತಿ ಪಕ್ಕದ ಪ್ಲಾಟ್‌ಫಾರ್ಮ್‌ಗೆ ತೆರಳುವ ಪ್ರಯಾಣಿಕರ ಪಾಡು ಹೇಳತೀರದಾಗಿದೆ.

ಎಸ್ಕಲೇಟರ್ ಪಕ್ಕದಲ್ಲೆ ಮೇಲ್ಸೇತುವೆಗೆ ಹೋಗಲು ಮೆಟ್ಟಿಲುಗಳು ಇವೆ. ಆದರೆ ಮೆಟ್ಟಿಲುಗಳ ನವೀಕರಣ ಕಾರ್ಯ ನಡೆಯುತ್ತಿದೆ. ಫುಟ್ ಓವರ್ ಬ್ರಿಡ್ಜ್ ನಿರ್ಮಾಣ ಹಂತದಲ್ಲಿರುವ ಕಾರಣ ಪ್ರಯಾಣಿಕರ ಉತ್ತಮ ಅನುಕೂಲಕ್ಕಾಗಿ ಎಸ್ಕಲೇಟರ್ ಅಥವಾ ಸುರಂಗ ಮಾರ್ಗವನ್ನು ಬಳಸಲು ಅನುಮತಿಸಲಾಗಿದೆ ಎಂದು ರೈಲ್ವೆ ಇಲಾಖೆ ಬೋರ್ಡ್ ಹಾಕಿದೆ. ಇದರಿಂದ ಪ್ರಯಾಣಿಕರು ಅನಿವಾರ್ಯವಾಗಿ ಎಸ್ಕಲೇಟರ್ ಮೂಲಕವೇ ಹೋಗಬೇಕಿದೆ. ಆದರೆ ಎಸ್ಕಲೇಟರ್ ಕೆಟ್ಟು ನಿಂತಿರುವ ಕಾರಣ ಪ್ರಯಾಣಿಕರು ಪ್ರಯಾಸಪಡುತ್ತಿದ್ದಾರೆ. ರೈಲು ಬಂದಾಗ ಒಂದೇ ಬಾರಿಗೆ ನೂರಾರು ಜನರು ಬರುತ್ತಾರೆ. ಎಲ್ಲರೂ ಕಿರಿದಾದ ಎಸ್ಕಲೇಟರ್ ಮೂಲಕವೇ ಬರಬೇಕಿದೆ. ಅದೂ ನಿರ್ಗಮನ ಹಾಗೂ ಆಗಮನ ಎರಡರಲ್ಲೂ ಜನರು ಮೇಲಿನಿಂದ ಕೆಳಗೆ ಬರುತ್ತಾರೆ. ಇದರಿಂದ ಮೇಲ್ಸೇತುವೆ ಮೂಲಕ ಪಕ್ಕದ ಪ್ಲಾಟ್‌ಫಾರ್ಮ್‌ಗಳಿಗೆ ಹೋಗುವ ಪ್ರಯಾಣಿಕರಿಗೆ ತೀವ್ರ ತೊಂದರೆ ಆಗಿದೆ. ರೈಲು ಹೊರಡಲು ಇನ್ನು ಕೆಲವೇ ನಿಮಿಷ ಇರುವಾಗ ಟಿಕೆಟ್ ಖರೀದಿಸಿ ಬರುವ ಪ್ರಯಾಣಿಕರ ಸ್ಥಿತಿ ಅತಂತ್ರವಾಗಿದೆ. ಈ ವಿಳಂಬದಿಂದ ಬಹಳಷ್ಟು ಪ್ರಯಾಣಿಕರಿಗೆ ರೈಲು ಸಿಗದೆ ಮತ್ತೊಂದು ರೈಲಿಗೆ ಕಾಯಬೇಕಾದ ಪರಿಸ್ಥಿತಿ ಬಂದಿದೆ. ಮತ್ತೊಂದು ರೈಲಿಗೆ ತುಂಬಾ ಸಮಯ ಇದ್ದರೆ ಅನಿವಾರ್ಯವಾಗಿ ಬಸ್ಸಿನಲ್ಲಿ ಹೋಗಬೇಕಾದ ಸ್ಥಿತಿ ಎದುರಾಗಿದೆ. ಟಿಕೆಟ್‌ಗೆ ಕೊಟ್ಟ ಹಣ ನಷ್ಟವಾಗುತ್ತಿದೆ. ಎಸ್ಕಲೇಟರ್ ಮೆಟ್ಟಿಲ ತುದಿ ತುಂಬಾ ಚೂಪಾಗಿರುವ ಕಾರಣ ಬಹಳಷ್ಟು ಪ್ರಯಾಣಿಕರು ಕಾಲಿಗೆ ಪೆಟ್ಟು ಮಾಡಿಕೊಳ್ಳುತ್ತಿದ್ದಾರೆ. ಇನ್ನು ಮಕ್ಕಳ ಪಾಡಂತೂ ಹೇಳತೀರದಾಗಿದೆ. ಮೈಸೂರು ರೈಲ್ವೆ ನಿಲ್ದಾಣದ ಸಿಎಫ್‌ಟಿ ಆರ್‌ಐ ಪ್ರವೇಶ ದ್ವಾರದ ಎಸ್ಕಲೇಟರ್‌ನಲ್ಲಿ ಯಾವುದೇ ತೊಂದರೆ ಇಲ್ಲ. ಆದರೆ ಪ್ರಮುಖ ಪ್ರವೇಶ ದ್ವಾರದ ಎಸ್ಕಲೇಟರ್‌ನಿಂದ ಮಾತ್ರ ತೊಂದರೆಯಾಗಿದೆ. ಭಾರವಾದ ಲಗೇಜ್ ಹಿಡಿದು ಬರುವಷ್ಟರಲ್ಲಿ ತುಂಬಾ ಸುಸ್ತಾಯಿತು. ಎಸ್ಕಲೇಟರ್ ತುಂಬಾ ಕಿರಿದಾಗಿದೆ. ಎರಡು ಅಡಿ ಅಗಲವಿರುವ ಎಸ್ಕಲೇಟರ್‌ನಲ್ಲಿ ಇಳಿಯಲು ನಾ ಮುಂದು ತಾ ಮುಂದು ಎಂದು ಎಲ್ಲರೂ ಪೈಪೋಟಿ ನಡೆಸುತ್ತಾರೆ. ಈ ಸಮಯದಲ್ಲಿ ಎಸ್ಕಲೇಟರ್ ಮೆಟ್ಟಿಲುಗಳ ಚೂಪಾದ ತುದಿಯಿಂದ ಕೆಲವರಿಗೆ ಗಾಯವಾಗಿದೆ. ಕೂಡಲೇ ಇದನ್ನು ರಿಪೇರಿ ಮಾಡಿಸಬೇಕು ಎಂದು ಮೈಸೂರಿನ ಜೆ.ಪಿ. ನಗರದ ವಾಸಿ ರಮೇಶ್ ತಿಳಿಸಿದರು. ಎಸ್ಕಲೇಟರ್‌ನಲ್ಲಿ ಏನಾದರೂ ತಾಂತ್ರಿಕ ತೊಂದರೆ ಇದ್ದರೆ ಅದನ್ನು ಕೂಡಲೇ ರಿಪೇರಿ ಮಾಡಿಸಬೇಕು. ಇಲ್ಲವೆಂದರೆ ಮೇಲ್ಸೇತುವೆಯ ಮೆಟ್ಟಿಲುಗಳ ನವೀಕರಣ ಕಾರ್ಯವನ್ನು ಶೀಘ್ರವೇ ಪೂರ್ಣಗೊಳಿಸಬೇಕು. ಇಲ್ಲವೆಂದರೆ ಪ್ರಯಾಣಿಕರು ತುಂಬಾ ತೊಂದರೆ ಅನುಭವಿಸಬೇಕಾಗುತ್ತದೆ.

ಮಣಿಪುರ ಹಿಂಸಾಚಾರ ಖಂಡಿಸಿ ಪ್ರತಿಭಟನೆ



ಮೈಸೂರು,ಜು.17(ಬಿಎಲ್‌ಯು)– ಮಣಿಪುರದಲ್ಲಿ ಕ್ರಿಶ್ಚಿಯನ್ ಸಮುದಾಯದ ಮೇಲೆ ನಡೆಯುತ್ತಿರುವ ಜನಾಂಗೀಯ ದಾಳಿ ಖಂಡಿಸಿ ಮೈಸೂರಿನಲ್ಲಿ ಭಾನುವಾರ ಕ್ರಿಶ್ಚಿಯನ್ಸ್ ಕೇರಿಂಗ್ ಫೋರಂನವರು ಪ್ರತಿಭಟನೆ ನಡೆಸಿದರು.

ಮೈಸೂರಿನ ಗಾಂಧಿ ಪ್ರತಿಮೆ ಮುಂದೆ ಫೋರಂ ಮುಖಂಡ ಸುನೀಲ್ ಜಾಕೋಬ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ನೂರಕ್ಕೂ ಹೆಚ್ಚು ಜನರು ಸೇರಿದ್ದರು. ಮಣಿಪುರದಲ್ಲಿ ಕ್ರಿಶ್ಚಿಯನ್ ಸಮುದಾಯದ ಮೇಲೆ ನಿರಂತರ ದಾಳಿ ನಡೆಯುತ್ತಿದೆ. ಚರ್ಚ್ ಹಾಗೂ ಮನೆಗಳನ್ನು ಧ್ವಂಸ ಮಾಡಲಾಗಿದೆ. ಕಳೆದ 2 ತಿಂಗಳಿಂದ ನಡೆಯುತ್ತಿರುವ ಹಿಂಸಾಚಾರದಲ್ಲಿ ಬಹಳಷ್ಟು ಅಮಾಯಕರು ಪ್ರಾಣ ಕಳೆದುಕೊಂಡಿದ್ದಾರೆ. ಜೊತೆಗೆ ಆಸ್ತಿ ಪಾಸ್ತಿ ಕಳೆದುಕೊಂಡು ಹಲವರು ಬೀದಿಪಾಲಾಗಿದ್ದಾರೆ. ಇಷ್ಟೆಲ್ಲಾ ಆದರೂ ಶಾಂತಿ ಸ್ಥಾಪನೆ ಮಾಡುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಹಿಂಸಾಚಾರಕ್ಕೆ ಕಾರಣರಾದವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಜೊತೆಗೆ ಮಣಿಪುರದಲ್ಲಿ ಶಾಂತಿ ಸ್ಥಾಪನೆ ಮಾಡಬೇಕು ಎಂದು ಕ್ರಿಶ್ಚಿಯನ್ಸ್ ಕೇರಿಂಗ್ ಫೋರಂನವರು ಒತ್ತಾಯಿಸಿದರು.

ನೀವು ಕ್ರೈಸ್ತ ಧರ್ಮವನ್ನು ಸಾಮೂಹಿಕ ವಿನಾಶ ಮಾಡಲು ಸಾಧ್ಯವಿಲ್ಲ. ಕೋಮು ಹಿಂಸಾಚಾರ ಭಾರತೀಯ ಸಂವಿಧಾನದ ವಿರುದ್ಧವಾಗಿದೆ. ಕ್ರೈಸ್ತ ಧರ್ಮದ ವಿರುದ್ಧ ತಾರತಮ್ಯ ನಿಲ್ಲಿಸಿ ಎಂಬ ಘೋಷಣಾ ಫಲಕಗಳನ್ನು ಹಿಡಿದಿದ್ದರು.

ಶಾಸಕ ಟಿ.ಎಸ್.ಶ್ರೀವತ್ಸ ಅವರಿಗೆ ಸನ್ಮಾನ



ಗುಂಡ್ಲುಪೇಟೆ ತಾಲೂಕು ಬ್ರಾಹ್ಮಣ ಸಭಾದಿಂದ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಗೋಪಾಲಕೃಷ್ಣ, ಕಾರ್ಯಾಧ್ಯಕ್ಷ ರಮೇಶ್, ಅಖಿಲ ಕರ್ನಾಟಕ ಬ್ರಾಹ್ಮಣ ಸಭಾದ ವಲಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಕೆ.ಆರ್.ಸತ್ಯನಾರಾಯಣ್, ಭೀಮನಬೀಡು ಶ್ರೀನಿವಾಸ್, ಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಗ್ರಾಮಾಂತರ ಠಾಣಾ ವ್ಯಾಪ್ತಿಯಲ್ಲಿ
ವಾರದಿಂದೀಚೆಗೆ 8 ಕಳವು ಪ್ರಕರಣ ಪತ್ತೆ; 11.72 ಲಕ್ಷ ರೂ. ಮೌಲ್ಯದ ಮಾಲು ವಶ



ಮೈಸೂರು, ಜು.17(ಆರ್‌ಕೆ)–ಮೈಸೂರು ಜಿಲ್ಲಾ ಗ್ರಾಮಾಂತರ ಠಾಣೆಗಳ ವ್ಯಾಪ್ತಿಯಲ್ಲಿ ಕಳೆದೊಂದು ವಾರದಲ್ಲಿ 8 ಕಳವು ಪ್ರಕರಣಗಳನ್ನು ಪತ್ತೆ ಮಾಡಲಾಗಿದ್ದು, 11,72,000 ರೂ. ಮೌಲ್ಯದ ಮಾಲುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಅದೇ ರೀತಿ ಕಳೆದ 4 ದಿನಗಳಲ್ಲಿ 41 ಡ್ರಂಕನ ಡ್ರೈವ್ ಪ್ರಕರಣಗಳನ್ನು ದಾಖಲಿಸಿಕೊಂಡಿರುವ ಪೊಲೀಸರು, 4 ಲಕ್ಷ ರೂ. ದಂಡ ವಸೂಲಿ ಮಾಡಲಾಗಿದೆ. ಜು.12ರಂದು ಇಲವಾಲ ಠಾಣಾ ವ್ಯಾಪ್ತಿಯ ಕೆಬಿಎಲ್ ಗಾರ್ಡೇನಿಯಾ ನಿವಾಸಿ ರಘುನಾಥ್ ಅವರ ಮನೆ ಬೀಗ ಮುರಿದು 145 ಗ್ರಾಂ ಚಿನ್ನಾಭರಣ ಕಳವು ಮಾಡಿದ್ದ ಓರ್ವ ಆರೋಪಿಯನ್ನು ಬಂಧಿಸಿ 6,54,00 ರೂ. ಮೌಲ್ಯದ 119 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ.

4 ದಿನಗಳಲ್ಲಿ 41 ಡ್ರಂಕನ್ ಡ್ರೈವ್ ಪ್ರಕರಣಗಳಲ್ಲಿ 4 ಲಕ್ಷ ದಂಡ ವಸೂಲಿ

ಕೆ.ಆರ್.ನಗರ ತಾಲೂಕಿನ 3 ಪ್ರಕರಣಗಳಲ್ಲಿ ಕಳವಾಗಿದ್ದ 8 ಹಸುಗಳ ಪೈಕಿ 2,75,000 ರೂ. ಬೆಲೆಬಾಳುವ 6 ಹಸುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಆರೋಪಿಯನ್ನು ಬಂಧಿಸಲಾಗಿದೆ. ಪಿರಿಯಾಪಟ್ಟಣ ತಾಲೂಕು ಅಂಕನಹಳ್ಳಿ ಗ್ರಾಮದ ಸೈಯದ್ ಅಯಾಜ್ ಎಂಬುವರ ಅಂಗಡಿ ಬೀಗ ಮುರಿದು 1,50,000 ರೂ. ಮೌಲ್ಯದ ಮೋಟಾರು ಬಿಡಿ ಭಾಗಗಳನ್ನು ಕಳವು ಮಾಡಲಾಗಿದ್ದು, ಪ್ರಕರಣದ ತನಿಖೆ ನಡೆಸಿದ ಬೆಟ್ಟದಪುರ ಠಾಣೆ ಪೊಲೀಸರು, 3 ಆರೋಪಿಗಳನ್ನು ಬಂಧಿಸಿ 1 ಲಕ್ಷ ರೂ. ಮೌಲ್ಯದ ಮಾಲುಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರು ತಾಲೂಕು ಹೊಸಕೋಟೆ ಗ್ರಾಮದ ಸ್ವಾಮಿಗೌಡ ಎಂಬುವರ ಮನೆಯಿಂದ 4 ಟಗರು ಮತ್ತು 35 ಪಾರಿವಾಳಗಳನ್ನು ಕಳವು ಮಾಡಿದ ಆರೋಪಿಯನ್ನು ಬಂಧಿಸಿದ ಇಲವಾಲ ಠಾಣೆ ಪೊಲೀಸರು, 1,30,000 ರೂ. ಮೌಲ್ಯದ 3 ಟಗರು ಹಾಗೂ 35 ಪಾರಿವಾಳಗಳನ್ನು ವಶಪಡಿಸಿಕೊಂಡಿದ್ದಾರೆ.

ನಂಜನಗೂಡು ತಾಲೂಕು, ರಾಮಚಂದ್ರ ಅವರ ಜಮೀನಿನಲ್ಲಿ 2 ರೋಲ್ ಡ್ರಿಪ್ ಪೈಪ್ ಕಳವು ಮಾಡಿದ್ದ ಆರೋಪಿ ಪತ್ತೆ ಮಾಡಿರುವ ಹುಲ್ಲಹಳ್ಳಿ ಠಾಣೆ ಪೊಲೀಸರು, ಆತನಿಂದ ಮಾಲುಗಳನ್ನು ವಶಪಡಿಸಿಕೊಂಡಿದ್ದಾರೆ. ಬಿಳಿಕೆರೆಯ ದಾಸ್ತಿಕೊಳ ಸರ್ಕಲ್ ಬಳಿ ಗಾಂಜಾ ಸೊಪ್ಪು ಮಾರುತ್ತಿದ್ದ ಮೂವರನ್ನು ಬಂಧಿಸಿರುವ ಪೊಲೀಸರು, 10,000 ರೂ. ಮೌಲ್ಯದ 500 ಗ್ರಾಂ ಗಾಂಜಾ ಸೊಪ್ಪನ್ನು ವಶಕ್ಕೆ ಪಡೆದಿದ್ದಾರೆ. ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ 4 ದಿನಗಳಿಂದ ಕಾರ್ಯಾಚರಣೆ ನಡೆಸಿದ ಪೊಲೀಸರು, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ 41 ಪ್ರಕರಣ ದಾಖಲಿಸಿ 4 ಲಕ್ಷ ರೂ. ದಂಡ ವಸೂಲು ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ಪ್ರಕಟಣೆ ತಿಳಿಸಿದೆ.

ಸಿನಿಮಾ ಸ್ಕ್ರಿಪ್ಟ್ ಬರವಣಿಗೆ: ಜು.30, ಕಾರ್ಯಾಗಾರ

ಮೈಸೂರು,ಜು.17–ಮೈಸೂರು ಸಿನಿಮಾ ಸೊಸೈಟಿ ವತಿಯಿಂದ ಜು.30ರಂದು ಸಿನಿಮಾ ಸ್ಕ್ರಿಪ್ಟ್ ಬರವಣಿಗೆ ಕುರಿತ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ. ಕನ್ನಡ ಸಿನಿಮಾ ಲೋಕದ ನಿರ್ದೇಶಕಿ–ಬರಹಗಾರ್ತಿ ಶ್ರೇಯಾ ಕಾರ್ಯಾಗಾರ ನಡೆಸಿಕೊಡಲಿದ್ದಾರೆ. ಲಕ್ಷ್ಮೀಪುರಂನ ಗೋಪಾಲಸ್ವಾಮಿ ಶಿಶು ವಿಹಾರದಲ್ಲಿ ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಈ ಕಾರ್ಯಾಗಾರ ನಡೆಯಲಿದೆ. ಮಾಹಿತಿಗೆ 9980596824 ಸಂಪರ್ಕಿಸಬಹುದು.

ಜು.21ರಂದು ಉಚಿತ ಮೂಳೆ ಸಾಂದ್ರತೆ ತಪಾಸಣಾ ಶಿಬಿರ

ಮೈಸೂರು, ಜು. 17 – ಮೈಸೂರಿನ ವಿಜಯನಗರದಲ್ಲಿರುವ ದೀಕ್ಷಿತ್ ಆರೋಗ್ಯ ಧಾಮದಲ್ಲಿ ಜು.21ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 1.30ರವರೆಗೆ ಉಚಿತ ಮೂಳೆ ಸಾಂದ್ರತೆ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ.0821–2511619, ಮೊ. 6361 815724 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.7.2023 ಮಂಗಳವಾರ, ಮಳೆ ನಕ್ಷತ್ರ: ಭರಣಿ 06.07.2023ರಿಂದ 19.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಶಂಕರ ಕಣ್ಣಿನ ಆಸ್ಪತ್ರೆ, ಬೆಂಗಳೂರು, ಜಿಲ್ಲಾ ಅಂಧತ್ವ ನಿಯಂತ್ರಣಾ ಸಂಸ್ಥೆ, ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆ :** ಉಚಿತ ನೇತ್ರ ಶಸ್ತ್ರಚಿಕಿತ್ಸಾ ಶಿಬಿರ, ಸ್ಥಳ: ಸರ್ಕಾರಿ ಆಸ್ಪತ್ರೆ, 6ನೇ ಕ್ರಾಸ್, ಅಶೋಕಪುರಂ, ಬೆಳಗ್ಗೆ 9ರಿಂದ.
- **ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜು:** ರಾಷ್ಟ್ರ ಮಟ್ಟದ ಮಹಾಮ್ 2023 ಫೆಸ್ಟ್, ಸ್ಥಳ: ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10 ರಿಂದ.
- **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.
- **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತಿ ಆಚರಣಾ ಸಮಿತಿ :** ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತಿ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾರ್ಯಕ್ರಮ ಉದ್ಘಾಟನೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು: ರೇಷ್ಮೆ ಸಚಿವ ಕೆ.ವೆಂಕಟೇಶ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್‌ಪ್ರಸಾದ್, ಸುಮಲತಾ ಅಂಬರೀಷ್, ಅತಿಥಿಗಳು: ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಎಚ್.ವಿಶ್ವನಾಥ್, ಮರಿತಿಬ್ಬೇಗೌಡ, ಸಿ. ಅನಿಲ್‌ಕುಮಾರ್, ಡಾ. ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಡಿ.ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಟಿ.ಎಸ್.ಶ್ರೀವತ್ಸ, ಉಪಮೇಯರ್ ಡಾ.ಜಿ.ರೂಪ, ಮುಖ್ಯ ಭಾಷಣಕಾರರು: ಕವಿ ಡಾ.ಜಯಪ್ಪ ಹೊನ್ನಾಳಿ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು :** ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಸಂಸ್ಕೃತಿ ಚಿಂತಕ ಶಂಕರ ದೇವನೂರು, ಅಧ್ಯಕ್ಷತೆ : ಪ್ರಾದೇಶಿಕ ಹೆಚ್ಚುವರಿ ಆಯುಕ್ತ ಪಿ. ಶಿವರಾಜು, ಮುಖ್ಯ ಅತಿಥಿಗಳು : ಅಂತಾರಾಷ್ಟ್ರೀಯ ಹಾಕಿ ಕ್ರೀಡಾಪಟು ಶ್ರೀಮತಿ ನೀಲನ್ ಪೂಣಚ್ಚ, ಸ್ಥಳ: ನವಜ್ಯೋತಿ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ.ಟಿ.ಎಸ್.ಗೋಪಾಲ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಕೆ.ಎಲ್. ಪದ್ಮಿನಿ ಹೆಗಡೆ, 7.15 ಕಾದಂಬರಿ ವಿಹಾರ–ನಾ ಕಸ್ತೂರಿಯವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 8.30 ಕರೆಗೊಂದು ಗೀತೆ, 9.05 ವಸುದೈವ ಕುಟುಂಬಕಂ–ಭಾರತ ಜಿ–20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಬಾಂಬೆ ಎಸ್. ಜಯಶ್ರೀ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.00 ವನಿತಾ ವಿಹಾರ, 12.30 ದೇವರನಾಮ–ಸಿ.ಎಸ್. ಲಕ್ಷ್ಮಿ, 12.45 ಕೌಶಲ ಹಾಗೂ ಉದ್ಯೋಗ–ರಾಜೇಂದ್ರ ಪ್ರಸಾದ್ ಅವರೊಡನೆ ಸಂದರ್ಶನ ಸಂದರ್ಶಕರು ದಿವಾಕರ ಹೆಗಡೆ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಕೆ.ಶ್ರೇಯಾ ಭಟ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಅನಯಂಪಟ್ಟಿ ಎಸ್.ದಂಡಪಾಣಿ–ಜಲತರಂಗ ವಾದನ, 4.00 ಕಥಾ ಕಾಲಕ್ಷೇಪ–ದಶಾವತಾರ–ವಿದ್ವಾನ್ ಸಂತ ಕೇಶವದಾಸರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್‌ವಾಣಿ, ಸಿರಿಧಾನ್ಯಗಳ ಬೇಸಾಯ ಕುರಿತು ಸಿ.ಪಿ.ಕೃಷ್ಣ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 9.30 ಎಂ. ಚಂದ್ರ ಶೇಖರನ್–ವಯೋಲಿನ್ ವಾದನ, 10.00 ಗಮಕ ವ್ಯಾಖ್ಯಾನ, ವಾಚನ–ಕೆ.ಆರ್.ಸತ್ಯಲಕ್ಷ್ಮಿ, ವ್ಯಾಖ್ಯಾನ–ಮಂಜುಳಾ ನಾಗರಾಜ್, 10.30 ಸವಿನೆನಪು.

ದಲಿತರ ಜಮೀನು ಹಕ್ಕು ಪರಭಾರೆ, ನಿಷೇಧಕ್ಕೆ ಕಟ್ಟುನಿಟ್ಟಾಗಿ ಜಾರಿ

● ಮುಖ್ಯಮಂತ್ರಿ ಸಿದ್ದರಾಮಯ್ಯ ದೃಢ ನುಡಿ ● ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ಸಂಬಂಧ ಸಂಘಟನೆಗಳೊಂದಿಗೆ ಸಭೆ



ಬೆಂಗಳೂರು, ಜು.17(ಕೆಎಂಶಿ)–ದಲಿತರ ಜಮೀನು ಹಕ್ಕು ಪರಭಾರೆ ನಿಷೇಧವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ವಿಷಯದಲ್ಲಿ ಯಾವುದೇ ಬಹಿರಂಗ ಒತ್ತಡಕ್ಕೆ ಮಣಿಯುವುದಿಲ್ಲ. ಈ ವಿಚಾರದಲ್ಲಿ ನಮ್ಮ ಕಾಳಜಿಗಳ ಜತೆ ರಾಜೀ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಖಚಿತವಾಗಿ ನುಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಪಿಟಿಸಿಎಲ್ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದಂತೆ ವಿವಿಧ ಸಂಘಟನೆಗಳ ಪ್ರತಿನಿಧಿಗಳು, ಸಚಿವರು, ಹಿರಿಯ ಅಧಿಕಾರಿಗಳು ಹಾಗೂ ಕಾನೂನು ತಜ್ಞರೊಂದಿಗೆ ಸಭೆ ನಡೆಸಿ ಚರ್ಚಿಸಿದ ಬಳಿಕ ಮಾತನಾಡಿದರು. ದಲಿತರ ಜಮೀನು ಹಕ್ಕು ಕಾಪಾಡುವ ನಿಟ್ಟಿನಲ್ಲಿ ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ಮಾಡುವ ಕುರಿತ ಸರ್ಕಾರದ ನಿಲುವನ್ನು ಆಯವ್ಯಯದಲ್ಲಿಯೂ ಸ್ಪಷ್ಟಪಡಿಸಲಾಗಿದೆ. ಪ್ರಸ್ತುತ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದಲ್ಲಿಯೇ ಕಾಯ್ದೆ ತಿದ್ದುಪಡಿ ಮಾಡುವ ಉದ್ದೇಶದಿಂದ ಸಮುದಾಯದ ಮುಖಂಡರ ಅಭಿಪ್ರಾಯ ಪಡೆಯಲು ಈ ಸಭೆ ಕರೆಯಲಾಗಿತ್ತು ಎಂದು ವಿವರಿಸಿದರು.

ಯಾವುದೇ ವಿವಾದ ಇರಬಾರದು, ಪಿಟಿಸಿಎಲ್ ಕಾಯ್ದೆಯ ಉದ್ದೇಶ ಪರಿಣಾಮಕಾರಿಯಾಗಿ ಈಡೇರಬೇಕು, ಭೂಮಿ ಕಳೆದುಕೊಂಡವರಿಗೆ ನ್ಯಾಯಾಲಯದಲ್ಲಿ ಹಿನ್ನಡೆ ಆಗಬಾರದು ಎನ್ನುವ ಉದ್ದೇಶದಿಂದ ಈ ಬಗ್ಗೆ ದಲಿತ ಮುಖಂಡರ ಮತ್ತು ನ್ಯಾಯವಾದಿಗಳ ಅಭಿಪ್ರಾಯ ಕೇಳಿದ್ದೇನೆ. ಕಾನೂನು ತಜ್ಞರ ಅಭಿಪ್ರಾಯವನ್ನೂ ಪಡೆದುಕೊಳ್ಳುತ್ತೇವೆ ಎಂದರು. ನಾವು ಮೊದಲೇ ಕೊಟ್ಟಿದ್ದ ಭರವಸೆ ಯಂತೆ ಈ ಸರ್ಕಾರದ ಮೊದಲನೆ ಅಧಿವೇಶನದಲ್ಲೇ ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದ್ದೇವೆ ಎಂದರು.


ಎನ್‌ಡಿಎ ಸಭೆಗೆ ಆಹ್ವಾನ ಬಂದರೆ ಹೋಗುತ್ತೇನೆ

ಕೇಂದ್ರ ಸಚಿವ ಸ್ಥಾನ, ವಿಪಕ್ಷ ಸ್ಥಾನ ನನಗೆ ಬೇಡ; ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ

ಬೆಂಗಳೂರು: ಎನ್‌ಡಿಎ ಸಭೆಗೆ ಆಹ್ವಾನ ನೀಡಿದರೆ ನಾನು ಸಭೆಗೆ ಹೋಗುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್‌ಡಿ ಕುಮಾರಸ್ವಾಮಿ ತಿಳಿಸಿದ್ದಾರೆ.

ಬಿಜೆಪಿ ಜೊತೆ ದೋಸ್ತಿ ಬಗ್ಗೆ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ ಕುಮಾರಸ್ವಾಮಿ, ಎನ್‌ಡಿಎ ಮತ್ತು ಯುಪಿಎ ಸಭೆಗೆ ಇನ್ನೂ ನನಗೆ ಆಹ್ವಾನ ಬಂದಿಲ್ಲ. ಯುಪಿಎ ಸಭೆಗೆ ಆಹ್ವಾನ ಬಂದರೂ ನಾವು ಹೋಗಲ್ಲ. ಎನ್‌ಡಿಎ ಸಭೆಗೆ ಆಹ್ವಾನ ಬಂದರೆ ಹೋಗಿ ಚರ್ಚೆ ಮಾಡುತ್ತೇನೆ ಎಂದು ಸ್ಪಷ್ಟಪಡಿಸಿದರು.

ಕುಮಾರಸ್ವಾಮಿ ಬಿಜೆಪಿ ಜೊತೆ ದೋಸ್ತಿ ಮಾಡಿಕೊಂಡರೆ ಕೇಂದ್ರ ಸಚಿವ ಸ್ಥಾನ, ವಿರೋಧ ಪಕ್ಷದ ಸ್ಥಾನ ನೀಡಬಹುದು ಎಂಬ ಚರ್ಚೆಗೆ ಉತ್ತರ ನೀಡಿದ ಅವರು, ನನಗೆ ಕೇಂದ್ರ ಸಚಿವ ಸ್ಥಾನ ಅಥವಾ ವಿಪಕ್ಷ ಸ್ಥಾನದ ಅವಶ್ಯಕತೆ ಇಲ್ಲ. ಅದರ ಚರ್ಚೆಯೂ ಮಾಡಲ್ಲ. ಬಿಜೆಪಿಯಲ್ಲಿ ಸಮರ್ಥರು ಇದ್ದಾರೆ. ಅವರನ್ನು ವಿರೋಧ ಪಕ್ಷದ ನಾಯಕರಾಗಿ ಆಯ್ಕೆ ಮಾಡಿ ಎಂದು ಕೇಂದ್ರದ ನಾಯಕರಿಗೆ ಹೇಳುತ್ತೇನೆ ಎಂದು ಹೇಳಿದರು.



ನನಗೆ ವಿಪಕ್ಷ ನಾಯಕನ ಆಸೆ ಇಲ್ಲ. ಜನರ ಕೊಟ್ಟ ಸ್ಥಾನದಲ್ಲಿ ಕೂರಲು ನಾನು ಸಿದ್ಧ. ಕೇಂದ್ರದ ಬಿಜೆಪಿ ನಾಯಕರು ಕರೆದರೆ ಹೋಗಿ ಮಾತನಾಡುತ್ತೇನೆ. ಲೋಕ ಸಭೆಗೆ ಜೊತೆಗೆ ಹೋಗುವ ಬಗ್ಗೆ ಆಹ್ವಾನ ಬಂದರೆ ಹೋಗಿ ಚರ್ಚೆ ಮಾಡುತ್ತೇವೆ ಎಂದರು.

ಎನ್‌ಡಿಎ ಮೈತ್ರಿಕೂಟ: ಪ್ರಸ್ತುತ ಎನ್‌ಡಿಎ ಮೈತ್ರಿಕೂಟ 24 ಪಕ್ಷಗಳನ್ನು ಹೊಂದಿದೆ. ಬಿಜೆಪಿ, ಎಐಎಡಿಎಂಕೆ, ಶಿವಸೇನೆ (ಏಕನಾಥ್ ಶಿಂಧೆ ಬಣ), ಎನ್‌ಪಿಪಿ (ನ್ಯಾಷನಲ್ ಪೀಪಲ್ಸ್ ಪಾರ್ಟಿ), ಎನ್‌ಡಿಪಿಪಿ (ನ್ಯಾಷನಲಿಸ್ಟ್ ಡೆಮಾಕ್ರಟಿಕ್ ಪ್ರೋಗ್ರೆಸಿವ್ ಪಾರ್ಟಿ), ಎಸ್‌ಕೆಎಂ (ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ), ಜೆಜೆಪಿ (ಜನನಾಯಕ್ ಜನತಾ ಪಾರ್ಟಿ), ಐಎಂಕೆಎಂಕೆ (ಭಾರತೀಯ ಮಕ್ಕಳ್ ಕಲ್ವಿ ಮುನ್ನೇತ್ರ ಕಜ್ಗಮ್), AJSU (ಆಲ್ ಜಾರ್ಖಂಡ್ ಸ್ಟೂಡೆಂಟ್ಸ್ ಯೂನಿಯನ್), RPI (ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ), MNF (ಮಿಜೋ ನ್ಯಾಷನಲ್ ಫ್ರಂಟ್), TMC (ತಮಿಳು ಮನಿಲಾ ಕಾಂಗ್ರೆಸ್), IPFT (ತ್ರಿಪುರ), BPP (ಬೋಡೋ ಪೀಪಲ್ಸ್ ಪಾರ್ಟಿ), PMK (ಪಾಟಲಿ ಮಕ್ಕಳ್ ಕಚ್ಚಿ), ಎಂಜಿಪಿ (ಮಹಾಸ್ತ್ರವಾದಿ ಗೋಮಾಂತಕ್ ಪಾರ್ಟಿ), ಅಪ್ನಾ ದಳ, ಎಜೆಪಿ (ಅಸ್ಸಾಂ ಗಣ ಪರಿಷತ್), ರಾಷ್ಟ್ರೀಯ ಲೋಕ ಜನಶಕ್ತಿ ಪಕ್ಷ, ನಿಶಾದ್ ಪಾರ್ಟಿ, ಯುಪಿಪಿಎಲ್ (ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್), ಎಐಆರ್‌ಎನ್‌ಸಿ (ಅಖಿಲ ಭಾರತ ಎನ್‌ಆರ್ ಕಾಂಗ್ರೆಸ್ ಪುದುಚೇರಿ), ಶಿರೋಮಣಿ ಅಕ್ಕುಚೇರಿ ದಲ್ ಸಾಯುಂಕ್ತ (ಧಿಂಧ್ಸಾ), ಮತ್ತು ಜನಸೇನಾ (ಪವನ್ ಕಲ್ಯಾಣ್).

ಚಾಮುಂಡೇಶ್ವರಿ ದರ್ಶನ ಪಡೆದ ಬಾಲಿವುಡ್ ನಟ ಸಂಜಯ್ ದತ್



ಮೈಸೂರು, ಜು.17(ಸಿಎನ್)–ಬಾಲಿವುಡ್ ನಟ ಸಂಜಯ್ ದತ್, ಜೋಗಿ ನಿರ್ದೇಶಕ ಪ್ರೇಮ್, ನಟ ಶೋಭರಾಜ್ ಹಾಗೂ ಕೆಡಿ–(ದಿ ಡೆವಿಲ್) ಚಿತ್ರತಂಡ ಸೋಮವಾರ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ, ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಮಾಧ್ಯಮಗಳ ಜೊತೆ ನಟ ಸಂಜಯ್ ದತ್ ಮಾತನಾಡಿ, ತಾಯಿ ದರ್ಶನ ಪಡೆಯಲು ಇಂದು ಕಾಲ ಕೂಡಿ ಬಂದಿದೆ. ಆ ತಾಯಿಯೇ ನನ್ನನ್ನು ಕರೆಸಿಕೊಂಡಿದ್ದಾರೆ. ಮಾತೆಯ ದರ್ಶನದಿಂದ ತುಂಬಾ ಖುಷಿಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಚಿತ್ರದ ಬಗ್ಗೆ ಕೇಳಿದ ಪ್ರಶ್ನೆಗೆ, ಕೆಜಿಎಫ್–2 ಅಧೀರಾ ಪಾತ್ರದ ಬಳಿಕ ಕನ್ನಡ ಚಿತ್ರ ಕೆಡಿ ಸಿನಿಮಾ ಮಾಡುತ್ತಿರುವುದು ಖುಷಿಯ ವಿಚಾರ. ಸಿನಿಮಾ ಚೆನ್ನಾಗಿ ಮೂಡಿಬರುತ್ತಿದೆ. ಪ್ರೇಮ್ ಉತ್ತಮ ನಿರ್ದೇಶಕ ಎಂದು ಹಾಡಿ ಹೊಗಳಿದರು.

ನಂತರ ಕೆಡಿ ಚಿತ್ರದ ನಿರ್ದೇಶಕ ಜೋಗಿ ಪ್ರೇಮ್ ಮಾತನಾಡಿ, ಶೀಘ್ರದಲ್ಲೇ ಸಿನಿಮಾ ಬಗ್ಗೆ ಸಿಹಿ ಸುದ್ದಿ ನೀಡಲಿದ್ದೇವೆ. ಬೇಗನೆ ಚಿತ್ರಮಂದಿರಕ್ಕೆ ಬರುತ್ತೇವೆ ಎಂದರು. ಇದೇ ಪ್ರಶ್ನೆಗೆ ಧ್ವನಿಗೂಡಿಸಿದ ನಟ ಶೋಭರಾಜ್, ಪ್ರೇಮ್ ಅಂದ್ರೆ ಸಸ್ಪೆನ್ಸ್, ಥ್ರಿಲ್ಲರ್, ಸೆಂಟಿಮೆಂಟ್ ಎಲ್ಲವೂ ಇರಲಿದೆ ಎಂದರು.

ನೂಕುನುಗ್ಗಲು: ಇದೇ ಮೊದಲ ಬಾರಿಗೆ ಬಾಲಿವುಡ್ ನಟ ಸಂಜಯ್ ದತ್ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿದ್ದ ಹಿನ್ನೆಲೆ ನೆಚ್ಚಿನ ನಟನನ್ನು ನೋಡಲು ನೂರಾರು ಮಂದಿ ಅಭಿಮಾನಿಗಳು ಜಮಾಯಿಸಿದ್ದ ಕಾರಣ, ಕೆಲಕಾಲ ನೂಕುನುಗ್ಗಲು ಏರ್ಪಟ್ಟಿತ್ತು. ಬಳಿಕ ಪೊಲೀಸರು ಎಲ್ಲರ ಹಿಂದೆ ಸರಿಸಿ ನಟರು ತೆರಳಲು ಅನುವು ಮಾಡಿಕೊಟ್ಟರು.

ವಿದೇಶಾಂಗ ಸಚಿವ ಜೈಶಂಕರ್ ಸೇರಿ 11 ಮಂದಿ ರಾಜ್ಯಸಭೆಗೆ ಅವಿರೋಧ ಆಯ್ಕೆ



ನವದೆಹಲಿ: ವಿದೇಶಾಂಗ ಸಚಿವ ಎಸ್ ಜೈಶಂಕರ್ ಸೇರಿದಂತೆ ಒಟ್ಟು 11 ಮಂದಿ ಅಭ್ಯರ್ಥಿಗಳು ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗುಜರಾತ್‌ನಿಂದ ಬಿಜೆಪಿ ಅಭ್ಯರ್ಥಿಗಳಾದ ಎಸ್.ಜೈಶಂಕರ್, ಬಾಬು ಭಾಯ್ ದೇಸಾಯಿ ಮತ್ತು ಕೇಸರಿದೇವ್ ಸಿಂಗ್ ಝಾಲಾ ಆಯ್ಕೆಯಾಗಿದ್ದಾರೆ. ಇದರೊಂದಿಗೆ, ಎಸ್.ಜೈಶಂಕರ್ 2ನೇ ಬಾರಿಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದಂತಾಗಿದೆ.

ಗುಜರಾತ್‌ನ 3 ಸ್ಥಾನಗಳು, ಗೋವಾದ 1 ಸ್ಥಾನ ಮತ್ತು ಪಶ್ಚಿಮ ಬಂಗಾಳದ 6 ಸ್ಥಾನಗಳಿಗೆ ಜು. 24ರಂದು ಚುನಾವಣೆ ನಡೆಯಬೇಕಿತ್ತು. ಚುನಾವಣೆಗೆ ನಾಮಪತ್ರ ಹಿಂಪಡೆಯಲು ಜುಲೈ 17 ಕೊನೆಯ ದಿನಾಂಕವಾಗಿತ್ತು.

ನಾಮಪತ್ರ ಸಲ್ಲಿಸಿದ್ದ ಸ್ಥಾನಗಳಿಗೆ ಎದುರಾಳಿ ಅಭ್ಯರ್ಥಿಗಳೇ ಇಲ್ಲದ ಕಾರಣ ಎಲ್ಲ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹೀಗಾಗಿ ಫಲಿತಾಂಶವನ್ನು ಇಂದೇ ಘೋಷಿಸಲಾಗಿದೆ. ಟಿಎಂಸಿಯ ಸುಖೇಂದು ಶೇಖರ್ ರಾಯ್, ಡೋಲಾ ಸೋನಾ, ಸಾಕೇತ್ ಗೋಖಲೆ, ಸಮೀರುಲ್ ಇಸ್ಲಾಂ, ಪ್ರಕಾಶ್ ಬಾರಿಕ್, ಡೆರೆಕ್ ಒ'ಬ್ರಯಾನ್ ಅವಿರೋಧ ಆಯ್ಕೆಯಾಗಿದ್ದಾರೆ. ಪ್ರಸ್ತುತ, ಎನ್‌ಡಿಎ ಮೈತ್ರಿಕೂಟವು ರಾಜ್ಯಸಭೆಯಲ್ಲಿ ಒಟ್ಟು 105 ಸದಸ್ಯರನ್ನು ಹೊಂದಿದೆ. ಇಬ್ಬರು ಸ್ವತಂತ್ರ ಸದಸ್ಯರು ಮತ್ತು ಐದು ನಾಮನಿರ್ದೇಶಿತ ಸಂಸದರ ಬೆಂಬಲವನ್ನು ಕೋರುತ್ತಿದ್ದು, ನಂತರ ಬಿಜೆಪಿ ಸದಸ್ಯರ ಸಂಖ್ಯೆ 112ಕ್ಕೆ ಏರಿಕೆಯಾಗಲಿದೆ.

ಡಾ.ಎಲ್.ರವಿ ಅವರಿಗೆ ಸನ್ಮಾನ



ಮೈಸೂರು, ಜು.17(ಎಸ್‌ಪಿಎನ್)–ನಗರದ ಜಯಲಕ್ಷ್ಮೀಪುರಂನಲ್ಲಿರುವ ಆರೋಗ್ಯ ಇಲಾಖೆಯ ಜಿಲ್ಲಾ ತರಬೇತಿ ಕೇಂದ್ರದ ಪ್ರಾಂಶುಪಾಲ ಹಾಗೂ 'ಶ್ರೇಷ್ಠ ವೈದ್ಯ ಪ್ರಶಸ್ತಿ'ಗೆ ಭಾಜನರಾದ ಡಾ.ಎಲ್.ರವಿ ಅವರನ್ನು ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದಿಂದ ಸನ್ಮಾನಿಸಲಾಯಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ನೀಡಲಾದ ಪ್ರಶಸ್ತಿಯನ್ನು ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಸ್ವೀಕರಿಸಿದ್ದರು. ನಂತರ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಪಡುವಾರಹಳ್ಳಿ ಮರಿಸ್ವಾಮಿ ಮಾತನಾಡಿ, ರವಿ ಅವರು 25 ವರ್ಷಗಳಿಂದ ಆರೋಗ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಸನದಲ್ಲಿ ಆಡಳಿತ ವೈದ್ಯಾಧಿಕಾರಿಯಾಗಿ, ಎಚ್.ಡಿ.ಕೋಟೆ ತಾಲೂಕು ಮತ್ತು ಪಿರಿಯಾಪಟ್ಟಣದ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಮುಖ್ಯ ಆಡಳಿತ ವೈದ್ಯಾಧಿಕಾರಿಯಾಗಿ, ಮೈಸೂರು ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಜಿಲ್ಲಾ ಕೋವಿಡ್–19 ವಾರ್ ರೂಂ. ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ಇಂತಹವರಿಗೆ 'ಶ್ರೇಷ್ಠ ವೈದ್ಯ ಪ್ರಶಸ್ತಿ' ನೀಡಿ ಗೌರವಿಸಿದ ಸರ್ಕಾರಕ್ಕೆ ಜಿಲ್ಲಾ ಒಕ್ಕಲಿಗರ ಸಂಘದಿಂದ ಅಭಿನಂದನೆ ಸಲ್ಲಿಸಲಾಗುವುದು ಎಂದರು.

ಈ ವೇಳೆ ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಉಪಾಧ್ಯಕ್ಷ ರವಿ, ನಿರ್ದೇಶಕರಾದ ಎ.ರವಿ, ಗುರುರಾಜ್, ಮೈಸೂರು ರಕ್ಷಣಾ ವೇದಿಕೆ ಉಪಾಧ್ಯಕ್ಷ ಕುಮಾರ್ ಗೌಡ, ಸಿ.ಜೆ.ಪಾಲಾಕ್ಷ, ಉದ್ಯಮಿ ಅರುಣ್, ಪೇಪರ್ ಕೃಷ್ಣ ಉಪಸ್ಥಿತರಿದ್ದರು.

ಪಿಯು ವಿದ್ಯಾರ್ಥಿಗಳಿಗೆ 20 ಇಂಟರ್ನಲ್ ಮಾರ್ಕ್ಸ್

ಬೆಂಗಳೂರು: ಪದವಿ ಪೂರ್ವ ಕಾಲೇಜುಗಳಲ್ಲಿ ಆಂತರಿಕ ಅಂಕಗಳ ಅಳವಡಿಕೆಗೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆ ನೀಡಿದ ಪ್ರಸ್ತಾವನೆಯನ್ನು ಅನುಸರಿಸಿ, ಒಂದು ವಿಷಯದಲ್ಲಿ ಒಟ್ಟು 100 ಅಂಕಗಳಲ್ಲಿ 20 ಅಂಕಗಳನ್ನು ಆಂತರಿಕ ಅಂಕಗಳಾಗಿ ಪರಿಗಣಿಸಿ ಸರ್ಕಾರ ಆದೇಶ ಹೊರಡಿಸಿದೆ.

ಡಿಪಿಯುಇಯ ಅಧಿಸೂಚನೆ ಪ್ರಕಾರ, ಸಮಗ್ರ ಮೌಲ್ಯಮಾಪನದ ಭಾಗವಾಗಿ ಆಂತರಿಕ ಅಂಕಗಳನ್ನು ಪರಿಚಯಿಸಲಾಗುತ್ತಿದೆ. ಇದು ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ರಸಪ್ರಶ್ನೆಗಳು ಮತ್ತು ಮಧ್ಯಾವಧಿಯ ಪರೀಕ್ಷೆಗಳ ಗಂಭೀರತೆ ಹೆಚ್ಚಿಸುತ್ತದೆ. ಆಂತರಿಕ ಮೌಲ್ಯಮಾಪನಗಳು ಪರೀಕ್ಷಾ ಆತಂಕ ಮತ್ತು ಒತ್ತಡವನ್ನು ಕಡಿಮೆ ಮಾಡುತ್ತದೆ. ವಿದ್ಯಾರ್ಥಿಗಳ ಅವಲೋಕನಗಳು ನಿರಂತರವಾಗಿರುತ್ತವೆ ಮತ್ತು ಕಲಿಕೆಯನ್ನು ಸುಧಾರಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆ ಎಂದರು.

ಆಂತರಿಕ ಅಂಕಗಳು ಎಲ್ಲಾ ವಿಷಯಗಳಲ್ಲಿ ಏಕರೂಪತೆಯನ್ನು ತರಲು ಉದ್ದೇಶಿಸಲಾಗಿದೆ. ಆರಂಭದಲ್ಲಿ,



ವಿಜ್ಞಾನ ವಿಷಯಗಳನ್ನು 70 ಅಂಕಗಳ ಥಿಯರಿ ಪತ್ರಿಕೆ ಮತ್ತು 30 ಅಂಕಗಳ ಪ್ರಾಯೋಗಿಕ ಪತ್ರಿಕೆ ಎಂದು ವಿಂಗಡಿಸಲಾಗಿದೆ. ಆದರೆ ಪ್ರಾಯೋಗಿಕತೆಯನ್ನು ಹೊಂದಿರದ ಇತರ ವಿಷಯಗಳನ್ನು 100 ಅಂಕಗಳ ಸಿದ್ಧಾಂತದ ಪತ್ರಿಕೆಯಲ್ಲಿ ಗುರುತಿಸಲಾಗುತ್ತದೆ. ಇದನ್ನು ಈಗ ಬದಲಾಯಿಸಲಾಗಿದ್ದು, ಪ್ರಾಯೋಗಿಕವಲ್ಲದ ವಿಷಯಗಳನ್ನು 80 ಅಂಕಗಳ ಥಿಯರಿ ಪೇಪರ್ ಮತ್ತು 20 ಅಂಕಗಳ ಆಂತರಿಕ ಮೌಲ್ಯಮಾಪನದಲ್ಲಿ ಗುರುತಿಸಲಾಗುತ್ತದೆ. ಎರಡು ಯುನಿಟ್ ಪರೀಕ್ಷೆಗಳಲ್ಲಿ ಉತ್ತಮವಾದ ಸರಾಸರಿಯಿಂದ ಹತ್ತು ಅಂಕಗಳನ್ನು ತೆಗೆದುಕೊಳ್ಳಲಾಗುತ್ತದೆ. ಅದನ್ನು ಮಧ್ಯಾವಧಿ ಪರೀಕ್ಷೆಯೊಂದಿಗೆ ಸಂಯೋಜಿಸಲಾಗುತ್ತದೆ. ಉಳಿದ ಅರ್ಧವನ್ನು ವಿದ್ಯಾರ್ಥಿಗಳಿಗೆ ಗುರುತಿಸಲಾದ ವಿವಿಧ ಯೋಜನೆಗಳು ಮತ್ತು ಕಾರ್ಯಯೋಜನೆಗಳಿಗೆ ನೀಡಲಾಗುತ್ತದೆ. ನಿರ್ದಿಷ್ಟವಾಗಿ ಯೋಜನೆಗಳು ಮತ್ತು ಕಾರ್ಯ ಯೋಜನೆಗಳನ್ನು ಬರೆಯಲು ಐದು ಅಂಕಗಳು, ಪ್ರಸ್ತುತಿಗಳಿಗೆ ಮೂರು ಅಂಕಗಳು ಮತ್ತು ವೈವಾ ವೋಸ್ ಎರಡು ಅಂಕಗಳೆಂದು ವಿಂಗಡಣೆ ಮಾಡಲಾಗಿದೆ. ನಿಯೋಜನೆಗೆ ಸಂಬಂಧಿಸಿದ ದಾಖಲೆಗಳನ್ನು ನಾಲ್ಕು ತಿಂಗಳ ಅವಧಿಗೆ ಹಿಡಿದಿಟ್ಟು ಕೊಳ್ಳಬೇಕು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಹೇಳುತ್ತದೆ. ಆಯಾ ಜಿಲ್ಲೆಗಳಿಗೆ ವಿಷಯವಾರು ಯೋಜನಾ ಶೀರ್ಷಿಕೆ ಮತ್ತು ಕಾರ್ಯಯೋಜನೆಗಳ ಪಟ್ಟಿಯನ್ನು ನೀಡಬೇಕು. ಕಾರ್ಯಯೋಜನೆಗಳನ್ನು ನೀಡುವಲ್ಲಿ ಈ ಶೀರ್ಷಿಕೆಗಳನ್ನು ಮಾತ್ರ ಅನುಸರಿಸಬೇಕು ಎಂದು ಡಿಪಿಯುಇಯ ಆದೇಶದಲ್ಲಿ ತಿಳಿಸಿದ್ದಾರೆ.

ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ದರೋಡೆಕೋರರು ಒಟ್ಟಿಗೆ ಫೋಟೋ ಶೂಟ್‌ಗಾಗಿ ಬೆಂಗಳೂರಿಗೆ ಬಂದಿದ್ದಾರೆ: ಯತ್ನಾಳ್

ಬೆಂಗಳೂರು: ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ದರೋಡೆಕೋರರು ಒಟ್ಟಿಗೆ ಸೇರುತ್ತಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಲೇವಡಿ ಮಾಡಿದ್ದಾರೆ.

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ ನಡೆಯಲಿರುವ ವಿಪಕ್ಷಗಳ ನಾಯಕರ ಸಭೆಯ ಬಗ್ಗೆ ಪ್ರತಿಕ್ರಿಯಿಸಿದ ಯತ್ನಾಳ್, ಕಾಶ್ಮೀರ–ಕನ್ಯಾಕುಮಾರಿವರೆಗಿನ ದರೋಡೆಕೋರರು ಒಟ್ಟಿಗೆ ಸೇರುತ್ತಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಮೋದಿಯವರನ್ನು ಸೋಲಿಸಲು ಒಗ್ಗೂಡುತ್ತಿದ್ದಾರೆ. ರಾಜ್ಯದಲ್ಲಿ ಜಾಮೀನು ಮೇಲೆ ಇರುವ ಎಲ್ಲಾ ಕುಟುಂಬಗಳು ಒಟ್ಟಿಗೆ ಸೇರಿವೆ. ಪ್ರಧಾನಿ ಮೋದಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಅವರು ಜೈಲು ಸೇರುವುದು ಖಚಿತ ಎಂದು ಅವರಿಗೆ ಚೆನ್ನಾಗಿ ತಿಳಿದಿದೆ, ಅದಕ್ಕಾಗಿಯೇ ಎಲ್ಲಾ ದರೋಡೆಕೋರರು ಒಟ್ಟಿಗೆ ಸೇರುತ್ತಿದ್ದಾರೆ ಎಂದು ಹೇಳಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಎರಡು ತಿಂಗಳಾಗಿದೆ. ಆಗಲೇ ಬರಗಾಲ ಬಂದಿದೆ, ರೈತರ ಆತ್ಮಹತ್ಯೆಗಳು ಹೆಚ್ಚುತ್ತಿವೆ, ಆತಂಕದ ಛಾಯೆ ಮತ್ತು ಹಿಂದೂ ಕಾರ್ಯಕರ್ತರ ಹತ್ಯೆಯಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಪಕ್ಷಗಳ ಸಭೆಯ ಕುರಿತು ಪ್ರತಿಕ್ರಿಯಿಸಿದ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಅವರು (ವಿರೋಧ ಪಕ್ಷಗಳು) ಇದನ್ನು 'ಮಹಾಘಟಬಂಧನ್' ಎಂದು ಕರೆಯುತ್ತಿದ್ದಾರೆ ಆದರೆ ವಾಸ್ತವವಾಗಿ ಇದರಲ್ಲಿ ಯಾವುದೇ 'ಬಂಧನ್' ಇಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಶಿಕ್ಷಕರ ಸಮಸ್ಯೆ ಬಗೆಹರಿಸದೇ ಇದ್ದಲ್ಲಿ ಜು.20ರಿಂದ ಹೋರಾಟಕ್ಕೆ ನಿರ್ಧಾರ



ಪ್ರಸ್ತುತ ವರ್ಗಾವಣೆಯಲ್ಲಿ ಪಿಎಸ್‌ಟಿ ಹುದ್ದೆಗೆ ಶಿಕ್ಷಕರ ಸೀಮಿತಗೊಳಿಸಿರುವುದರಿಂದ 1ರಿಂದ 5ನೇ ತರಗತಿವರೆಗೆ ಮಾತ್ರ ಪಾಠ ಬೋಧಿಸುವುದು. 6ರಿಂದ 8ನೇ ತರಗತಿಗಳ ಬೋಧನೆ ಬಹಿಷ್ಕರಿಸುವುದು. ಅರ್ಹ 83 ಸಾವಿರ ಶಿಕ್ಷಕರಿಗೆ ಪಿ.ಎಸ್.ಟಿ. ಹುದ್ದೆಯಿಂದ ಜಿಪಿಟಿ ಹುದ್ದೆಗೆ ಪೂರ್ವಾನ್ವಯವಾಗುವಂತೆ ಮುಂಬಡ್ತಿ ನೀಡಿ ವಿಲೀನಗೊಳಿಸಬೇಕು ಎಂಬ ಮೂರು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಇದಕ್ಕೆ ಪೂರಕವಾಗಿ ಹಂತಹಂತವಾಗಿ ಪ್ರಬಲ ಹೋರಾಟ ಮಾಡಲು ಒಮ್ಮತದಿಂದ ಸಭೆ ತೀರ್ಮಾನಿಸಿತು.

ಮೈಸೂರು,ಜು.17(ಎಸ್‌ಪಿಎನ್)– ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ (ಪಿಎಸ್‌ಟಿ) ಪ್ರತಿ ಬಾರಿ ವರ್ಗಾವಣೆಯಲ್ಲಿ ಆಗುತ್ತಿರುವ ಅನ್ಯಾಯವನ್ನು ಖಂಡಿಸಿ ಸರ್ಕಾರ ವಿರುದ್ಧ 'ಪ್ರಾಥಮಿಕ ಶಾಲಾ ಶಿಕ್ಷಕರ ಹಿತರಕ್ಷಣಾ ಒಕ್ಕೂಟ'ದಡಿ ಗುರುವಾರ (ಜು.20)ದಿಂದ ವಿವಿಧ ರೀತಿಯ ಹೋರಾಟ ಹಮ್ಮಿಕೊಳ್ಳಲು ವರ್ಗಾವಣೆ ವಂಚಿತ ಪಿಎಸ್‌ಟಿ ಶಿಕ್ಷಕರು, ಮೈಸೂರು ನಗರದ ನಿಶಾದ್ ಉದ್ಯಾನವನದಲ್ಲಿ ನಡೆದ ಸಮಾನಮನಸ್ಕರ ಶಿಕ್ಷಕರ ಸಭೆಯಲ್ಲಿ ತೀರ್ಮಾನಿಸಲಾಯಿತು.

2016ರಲ್ಲಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (ಜಿಪಿಟಿ) ಹುದ್ದೆ ಸೃಜನೆಯಿಂದ ಪಿಎಸ್‌ಟಿ ಶಿಕ್ಷಕರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ 1–7 ನೆಯ ತರಗತಿಗಳಿಗೆ ಬೋಧನೆ ಮಾಡಲು ನೇಮಕಗೊಂಡಿದ್ದ ಶಿಕ್ಷಕರು, ಪ್ರಸ್ತುತ ಹೊಸ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಂದಾಗಿ ಕೇವಲ 1ರಿಂದ 5ನೇ ತರಗತಿಗಳ ಬೋಧನೆಗೆ ಸೀಮಿತ ಮಾಡಿ, ಹಿಂಬಡ್ತಿಗೊಳಿಸಿರುವುದಕ್ಕೆ ಶಿಕ್ಷಕರು ಆಕ್ರೋಶ ಹೊರಹಾಕಿದ್ದಾರೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ತಿದ್ದುಪಡಿ ಮಾಡಿರುವ ಹೊಸ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾರ, 1ರಿಂದ 5ನೆಯ ತರಗತಿಗೆ ಮಾತ್ರ ಪ್ರಾಥಮಿಕ ಶಾಲಾ ಶಿಕ್ಷಕರು (ಪಿಎಸ್‌ಟಿ) ಬೋಧನೆ ಮಾಡಬೇಕು. 6ರಿಂದ 8ನೆಯ ತರಗತಿಗೆ ಪದವೀಧರ ಪ್ರಾಥಮಿಕ ಶಿಕ್ಷಕರು (ಜಿಪಿಟಿ) ಬೋಧನೆ ಮಾಡಬೇಕು. ವಾಸ್ತವ ಹೀಗಿದ್ದರೂ ಪಿಎಸ್‌ಟಿ ಶಿಕ್ಷಕರಿಂದ 6ರಿಂದ 8ನೆಯ ತರಗತಿಗೆ ಬೋಧನೆ ಮಾಡಿಸುತ್ತಿರುವುದು ಏಕೆ ಎಂದು ಪ್ರಶ್ನಿಸಿದ್ದಾರೆ.

ಖಾಲಿ ಹುದ್ದೆಗಳನ್ನು ಜಿಪಿಟಿ ಶಿಕ್ಷಕರಿಗೆ ಮೀಸಲಿಟ್ಟು, ಈ ಬಾರಿ ವರ್ಗಾವಣೆ ವೇಳೆ ಪಿಎಸ್‌ಟಿ ಶಿಕ್ಷಕರಿಗೆ ಸ್ಥಳಾವಕಾಶ ಸಿಗದಂತೆ ಮಾಡಿ ಬಾರಿ ಅನ್ಯಾಯ ಮಾಡಲಾಗಿದೆ. ಇದರಿಂದ 10,15, 20 ವರ್ಷಗಳ ಕಾಲ ಸೇವೆ ಸಲ್ಲಿಸಿದ ಶಿಕ್ಷಕರಿಗೆ ಹಲವು ತೊಡಕುಗಳು ಎದುರಾಗಿವೆ ಎಂದು ಬೇಸರ ಹೊರಹಾಕಿದರು. ವರ್ಗಾವಣೆ ಮತ್ತು ಬಡ್ತಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರತಿ ವರ್ಷ ಆಗುತ್ತಿರುವ ಅನ್ಯಾಯದ ವಿರುದ್ಧ ಹಂತ ಹಂತವಾಗಿ ಹೋರಾಟ ರೂಪಿಸುವ ಕುರಿತು ಸಭೆಯು ಸರ್ವಾನುಮತದ ನಿರ್ಣಯ ಕೈಗೊಂಡಿತ್ತು. ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕವು, ಶಿಕ್ಷಕರಿಗೆ ಆಗಿರುವ ಅನ್ಯಾಯದ ವಿರುದ್ಧ ಹೋರಾಟ ರೂಪಿಸುವ ಕುರಿತು ಬುಧವಾರದೊಳಗೆ ತನ್ನ ನಿಲುವು ಪ್ರಕಟಿಸದಿದ್ದರೆ, ಗುರುವಾರದಿಂದ ಹೋರಾಟ ಮಾಡಲು ಸಭೆಯು ಸರ್ವಾನುಮತದ ತೀರ್ಮಾನ ಕೈಗೊಂಡಿದೆ ಎಂದು ತಿಳಿಸಿದರು.

ಶಿಕ್ಷಣ ಇಲಾಖೆಯಲ್ಲಿ ಎಸ್‌ಡಿಎಯಾಗಿ ನೇಮಕಗೊಳ್ಳುವ ಬೋಧಕೇತರ ಸಿಬ್ಬಂದಿ, ಹಂತ ಹಂತವಾಗಿ ಎಫ್‌ಡಿಎ, ಅಧೀಕ್ಷಕ, ವ್ಯವಸ್ಥಾಪಕ, ಪತ್ರಾಂಕಿತ ವ್ಯವಸ್ಥಾಪಕರಾಗಿ ಬಡ್ತಿ ಹೊಂದುವರು. ಆದರೆ, ಪ್ರಾಥಮಿಕ ಶಾಲಾ ಶಿಕ್ಷಕರು, ಒಂದು ಮುಖ್ಯ ಶಿಕ್ಷಕರ ಬಡ್ತಿ ಹೊಂದಲು ಸಾಧ್ಯವಿಲ್ಲದ ಶೋಚನೀಯ ಸ್ಥಿತಿ ಇಲಾಖೆಯಲ್ಲಿದೆ. ಇಲಾಖೆಗೆ ನೇಮಕಾತಿ ಹೊಂದಿದಾಗ 1ರಿಂದ 7ನೇ ತರಗತಿಯ ಶಿಕ್ಷಕರೆಂದು ಆದೇಶ ಪಡೆದು ಸುದೀರ್ಘ ಸೇವೆ ಸಲ್ಲಿಸಿದ ನಂತರದಲ್ಲಿ, ಹಿಂಬಡ್ತಿ ಪಡೆಯುವ ಸ್ಥಿತಿಗೆ ತಂದಿರುವುದು ಬೇಸರ ಸಂಗತಿ ಎಂದರು.

ಸಭೆಯಲ್ಲಿ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಎಸ್.ಮಂಜುನಾಥ್, ಖಜಾಂಚಿ ಎಂ.ಎನ್. ಧನು, ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಟಿ.ಸತೀಶ್ ಜವರೇಗೌಡ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವಿವಿಧ ತಾಲೂಕುಗಳ ಪದಾಧಿಕಾರಿಗಳಾದ ಹೆಚ್.ಡಿ.ಮಾದಪ್ಪ, ಪುಟ್ಟಸ್ವಾಮಿ, ಡಿ.ಮಾಲೇಗೌಡ, ಎಂ.ಎ.ಸವಿತಾ, ಕೆ.ಆರ್. ನಗರ ತಾಲೂಕು ಮುಖ್ಯ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಸಯ್ಯದ್ ರಿಜ್ವಾನ್, ಎನ್.ಪಿ.ಎಸ್. ನೌಕರರ ಸಂಘದ ಪದಾಧಿಕಾರಿ ಯಶ್ವಂತ್, ಸಿ.ಆರ್.ಪಿ.ಗಳಾದ ಮಹದೇವಸ್ವಾಮಿ, ಸರ್ವೇಶ್, ವಿವಿಧ ಶಿಕ್ಷಕರ ಸಂಘದ ಪ್ರತಿನಿಧಿಗಳಾದ ಬಿ.ಲಲಿತಾ, ಸಿ.ಕೆ.ತುಳಸಿ, ಜಯಪಾಲದೀಪ, ಜೆ.ಎನ್.ರಶ್ಮಿ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಬಾಳೆಹಣ್ಣಿಗೆ ಎಷ್ಟು?
ಅಂಗಡಿಯವ: ಹತ್ತು ರೂಪಾಯಿ
ಗುಂಡ : ನಾಲ್ಕು ರೂಪಾಯಿಗೆ ಕೊಡು
ಅಂಗಡಿಯವ: ನಾಲ್ಕು ರೂಪಾಯಿಗೆ ಸಿಪ್ಪೆ ಕೊಡ್ತೀನಿ ಅಷ್ಟೆ.
ಗುಂಡ : ಹಾಗಿದ್ರೆ ತಗೋ ಆರು ರೂಪಾಯಿ.
ಸಿಪ್ಪೆ ನೀನೇ ಇಟ್ಕೊಂಡು ಹಣ್ಣು ಕೊಡು.

ಮೈಸೂರು ಮಿತ್ರ

ಮಂಗಳವಾರ, 18 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಜೀವನದಲ್ಲಿ ಎಲ್ಲಾ ಲಾಭಗಳನ್ನು ಒಮ್ಮೆಲೇ ಪಡೆಯಲು ಪ್ರಯತ್ನಿಸುವವನಿಗೆ ಏನೂ ದೊರೆಯದು –ಬೂಮ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆನೆ ಭಾರ ಆನೆಗೆ / ಸೊಳ್ಳೆ ಭಾರ ಸೊಳ್ಳೆಗೆ

ನಿಮ್ಮ ಪತ್ರಗಳು

ವಯಸ್ಸಾದ ತಂದೆ ತಾಯಿಗಳ ರಕ್ಷಣೆಗೆ ಮುಂದಾದ ಹೈಕೋರ್ಟ್

ಮಾನ್ಯರೆ,

ವಯಸ್ಸಾದ ತಂದೆ ತಾಯಿಗಳನ್ನು ಮಕ್ಕಳು ನಿರ್ಲಕ್ಷಿಸುತ್ತಿರುವುದರ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ರಾಜ್ಯದ ಉಚ್ಚ ನ್ಯಾಯಾಲಯ, ಇತ್ತೀಚಿನ ಮಹತ್ವದ ಆದೇಶವೊಂದರಲ್ಲಿ ಇಬ್ಬರು ಗಂಡುಮಕ್ಕಳು ತಮ್ಮ ತಾಯಿಯ ಜೀವನಾಂಶಕ್ಕೆ ಸಂಬಂಧಿಸಿದಂತೆ ತಲಾ 10,000 ರೂಪಾಯಿಗಳನ್ನು ಪ್ರತಿ ತಿಂಗಳು ನೀಡಬೇಕು ಎಂಬ ಜಿಲ್ಲಾಧಿಕಾರಿಗಳ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದಿದೆ.

ಮಹತ್ವಪೂರ್ಣ ತೀರ್ಪುಗಳನ್ನು ನೀಡುತ್ತಾ ಬಂದಿರುವ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ನೇತೃತ್ವದ ಏಕಸದಸ್ಯ ಪೀಠ, ಅರ್ಜಿದಾರರ ಮೇಲ್ಮನವಿಯನ್ನು ವಜಾಗೊಳಿಸಿದೆ. ಮೇಲ್ಮನವಿದಾರರಾದ ಇಬ್ಬರು ಗಂಡುಮಕ್ಕಳು ವಯಸ್ಸಾದ ತಮ್ಮ ತಾಯಿಯವರನ್ನು ನೋಡಿಕೊಳ್ಳಲು ನಿರಾಕರಿಸಿದಾಗ, ಜೀವನಾಂಶ ಕೋರಿ ಮೈಸೂರಿಗೆ ಸಹಾಯಕ ಆಯುಕ್ತ (ಅಸಿಸ್ಟೆಂಟ್ ಕಮಿಷನರ್)ರವರ ನ್ಯಾಯಾಲಯಕ್ಕೆ ನೊಂದ ವೃದ್ಧ ಮಹಿಳೆ ಅರ್ಜಿ ಸಲ್ಲಿಸಿದ್ದರು. ಈ ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿದ ಅಸಿಸ್ಟೆಂಟ್ ಕಮಿಷನರ್, ಅರ್ಜಿದಾರ ಮಹಿಳೆಗೆ ಮಾಸಿಕ 5000 ರೂಪಾಯಿಗಳ ಜೀವನಾಂಶ ನೀಡುವ ಆದೇಶ ಹೊರಡಿಸಿದ್ದರು. ನಂತರ ಆ ವೃದ್ಧೆಯ ಮಕ್ಕಳು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಸದರಿ ಅರ್ಜಿಯ ವಿಚಾರಣೆ ನಡೆಸಿದ ಅಂದಿನ ಮೈಸೂರು ಜಿಲ್ಲಾಧಿಕಾರಿ ಅಭಿರಾಮ್ ಜಿ.ಶಂಕರ್ ಅವರು ಜೀವನಾಂಶ ಮೊತ್ತವನ್ನು 5000 ರೂ.ಗಳಿಂದ ಹತ್ತು ಸಾವಿರ ರೂಪಾಯಿಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಿದ್ದರು. ಜಿಲ್ಲಾಧಿಕಾರಿಗಳ ಈ ಅರ್ಜಿಯ ವಿರುದ್ಧ ಮಕ್ಕಳು ರಾಜ್ಯ ಹೈಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಪ್ರಕರಣದ ಅರ್ಜಿ ವಿಚಾರಣೆ ವೇಳೆ ವಯಸ್ಸಾದ ತಂದೆ ತಾಯಿಗಳ ಬಗ್ಗೆ ವಿಶೇಷವಾದ ಕಾಳಜಿ ವ್ಯಕ್ತಪಡಿಸಿರುವ ನ್ಯಾಯಮೂರ್ತಿಗಳು ಮಕ್ಕಳು ತಮ್ಮ ವಯಸ್ಸಾದ ತಂದೆ–ತಾಯಿಗಳನ್ನು ಕಾನೂನಾತ್ಮಕವಾಗಿ ಮಾತ್ರವಲ್ಲದೇ ಧರ್ಮ, ಸಂಪ್ರದಾಯ, ಪದ್ಧತಿ ಮುಂತಾದವುಗಳ ಅಡಿಯಲ್ಲಿ ಸಹ ನೋಡಿಕೊಳ್ಳಬೇಕು ಎಂಬ ಮಾತುಗಳನ್ನು ಪುಷ್ಟೀಕರಿಸಿದ್ದಾರೆ. ಒಟ್ಟಿನಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ಈ ಮಹತ್ವಪೂರ್ಣ ತೀರ್ಪು ವಯಸ್ಸಾದ ತಂದೆ ತಾಯಿಗಳನ್ನು ಕಡೆಗಾಣಿಸಿ ಕಾಡುಪಾಲು ಮಾಡುತ್ತಿರುವ ಮಕ್ಕಳ ಕಣ್ಣನ್ನು ತೆರೆಸಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು

ಪಾರ್ಟ್ ಟೈಂ ಕೆಲಸದ ಬಗ್ಗೆ ಎಚ್ಚರವಿರಲಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಪಾರ್ಟ್ ಟೈಂ ಮತ್ತು ಫುಲ್ ಟೈಂ ಕೆಲಸ ಕೊಡಿಸುವುದಾಗಿ ಹೇಳಿ ಕೆಲವೊಂದು ನಕಲಿ ಜಾಹೀರಾತು ಮತ್ತು ಮೊಬೈಲ್ ಲಿಂಕ್‌ಗಳನ್ನು ಕಳುಹಿಸಿ ವಂಚಿಸುವವರು ಜಾಸ್ತಿಯಾಗಿದ್ದಾರೆ. ಆದ್ದರಿಂದ, ನಿರುದ್ಯೋಗಿಗಳು ಹಾಗೂ ಕೆಲಸದ ಅಗತ್ಯ ಇರುವಂತಹ ಜನರು ಇದರ ಸತ್ಯಾಸತ್ಯತೆಯನ್ನು ತಿಳಿದುಕೊಂಡು ಹೋಗುವುದು ಉತ್ತಮ. ಯಾವುದೇ ರೀತಿಯ ಕೆಲಸವಾದರು ಸರಿ ಮೊದಲು ಅವರ ವಿಳಾಸ (ಯಾವ ನಗರ, ಮನೆ ನಂ, ಮನೆ ಹೆಸರು, ಯಾವ ಕ್ರಾಸ್, ಎಷ್ಟನೆ ಮೇನ್, ಏರಿಯಾ, ಪಿನ್‌ಕೋಡ್) ಸಂಪೂರ್ಣ ಮಾಹಿತಿ ತಿಳಿದುಕೊಂಡು ಆಫೀಸಿಗೆ ಭೇಟಿ ನೀಡಿ ಅಕ್ಕ ಪಕ್ಕದವರನ್ನು ವಿಚಾರಿಸಿ ಇದು ಯಾವಾಗಿನಿಂದ ಕಾರ್ಯ ನಿರ್ವಹಿಸುತ್ತಿದೆ ಎಂದು ತಿಳಿದುಕೊಂಡು ಮುಂದುವರಿಯಿರಿ. ಮುಂಗಡ ಹಣ ಕೇಳಿದರೆ ಎಚ್ಚರ ವಹಿಸಿ, ಒಂದು ವೇಳೆ ಮೋಸ ಹೋದರೆ ಅವರ ಮೊಬೈಲ್ ಸಂಖ್ಯೆ, ವಾಟ್ಸಾಪ್ ಮೆಸೇಜ್‌ಗಳೊಂದಿಗೆ ಪೊಲೀಸರಿಗೆ ಕಂಪ್ಲೆಂಟ್ ಕೊಡುವುದು ಉತ್ತಮ ಹಾಗೂ ಆನ್‌ಲೈನ್ ಕೆಲಸದ ಬಗ್ಗೆ ಹೆಚ್ಚು ಎಚ್ಚರ ವಹಿಸುವುದರಿಂದ ವಂಚನೆಯಿಂದ ಪಾರಾಗಬಹುದು.

–ಸಂತೋಷ, ಮೈಸೂರು

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಕಾಯ್ದಿರಿಸದ ಟಿಕೆಟ್ ನೀಡುವವರ ಮೊಬೈಲ್ ಬಳಕೆ ನಿಷೇಧಿಸಿ



ಮಾನ್ಯರೆ,

ಭಾರತೀಯ ರೈಲ್ವೆ ಇಲಾಖೆಗೆ ತನ್ನದೆ ಆದ ಇತಿಹಾಸವಿದೆ. ಕಡಿಮೆ ದರದಲ್ಲಿ ಸಾರ್ವಜನಿಕರು ರೈಲಿನಲ್ಲಿ ಪ್ರಯಾಣಿಸುತ್ತಾರೆ. ಮೈಸೂರಿನಿಂದ ಅಂತರ ರಾಜ್ಯಗಳಿಗೆ ರೈಲುಗಳು ಹೆಚ್ಚಾಗಿ ಸಂಚರಿಸಲಿದ್ದು, ಮೈಸೂರು ರೈಲ್ವೆ ನಿಲ್ದಾಣದಿಂದ ಪ್ರಯಾಣಿಸುವ ಪ್ರಯಾಣಿಕರು, ರೈಲು ಟಿಕೆಟ್ ಪಡೆಯಲು ಸರತಿ ಸಾಲಿನಲ್ಲಿ ನಿಂತಿದ್ದರೂ ರೈಲ್ವೆ ಟಿಕೆಟ್ ನೀಡುವ ಸಿಬ್ಬಂದಿ ಕೌಂಟರ್‌ನಲ್ಲಿ ಮೊಬೈಲ್ ಕೈಯ್ಯಲ್ಲಿ ಹಿಡಿದುಕೊಂಡು ಕೌಂಟರ್‌ಗೆ "ಮುಚ್ಚಿದೆ – (closed)'' ಎಂಬ ಫಲಕ ಹಾಕಿ ಹರಟೆ ಹೊಡೆಯುತ್ತಿರುತ್ತಾರೆ.

ಈ ಸಮಯಗಳಲ್ಲಿ ಸಾರ್ವಜನಿಕರಿಗೆ ಸಮಯಕ್ಕೆ ಸರಿಯಾಗಿ ಹೊರಡುವ ರೈಲು ಸಿಗದೆ, ಸಮಯ ವ್ಯರ್ಥ ಮಾಡುತ್ತಿದ್ದಾರೆ. ಈ ಚಿತ್ರವನ್ನೇ ಗಮನಿಸಿ ಸಂಬಂಧಪಟ್ಟ ಮೈಸೂರು ರೈಲ್ವೆಯ ಉನ್ನತ ಅಧಿಕಾರಿಗಳು ಕೂಡಲೇ ನಿರ್ಲಕ್ಷ್ಯತನದಿಂದ ಟಿಕೆಟ್ ನೀಡುವ ಸಮಯದಲ್ಲಿ ಮೊಬೈಲ್ ಬಳಕೆ ಮೂಲಕ "ಅಶಿಸ್ತು" ತೋರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಹೇಸಿಗೆ ಜನರಿಗೆ ಎಲ್ಲೆ ಎಂಬುದಿಲ್ಲ...

ಮಾನ್ಯರೆ,

ಮೈಸೂರಿನ ರಿಂಗ್ ರಸ್ತೆಯ (ಹೆಬ್ಬಾಳಿನ ಜೆಎಸ್‌ಎಸ್ ಅರ್ಬನ್ ಹಾತ್‌ನಿಂದ ಸ್ವಲ್ಪ ಕೆಳಗೆ; ರಾಯಲ್ ಇನ್ ಕಡೆ ಬರುವ ಕಡೆ) ವಿಭಜಕದ ಮೇಲೆ ಕಸ ಸುರಿಯಲಾಗುತ್ತಿದೆ. ಆಜುಬಾಜಿನ ವಸತಿ ಪ್ರದೇಶದ ಜನ ಮನೆ ಕಸವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ತಂದು ಇಲ್ಲಿ ಹಾಕುತ್ತಿದ್ದಾರೆ. ಸದಾ ವಾಹನ ದಟ್ಟಣೆಯಿಂದ ಕೂಡಿರುವ ಇಲ್ಲಿ ಕಸ ಎತ್ತಿ ಸಾಗಿಸುವುದಾದರೂ ಹೇಗೆ? ರಾಜಾರೋಷವಾಗಿ ಈ ರೀತಿ ಕಸ ತಂದು ಹಾಕುವವರಿಗೆ ತಕ್ಕಶಾಸ್ತಿ ಮಾಡದಿದ್ದರೆ ಇಂತಹ ಹೇಸಿಗೆ ಜನ ಎಲ್ಲಿ ಬೇಕಾದರೂ ಹೇಸಿಗೆ ಮಾಡಬಹುದು. ಸಂಬಂಧಿಸಿದ ಅಧಿಕಾರಿಗಳು ದಿಟ್ಟತನ ಪ್ರದರ್ಶಿಸಲಿ.


– ರಾಜು, ಹೆಬ್ಬಾಳು, ಮೈಸೂರು.

ಹೆಣ್ಣಿಲ್ಲದ ಚಿತ್ರ

ಮಾನ್ಯರೆ,

"ಸಿನಿಮಾದಲ್ಲಿ ಮಹಿಳೆಯರಿಲ್ಲದ ಕ್ಷಣ ಊಹಿಸಲು ಅಸಾಧ್ಯ"–ಮೈಥಿಲಿ ರಾವ್, ಸಾಹಿತ್ಯೋತ್ಸವದಲ್ಲಿ (ಜು.3) ಈ ಹೇಳಿಕೆ ಪೂರ್ತಿ ಸತ್ಯವಲ್ಲ. ಒಂದು ಹೆಣ್ಣು ಪಿಳ್ಳೆಯೂ ಇರದ ಕೆಲವು ಹಾಲಿವುಡ್ ಚಿತ್ರಗಳನ್ನು ನಾನು ನೋಡಿದ್ದೇನೆ. ನಿದರ್ಶನಕ್ಕೆ : 'ಗ್ರೇಟೆಸ್ಟ್ ಎಸ್ಕೇಪ್' ಮತ್ತು 'ಲಾಸ್ಟ್ ಇನ್ ದಿ ಡೆಸರ್ಟ್'. (ಬಹುಶಃ ಗಂಡಿರದ ಸಿನಿಮಾ ಇಲ್ಲ!)

–ಸಿಪಿಕೆ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಎಂದೂ ಮಾಸದ ಕಲ್ಪನಾ ಮಿನುಗುತಾರೆ



ಜುಲೈ 18, ಖ್ಯಾತ ಚಲನಚಿತ್ರ ನಟಿ ಮಿನುಗುತಾರೆ ಕಲ್ಪನಾ ಅವರ ಜನ್ಮದಿನ. ತನ್ನಿಮಿತ್ತ ಈ ಲೇಖನ.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಕೆ.ಶಿವರಾಮ ಕಾರಂತರ ನಿರ್ದೇಶನದ ಒಂದೇ ಒಂದು ವಾಕ್ಚಿತ್ರ 'ಮಲಯ ಮಕ್ಕಳು' ಚಿತ್ರದಲ್ಲಿ ಅದರ ಹೃದಯವೇ ಆಗಿದ್ದ ಕೆಂಪಿ ಪಾತ್ರದಲ್ಲಿ ಬಹುಭಾವಪೂರ್ಣವಾಗಿ ಅಭಿಯನಯಿಸಿ, ಬಹುನಿಷ್ಠೂರವಾದಿ ವ್ಯಕ್ತಿತ್ವದ ಕಾರಂತರಿಂದಲೇ ಭೇಷ್ ಎನಿಸಿಕೊಂಡ ಪ್ರತಿಭಾಪೂರ್ಣ ಕಲಾವಿದೆ ಕಲ್ಪನಾ. ಕಾರಂತರೇ ಮೆಚ್ಚಿಕೊಂಡ, ಒಪ್ಪಿಕೊಂಡ ಕಲಾವಿದೆಯೆಂದರೆ ಇದಕ್ಕಿಂತ ಇನ್ಯಾವ ಸರ್ಟಿಫಿಕೆಟ್ ಬೇಕು?

ಸಿನಿಮಾ ಲೋಕವೆಂದರೆ ಬಹುತೇಕ ನಾಯಕ ಪ್ರಧಾನವಾದದ್ದು ಅರ್ಥಾತ್ ಪುರುಷ ಬಾಹುಳ್ಯದ್ದು. ಅವತ್ತಿನಿಂದಲೂ ಕೂಡ. ಇವತ್ತು ಒಂದು ಚೂರು ಬದಲಾಗಿರಬಹುದು ಅಷ್ಟೇ. ಅದರಲ್ಲೂ ಅರವತ್ತರ ದಶಕದಲ್ಲಿ ಒಂದು ಸಿನಿಮಾದ ನಾಯಕಿ ಎಂದರೆ ತಲೆ ತಗ್ಗಿಸಿ ಭೂಮಿ ನೋಡುತ್ತಾ ನಾಚಿಕೆಯಿಂದ ಅಥವಾ ದೈನೇಸಿ ಸ್ಥಿತಿಯಲ್ಲಿ ಕಾಲ್ಬೆರಳುಗಳಿಂದ ನೆಲಕೆರೆಯುತ್ತಾ ನಿಂತು ನಾಲ್ಕು ಮಾತಾಡುವುದಷ್ಟಕ್ಕೇ ಸೀಮಿತವಾಗಿದ್ದಳು. ಅಂತಹ ಕಾಲಘಟ್ಟದಲ್ಲಿ ಕನ್ನಡ ಸಿನಿಮಾರಂಗದಲ್ಲಿ ತಲೆಯೆತ್ತಿ ನಿಂತು ಭೂಮ್ಯಾಕಾರಗಳ ಉದ್ದಗಲಕ್ಕೂ, ಎತ್ತರಕ್ಕೂ ಮಾತಾಡಿ ಮೆರೆಯುವ ನಾಯಕಿ ಪ್ರಧಾನ ಚಿತ್ರಗಳಿಗೆ ನಾಂದಿಯಾಡಿದವರು ಮೇರು ಅಭಿನೇತ್ರಿ ಮಿನುಗುತಾರೆ ಕಲ್ಪನಾ! ಖ್ಯಾತ ನಾಯಕ ನಟರನ್ನೇ ಗೌಣಗೊಳಿಸುವಂಥ ಸಾಲು ಸಾಲು ಸಿನಿಮಾಗಳಲ್ಲಿ ಅಭಿನಯಿಸಿ ನಟಿಯರಿಗೂ 'ಸ್ಟಾರ್ ಗಿರಿ' ತಂದುಕೊಟ್ಟವರು. ಕನ್ನಡದ ಮೊಟ್ಟಮೊದಲ 'ಫ್ಯಾಷನ್ ಐ ಕಾನ್' ಆಗಿದ್ದ ಇವರು ಸಿನಿಮಾದಲ್ಲಿ ತೊಟ್ಟ ಉಡುಗೆ–ತೊಡುಗೆ, ಒಡವೆ–ವೈಯ್ಯಾರಗಳೆಲ್ಲವನ್ನೂ ಸಾರ್ವಜನಿಕರು ಅನುಸರಿಸಿ, ಅನುಕರಿಸುವ ಹೊಸ ಟ್ರೆಂಡ್ ಸೃಷ್ಟಿಸಿದ್ದರು. ಆಕಾಲಕ್ಕೆ ಇದು ಅದುವರೆಗೆ ಎಲ್ಲೂ ಕಾಣಿಸಿಕೊಳ್ಳದಿದ್ದ 'ಕಲ್ಪನಾ ಸಾಮ್ರಾಜ್ಯ'ವಾಗಿತ್ತು. ಅಂತಹ ಹಾವ–ಭಾವದ ರೂಪರಾಶಿಯ ನಟನಾ ಕೌಶಲ್ಯದ ಮಹದ್ಭುತ ಕಲಾವಿದೆ ಕಲ್ಪನಾ.

"ಕನ್ನಡದ ಬೆಳ್ಳಿತೆರೆಯನ್ನು ಬೆಳಗಿದ ಮಿನುಗುತಾರೆ ಅಲ್ಪಳೆ
ಕಲ್ಪನಾ? ರಸಿಕ ಜನ ಮನದ ಭಿತ್ತಿಯಲಿ ಎಂದಿಗೂ
ರಾರಾಜಿಸುವ ವರ್ಣ ಚಿತ್ರ; ಹೃನ್ಮಂದಿರದ ಸ್ವರ್ಣಪುತ್ಥಳಿ,
ಅಲ್ಲ, ಜೀವಂತ ಮೂರ್ತಿ! ಕೀರ್ತಿಯ ವೈಜಯಂತಿ ಜಯ
ಜಯಕಾರ ಸಹಿತ ಹಾರಾಡಿತ್ತು ನಾಡಿನಲಿ ಹಾಡು
ಹರಿದಿತ್ತು ಹೊನಲಾಗಿ ಮೋಡಿಯನೆಸಗಿ
ಮರೆಯಬಹುದೇನು? ಆದರೆ ವಿಧಿಗೆ ಮತ್ಸರದ
ಹುಟ್ಟುಗುಣ! ವತ್ಸರಗಳಿದ್ದುವೆಷ್ಟೋ? ಮುಂದೆ........
ಥಟ್ಟನೊಡೆಯಿತು ಮುತ್ತು; ಛಿದ್ರವಾಯಿತು ಭದ್ರ
ಕಲೆಯ ಸಂಪ;ತ್ತು! ಆಹ! ನೋಡ ನೋಡುತ ಮೋಡ
ದಂತೆ ಕರಗಿತು ಕಲ್ಪನೆಯ ಸ್ವಪ್ನ ಪತಾಕೆ."

ಇದು 78ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದ ಖ್ಯಾತಕವಿ ಡಾ.ಸಿಪಿಕೆ ಅವರು ಮಿನುಗುತಾರೆ ಕಲ್ಪನಾ ಅವರನ್ನು ಕುರಿತು ಬರೆದಿರುವ ಕಾವ್ಯನುಡಿಗಳು. ಸಿಪಿಕೆ ಅವರಂತಹ ವಿದ್ವಾಂಸರ ಲೇಖನಿಯಿಂದ ಇಂಥ ಕಾವ್ಯಶಿಲ್ಪವನ್ನು ಕೆತ್ತಿಸಿಕೊಂಡ ಕನ್ನಡ ಚಿತ್ರರಂಗದ ಏಕೈಕ ಅಭಿನೇತ್ರಿ ಮಿನುಗುತಾರೆ ಕಲ್ಪನಾ! ಇದೊಂದು ಪುಟ್ಟ ಕವಿತೆ ಸಾಕು ಕಲ್ಪನಾ ಎಂಥಾ ಮಹದದ್ಭುತ ಕಲಾವಿದೆ ಎಂಬುದನ್ನು ಅರಿಯಲು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಕೆ.ಶಿವರಾಮಕಾರಂತರ ನಿರ್ದೇಶನದ ಒಂದೇ ಒಂದು ವಾಕ್ಚಿತ್ರ 'ಮಲಯ ಮಕ್ಕಳು' ಚಿತ್ರದಲ್ಲಿ ಅದರ ಹೃದಯವೇ ಆಗಿದ್ದ ಕೆಂಪಿ ಪಾತ್ರದಲ್ಲಿ ಬಹುಭಾವಪೂರ್ಣವಾಗಿ ಅಭಿಯನಯಿಸಿ, ಬಹುನಿಷ್ಠೂರವಾದಿ ವ್ಯಕ್ತಿತ್ವದ ಕಾರಂತರಿಂದಲೇ ಭೇಷ್ ಎನಿಸಿಕೊಂಡ ಪ್ರತಿಭಾಪೂರ್ಣ ಕಲಾವಿದೆ ಕಲ್ಪನಾ. ಕಾರಂತರೇ ಮೆಚ್ಚಿಕೊಂಡ, ಒಪ್ಪಿಕೊಂಡ ಕಲಾವಿದೆಯೆಂದರೆ ಇದಕ್ಕಿಂತ ಇನ್ಯಾವ ಸರ್ಟಿಫಿಕೆಟ್ ಬೇಕು?

ಇಷ್ಟೇ ಅಲ್ಲ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಖ್ಯಾತ ಕಾದಂಬರಿಕಾರ ಚದುರಂಗ ಅವರು ದಿಗ್ದರ್ಶಿಸಿದ 'ಸರ್ವಮಂಗಳ' ಚಿತ್ರದಲ್ಲಿನ ಇವರ ಸಹಜಾಭಿನಯ ಕಂಡು ಸ್ವತಃ ಚದುರಂಗ ಅವರೇ ಮೂಕವಿಸ್ಮಿತರಾಗಿ ಕಲ್ಪನಾ ಅವರಿಗೆ ಕೈಮುಗಿದಿದ್ದರಂತೆ. ಹಾಗೆಯೇ 'ಎರಡು ಕನಸು' ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ ಕಲ್ಪನಾ ಅಭಿನಯಿಸುತ್ತಿದ್ದ ರೀತಿ ಕಂಡು ಆ ಚಿತ್ರದಲ್ಲಿ ನಾಯಕನಟರಾಗಿ ಅವರೆದುರು ನಟಿಸಿದ್ದ ವರನಟ ಡಾ. ರಾಜ್‌ಕುಮಾರ್ ಅವರೇ ಚಪ್ಪಾಳೆ ತಟ್ಟಿ ತಮ್ಮೆರಡೂ ಕೈಗಳನ್ನು ಮೇಲೆತ್ತಿ ಕೈಮುಗಿದಿದ್ದರಂತೆ. ಇದನ್ನು ಕಂಡು ವಿಚಲಿತರಾದ ಕಲ್ಪನಾ ನೀವು ನನಗೆ ಕೈಮುಗಿಯುವುದೇ? ಎಂದು ಸಂಕೋಚದ ಮುದ್ದೆಯಾಗಿ ಡಾ. ರಾಜ್ ಅವರನ್ನು ನೋಡಿದಾಗ, ನಿನಗಲ್ಲಮ್ಮಾ ನಾನು ಕೈಮುಗಿದದ್ದು, ನಿನ್ನಲ್ಲಿ ತಾಂಡವವಾಡುತ್ತಿರುವ ಕಲಾದೇವಿಗೆ ಎಂದಿದ್ದರಂತೆ. ಅಂತೆಯೇ 'ಹಣ್ಣೆಲೆ ಚಿಗುರಿದಾಗ' ಚಿತ್ರದಲ್ಲಿನ ಕಲ್ಪನಾ ಅವರ ಅಮೋಘ ಅಭಿನಯ ಕಂಡು ಹಿಂದಿ ಚಿತ್ರರಂಗದ ಖ್ಯಾತ ನಿರ್ಮಾಪಕ, ನಿರ್ದೇಶಕ ವಿ.ಶಾಂತಾರಾಂ ಕಲ್ಪನಾರಿಗೆ ಮನದುಂಬಿ ವಂದಿಸಿದ್ದರಂತೆ. ಹಿಂದಿಯ ಪ್ರಸಿದ್ದನಟಿ ಶರ್ಮಿಳಾ ಠಾಕೂರ್ ಕೂಡ 'ಶರಪಂಜರ' ಚಿತ್ರ ವೀಕ್ಷಿಸಿ, ನಾನು ಕಲ್ಪನಾ ಅವರಂತೆ ನಟಿಸಲು ಸಾಧ್ಯವೇ? ಎಂದು ಅಚ್ಚರಿಯಿಂದ ಬಾಯ್ಮೇಲೆ ಬೆರಳಿಟ್ಟುಕೊಂಡು ಮುಕ್ತಕಂಠದಿಂದ ಕಲ್ಪನಾ ಅವರ ನಟನೆಯನ್ನು ಕೊಂಡಾಡಿದ್ದರಂತೆ.

ಹೀಗೆ ಸಿಪಿಕೆ, ಕಾರಂತ, ಚದುರಂಗ ಅವರಂಥ ಘಟಾನುಘಟಿ ಸಾಹಿತಿಗಳಿಂದ, ಡಾ.ರಾಜ್‌ಕುಮರ್, ವಿ.ಶಾಂತಾರಾಂ, ಶರ್ಮಿಳಾ ಠಾಕೂರ್ ಅವರಂತಹ ಬೆಳ್ಳಿ ತೆರೆಯ ಮಹಾನ್ ದಿಗ್ಗಜರಿಂದ ಕೈಮುಗಿಸಿಕೊಳ್ಳುವಷ್ಟರ ಮಟ್ಟಿಗೆ ತನ್ನೊಳಗಿನ ಕಲಾವಿದೆಯನ್ನು ಬೆಳ್ಳಿತೆರೆಯಲ್ಲಿ ಮೆರೆಸಿದ್ದ ಮಿನುಗುತಾರೆ ಕಲ್ಪನಾ ಅವರಿಗೆ ಸಮ ಮತ್ತೊಬ್ಬರ ಹೆಸರನ್ನು ಹೇಳುವುದು ಕಷ್ಟ, ಕನ್ನಡ ನಾಡು ಕಂಡ ಅಂಥ ಅಭೂತಪೂರ್ವ ತಾರೆ ಕಲ್ಪನಾ ರಂಗನಟಿಯಾಗಿಯೂ ಮಿಂಚಿದ ರಂಗಭೂಮಿಯ ನಕ್ಷತ್ರವೂ ಹೌದು. ಅದಾವ ಘಳಿಗೆಯಲ್ಲಿ ಕನ್ನಡ ಚಿತ್ರರಂಗ ಇವರಿಗೆ 'ಮಿನುಗುತಾರೆ' ಎಂಬ ಬಿರುದು ನೀಡಿತೋ ಏನೋ ಇಡೀ ಚಿತ್ರ ರಂಗವೇ ವಿಸ್ಮಯಗೊಳ್ಳುವಂತೆ ಮಿಂಚು ಮಿನುಗಿನೋಪಾದಿಯಲ್ಲಿ ಅಕ್ಷರಶಃ ಹೊಳೆದವರು. ಬದುಕಿದ್ದಾಗಲೂ ಬೆಳ್ಳಿತೆರೆಯಲ್ಲಿ ಭರ್ಜರಿಯಾಗಿ ಮಿನು ಮಿನುಗುತ್ತಲೇ ಇದ್ದರು. ಹಾಗೆಯೇ ಭೌತಿಕವಾಗಿ ಅವರು ಇಲ್ಲವಾಗಿದ್ದರೂ ಕನ್ನಡಿಗರ ಭಾವಪ್ರಪಂಚದಲ್ಲಿ ಇಂದಿಗೂ ಮಿನು ಮಿನುಗುತ್ತಲೇ ಇದ್ದಾರೆ. ಕಲ್ಪನಾ ಕಣ್ಮರೆಯಾಗಿ ನಾಲ್ಕು ದಶಕಗಳೇ ಸಮೀಪಿಸುತ್ತಿದೆ. ಆದರೆ ಅವರು ಬಿಟ್ಟು ಹೋದ ಜಾಗವನ್ನು ತುಂಬಬಲ್ಲ ನಟಿ ಇನ್ನೂ ಸಿಕ್ಕಿಲ್ಲ!

ಇವತ್ತಿಗೂ ಕಲ್ಪನಾ ಎಂದ ತಕ್ಷಣ ಬೆಳ್ಳಿಮೋಡ, ಶರಪಂಜರ, ಗೆಜ್ಜೆಪೂಜೆ, ಕಪ್ಪು ಬಿಳುಪು, ನಾಂದಿ, ಉಯ್ಯಾಲೆ, ಬಂಗಾರದ ಹೂವು, ಮಣ್ಣಿನ ಮಗ, ಸರ್ವಮಂಗಳ, ಸಾಕು ಮಗಳು, ಕರುಳಿನ ಕರೆ, ಹಣ್ಣಲೆ ಚಿಗುರಿದಾಗ, ಗಂಧದಗುಡಿ ದಾರಿತಪ್ಪಿದ ಮಗ, ಬಯಲು ದಾರಿ, ಕನ್ನಿಕಾಪರಮೇಶ್ವರಿ, ಎರಡು ಕನಸು, ಮುಕ್ತಿ, ಮಲೆಯ ಮಕ್ಕಳು, ಮುಂತಾದ ಕಲ್ಪನಾ ಅಭಿನಯದ ಚಿತ್ರ ರತ್ನಗಳು ಕಣ್ಪರದೆಯ ಮೇಲೆ ತೇಲಿ ಬರುತ್ತವೆ. ಹೀಗೆ ಕಲ್ಪನಾ ಅಭಿನಯಿಸಿದ ಒಂದೊಂದು ಚಿತ್ರವೂ ಅವರ ಮೇರು ಪ್ರತಿಭೆಯಿಂದಾಗಿ ಕನ್ನಡ ಚಿತ್ರಲೋಕವನ್ನು ಬೆಳಗಿವೆ. ಇತರ ಭಾಷಿಕರೂ ಇತ್ತ ತಿರುಗಿ ನೋಡುವಂತೆ ಮಾಡಿವೆ. ವಿಶೇಷವಾಗಿ ಕನ್ನಡದ ಮೇರುನಟ ಡಾ.ರಾಜ್ ಜೋಡಿಯಾಗಿ 19 ಚಿತ್ರಗಳಲ್ಲಿ ನಟಿಸಿದ ಹೆಗ್ಗಳಿಕೆ ಹೊಂದಿರುವ ಕಲ್ಪನಾ ಅವರು ಡಾ.ರಾಜ್ ಜೊತೆ ನಟಿಸಿರುವ 'ಬಂಗಾರದ ಹೂವು' ಹಾಗೂ 'ಮಣ್ಣಿನಮಗ' ಚಿತ್ರಗಳು ರಾಷ್ಟ್ರಪ್ರಶಸ್ತಿಗೆ ಭಾಜನವಾಗಿವೆ. ಕನ್ನಡದ ಕೀರ್ತಿಪತಾಕೆಯನ್ನು ರಾಷ್ಟ್ರವ್ಯಾಪಿಗೊಳಿಸಿವೆ. ಹಾಗೆಯೇ ಡಾ. ರಾಜ್ ಜೊತೆಗಿನ 'ಹಣ್ಣೆಲೆ ಚಿಗುರಿದಾಗ' ಮತ್ತು 'ಬಂಗಾರದ ಹೂವು' ಚಿತ್ರಗಳ ಉತ್ತಮ ನಟನೆಗಾಗಿ ಕರ್ನಾಟಕ ಸರ್ಕಾರದಿಂದ ಎರಡು ಬಾರಿ ಕಲ್ಪನಾ ಅವರಿಗೆ 'ಶ್ರೇಷ್ಠನಟಿ ರಾಜ್ಯ ಪ್ರಶಸ್ತಿ' ಲಭಿಸಿದೆ. ಒಂದು ಕಾಲದಲ್ಲಿ ರಾಜ್–ಕಲ್ಪನಾ ಜೋಡಿ ಎಷ್ಟೊಂದು ಜನಪ್ರಿಯವಾಗಿತ್ತೆಂದರೆ 'ಅರಗಿಣಿ'ಯ ಶತಮಾನದ ಶ್ರೇಷ್ಠರು ಜನಾಭಿಪ್ರಾಯ ಸಂಗ್ರಹದಲ್ಲಿ ರಾಜ್–ಕಲ್ಪನಾ ಜೋಡಿ ಮೊದಲಿಗರಾಗಿ ಆಯ್ಕೆಯಾಗಿದ್ದರು. ಅಷ್ಟೇ ಅಲ್ಲದೆ ಈ ಜೋಡಿ ನಟಿಸಿದ್ದ 'ಉಯ್ಯಾಲೆ' ಚಿತ್ರ ಎಪ್ಪತ್ತರ ದಶಕದಲ್ಲೇ ವಿದೇಶಗಳಲ್ಲಿ ಪ್ರದರ್ಶಿಸಲ್ಪಟ್ಟು ಜನಮೆಚ್ಚುಗೆ ಗಳಿಸಿದ ಹಿರಿಮೆಗೆ ಪಾತ್ರವಾಗಿತ್ತು.

ಕಲೆಯ ರಸಗಂಗೆಯಲ್ಲಿ ಮಿಂದೆದ್ದು, ಸೌಂದರ್ಯವಲ್ಲಿಯಾಗಿ ಕಂಗೊಳಿಸುತ್ತ ಬಣ್ಣದ ಲೋಕಕ್ಕೆ ತಮ್ಮಿಡೀ ಜೀವ–ಜೀವನವನ್ನೆಲ್ಲಾ ಸಮರ್ಪಿಸಿಕೊಂಡಿದ್ದ ಕಲಾಚೇತನ ಕಲ್ಪನಾ ತಾಯಿ ಭುವನೇಶ್ವರಿಯ ಕೊರಳ ಮಾಲೆಯಂತಿದ್ದವರು. ಅಭಿನಯರಂಗದಲ್ಲಿ ಹಲವು ಹತ್ತು ಮೊದಲುಗಳನ್ನು ತಮ್ಮದಾಗಿಸಿಕೊಂಡವರು. ಕರ್ನಾಟಕ ಸರ್ಕಾರದಿಂದ ಮೊಟ್ಟಮೊದಲಿಗೆ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದ ಹೆಗ್ಗಳಿಕೆ. ಒಂದಲ್ಲ ಎರಡಲ್ಲ ಮೂರು ಬಾರಿ ಶ್ರೇಷ್ಠನಟಿ ರಾಜ್ಯ ಪ್ರಶಸ್ತಿ ಗಳಿಸಿದ ಹಿರಿಮೆ, ಫಿಲಂಫೇರ್ ಪ್ರಶಸ್ತಿ ಪಡೆದ ಪ್ರಪ್ರಥಮ ಕನ್ನಡ ನಟಿ ಎಂಬ ಗರಿಮೆ. ಅಚ್ಚರಿಯೆಂದರೆ ಎಪ್ಪತ್ತರ ದಶಕದಲ್ಲೇ ರಾಜಧಾನಿ ಬೆಂಗಳೂರಿನ ಮುಖ್ಯ ರಸ್ತೆಯೊಂದಕ್ಕೆ ಮಿನುಗುತಾರೆ ಕಲ್ಪನಾ ಹೆಸರನ್ನು ನಾಮಕರಣ ಮಾಡಲಾಗಿದೆ. ಇಂಥ ನಾಗರಿಕ ಗೌರವ ಪಡೆದ ಮೊದಲ ಕನ್ನಡ ಚಿತ್ರನಟಿ ಕಲ್ಪನಾ ಎಂಬ ಹೆಚ್ಚುಗಾರಿಕೆ ಕೂಡ ಇವರ ಕೀರ್ತಿಕಳಶದಲ್ಲಿದೆ. ಇವೆಲ್ಲಕ್ಕೂ ತೋರಣ ಕಟ್ಟಿದಂತೆ ಬರಗೂರು ರಾಮಚಂದ್ರಪ್ಪನವರ ಮುನ್ನುಡಿಯೊಡನೆ ಒಂದು ಸಾವಿರದ ನೂರು ಪುಟಗಳುಳ್ಳ ಬೃಹತ್ ಸಂಸ್ಮರಣಗ್ರಂಥವೊಂದು ಇವರ ಗೌರವಾರ್ಥ ಪ್ರಕಟಗೊಂಡಿದ್ದು, 2014 ಜುಲೈ 18ರಂದು ಲೋಕಾರ್ಪಣೆಗೊಂಡಿದೆ. ಇಂಥ ಬೃಹತ್ ಸಂಸ್ಮರಣಗ್ರಂಥ ಸಮರ್ಪಣೆಯ ಗೌರವಕ್ಕೆ ಪಾತ್ರರಾದ ಕನ್ನಡ ಚಿತ್ರರಂಗದ, ಅಷ್ಟೇ ಏಕೆ ಭಾರತೀಯ ಚಿತ್ರರಂಗದ, ಇನ್ನೂ ಹೇಳಬೇಕೆಂದರೆ ವಿಶ್ವಚಿತ್ರರಂಗದ ಮೊಟ್ಟಮೊದಲ ಅಭಿನೇತ್ರಿ ಎಂಬ ಖ್ಯಾತಿ ಕೂಡ ಇವರದ್ದೇ ಆಗಿದೆ.

ಬದುಕಿದ್ದು 36 ವರ್ಷ; ನಟಿಸಿದ್ದು 78 ಚಿತ್ರ; ಕನ್ನಡನಾಡಿನ ರಸಿಕರ ಮನವ ಸೂರೆಗೊಂಡು ಕನ್ನಡ ಚಿತ್ರಜಗತ್ತಿನ ಅನಭಿಷಿಕ್ತ ಸಾಮ್ರಾಜ್ಞೆಯಾಗಿ ಮೆರೆದ ಮಿನುಗುತಾರೆ ಕಲ್ಪನಾ ಜನಿಸಿದ್ದು ಕೃಷ್ಣಮೂರ್ತಿ ಮತ್ತು ಜಾನಕಮ್ಮ ದಂಪತಿಯ ಸುಪುತ್ರಿಯಾಗಿ 1943 ಜುಲೈ 18. ಜನ್ಮ ಸ್ಥಳ ದಕ್ಷಿಣದ ಸಿರಿ ನಾಡು ಮಂಗಳೂರು ಸಮೀಪದ ಉಪ್ಪಳದ ಬೇಕೂರು. ಹುಟ್ಟು ಹೆಸರು ಶರತ್ ಲತಾ. ಮರಣಿಸಿದ್ದು 1979 ಮೇ 12. ಜೀವಿಸಿದ್ದದ್ದು ಕೇವಲ 36 ವರ್ಷಗಳು. ಬೆಳ್ಳಿತೆರೆಗೆ ಬಂದದ್ದು 1963. ಮೊದಲ ಚಿತ್ರ 'ಸಾಕುಮಗಳು'. ಕೊನೆಯ ಚಿತ್ರ 'ಮಲೆಯ ಮಕ್ಕಳು' (1978). ಒಟ್ಟಾರೆ ಬಣ್ಣದ ಲೋಕದಲ್ಲಿದ್ದದ್ದು 15 ವರ್ಷಗಳು ಮಾತ್ರ. ಈ ಅವಧಿಯಲ್ಲಿ ಕಲ್ಪನಾ ಅಭಿನಯಿಸಿದ ಒಟ್ಟು ಚಿತ್ರಗಳ ಸಂಖ್ಯೆ 78. ಅದರಲ್ಲಿ ಕನ್ನಡ 69. ತಮಿಳು 4. ತೆಲುಗು 1. ಮಲೆಯಾಳಂ 2, ತುಳು 3. ಕಲ್ಪನಾ ಚಿತ್ರಗಳನ್ನು ನಿರ್ದೇಶಿಸಿದ ಒಟ್ಟು ನಿರ್ದೇಶಕರ ಸಂಖ್ಯೆ 51. ಅತ್ಯಲ್ಪ ಅವಧಿಯಲ್ಲಿ ಕನ್ನಡ ಚಿತ್ರರಂಗವಿರುವತನಕವೂ ಶಾಶ್ವತವಾಗಿರುವಂತಹ ಅದ್ಭುತ ಸಾಧನೆಯನ್ನು ಮಾಡಿ ಮತ್ತೆ ಬಾರದ ಲೋಕದತ್ತ ಹೊರಟು ಹೋದ ಮಿನುಗುತಾರೆ ಕಲ್ಪನಾ ಎಂದೂ ಮರೆಯದ, ಯಾವತ್ತೂ ಮಾಸದ ಬೆಳ್ಳಿ ನಕ್ಷತ್ರವಾಗಿದ್ದಾರೆ.

ಹೂವಿನ ದರ ಇಳಿಕೆ; ಹಣ್ಣು, ಎಳನೀರು ದುಪ್ಪಟ್ಟು





ಮೈಸೂರು, ಜು.17(ಸಿಎನ್)–ಮುಂಗಾರು ಮಂಕಾದ ಹಿನ್ನೆಲೆಯಲ್ಲಿ ದುಪ್ಪಟ್ಟು ದರಕ್ಕೆ ಮಾರಾಟವಾಗುತ್ತಿದ್ದ ಹೂವಿನ ದರ ಕುಸಿತ ಕಂಡಿದೆ. ಈಗ ಅಗ್ಗದ ದರದಲ್ಲಿ ಮಾರಾಟವಾಗುತ್ತಿದೆ. ಆಷಾಢದಲ್ಲಿ ಹೂವಿನ ದರ ಏರಿಕೆಯತ್ತ ಮುಖಮಾಡಿತ್ತು. ಆದರೆ ಆಷಾಢ ಕಳೆದ ಬಳಿಕ ಹೂವಿನ ದರ ಗಣನೀಯವಾಗಿ ಕಡಿಮೆಯಾಗಿದೆ. ಇನ್ನು ಎಳನೀರು, ಆಫ್‌ಸೀಸನ್ ಹಣ್ಣುಗಳ ಬೆಲೆಯಲ್ಲಿ ಏರಿಕೆ ಕಂಡಿದೆ.

ನಗರದ ದೇವರಾಜ, ವಾಣಿವಿಲಾಸ, ಎಪಿಎಂಸಿ, ಮಂಡಿ, ನಂಜುಮಳಿಗೆ ಮಾರುಕಟ್ಟೆಗಳಲ್ಲಿ ಹೂವು ಕಡಿಮೆ ದರಕ್ಕೆ ಮಾರಾಟವಾಗುತ್ತಿದೆ. ಆದರೆ ಮಳೆಗಾಲದಲ್ಲಿ ಕಡಿಮೆ ಇರಬೇಕಾಗಿದ್ದ ಎಳನೀರಿನ ದರ ಏರುತ್ತಲೇ ಸಾಗಿದ್ದು, 40–50 ರೂ.ಗೆ ಮಾರಾಟವಾಗುತ್ತಿವೆ. ಹಣ್ಣುಗಳ ಬೆಲೆಯೂ ಏರಿಕೆಯತ್ತ ಸಾಗುತ್ತಿವೆ. ಹೂವಿನ ದರ ಕಡಿಮೆಯಿದ್ದರೂ ಗ್ರಾಹಕರು ಖರೀದಿಗೆ ಹಿಂದೇಟು ಹಾಕುತ್ತಿದ್ದ ದೃಶ್ಯಗಳು ಸಹ ಕಂಡುಬಂದವು.

ಹೂ ದರ ಇಳಿಕೆ: ಸತತವಾಗಿ ಏರಿಕೆಯಾಗಿದ್ದ ಹೂವಿನ ದರ ಆಷಾಢ ಬಳಿಕ ಕಡಿಮೆಯಾಗಿದೆ. ಒಂದು ಕೆಜಿ ಮಲ್ಲಿಗೆ 700 ರೂ. ಗಳಿಂದ 240 ರಿಂದ 300 ರೂಗೆ ಇಳಿಕೆಯಾಗಿದೆ. ಮರಳೆ 360 ರಿಂದ 120–160, ಚೆಂಡು ಹೂ 40, ಸೇವಂತಿಗೆ (ಒಂದು ಮಾರು) 100–70, ಗುಲಾಬಿ 160–80 ಇಳಿಕೆಯಾಗಿದೆ. ಇನ್ನು ಕನಕಾಂಬರ 600–400, ಸುಗಂಧ ರಾಜ 80–100 ರೂ.ಗಳಿಗೆ ಮಾರಾಟವಾಗುತ್ತಿದೆ.

ಹಣ್ಣಿನ ದರ ಏರಿಕೆ: ಹಣ್ಣಿನ ದರ ಏರಿಕೆಯತ್ತಲೇ ಸಾಗಿದೆ. ಮಾರುಕಟ್ಟೆಗಳಲ್ಲಿ ಒಂದು ಕೆಜಿ ಸೇಬು 220 ರಿಂದ 260, ದಾಳಿಂಬೆ 200 ರಿಂದ 260, ದ್ರಾಕ್ಷಿ 200, ಡ್ರಾಗನ್ (ಕೆಂಪು)ಹಣ್ಣು 200, ಮೂಸಂಬಿ 100, ಕಿತ್ತಳೆ 160, ಪಪ್ಪಾಯ 40, ಪೈನಾಪಲ್ 60, ಕರಬೂಜ 60, ಕಲ್ಲಂಗಡಿ 30 ರೂ. ಸೇರಿ ಇನ್ನಿತರ ಹಣ್ಣುಗಳ ಬೆಲೆಯೂ ತುಸು ಏರಿಕೆಯಾಗಿದೆ. ಇನ್ನು ವಿದೇಶಿ ಹಣ್ಣುಗಳು ಒಂದು ಸಣ್ಣ ಬಾಕ್ಸ್‌ಗೆ ವಿವಿಧ ದರದಲ್ಲಿ ಮಾರಾಟವಾಗುತ್ತಿವೆ. ಕೀವಿ ಹಣ್ಣು 120, ಲೀಚಿ 280, ಪ್ಲಮ್ 200 ರೂಪಾಯಿ ಇದೆ.

ಎಳನೀರು ದರ ದುಪ್ಪಟ್ಟು: ಮಳೆಗಾಲದಲ್ಲಿ ಕಡಿಮೆ ಇರಬೇಕಾಗಿದ್ದ ಎಳನೀರಿನ ದರ, ಇದೀಗ 40–50 ರೂ.ಗಳಿಗೆ ಮಾರಾಟವಾಗುತ್ತಿದೆ. ರಾಜ್ಯದಲ್ಲಿ ಸಮರ್ಪಕ ಮಳೆ ಕೊರತೆಯಿಂದಾಗಿ ಎಳನೀರು ಮಾರುಕಟ್ಟೆಗೆ ಬಾರದೇ ದರ ಹೆಚ್ಚಾಗುತ್ತಿದೆ ಎಂದು ಮಾರಾಟಗಾರರೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಈ ಮೊದಲು ಮೈಸೂರು ಜಿಲ್ಲೆಯ ಟಿ.ನರಸೀಪುರ, ಸುತ್ತೂರು, ಜಿ.ಮಾರಳ್ಳಿ, ಹೆಚ್.ಡಿ. ಕೋಟೆಗಳಿಂದ 4 ರಿಂದ 5 ಸಾವಿರ ಕೆಜಿ ಹೂ ಮಾರುಕಟ್ಟೆಗೆ ಬರುತ್ತಿದ್ದವು. ಇದೀಗ ಮಳೆ ಕೈಕೊಟ್ಟ ಕಾರಣ ಇಳುವರಿ ಕಡಿಮೆಯಾಗಿ ಕೇವಲ 800 ರಿಂದ 1000 ಕೆಜಿ ಮಾತ್ರ ಬರುತ್ತಿದೆ. ಈಗ ಯಥೇಚ್ಛವಾಗಿ ಮಾರುಕಟ್ಟೆಯಲ್ಲಿರುವ ಹೂವುಗಳು ತಮಿಳುನಾಡಿನಿಂದ ಬಂದಿವೆ. ಸದ್ಯ ಹೂವಿನ ದರ ಕಡಿಮೆಯಾಗಿದೆ. ಆದರೆ ವರಮಹಾಲಕ್ಷ್ಮಿ ಹಬ್ಬ ಸಮೀಪಿಸುತ್ತಿದ್ದಂತೆ ಮೂರು ಪಟ್ಟು ಹೆಚ್ಚಾಗುವ ಸಾಧ್ಯತೆಯಿದೆ.

–ಶ್ರೀನಿವಾಸ್, ಹೂ ವ್ಯಾಪಾರಿ.



ಈಗ ಆಫ್‌ಸೀಸನ್ ಆಗಿರುವುದರಿಂದ ಹಣ್ಣಿನ ದರ ಏರಿಕೆಯಾಗಿದೆ. ಅಲ್ಲದೇ ಮಳೆ ಕೊರತೆಯಿಂದಲೂ ಹಣ್ಣುಗಳ ಬೆಲೆ ದುಬಾರಿಯಾಗಿದೆ. ವಾಡಿಕೆಗಿಂತ ಮಳೆ ಆಗದೇ ಇದ್ದಲ್ಲಿ, ಮತ್ತಷ್ಟೂ ಬೆಲೆ ಏರಿಕೆಯಾಗುವ ಸಾಧ್ಯತೆ ಇದೆ.

–ಖಾನ್, ಹಣ್ಣಿನ ವ್ಯಾಪಾರಿ



ಈ ಬಾರಿ ಮಳೆ ಕೊರತೆ ಉಂಟಾಗಿದ್ದು, ಎಳನೀರು ಇಳುವರಿ ಕಡಿಮೆಯಾಗಿದೆ. ಅಲ್ಲದೇ ಬಾಂಬೆಯವರು ಇಲ್ಲಿನ ಎಳನೀರು ಲೋಡ್‌ಗಳನ್ನು ಹೆಚ್ಚಿನ ದರ ನೀಡಿ ಖರೀದಿ ಮಾಡಿ ಕೊಂಡೊಯ್ಯುತ್ತಿದ್ದಾರೆ. ಆದ್ದರಿಂದ ಮಾರುಕಟ್ಟೆಗೆ ಎಳನೀರು ಬರುತ್ತಿಲ್ಲ. ಹೀಗೆ ಮುಂದುವರಿದಲ್ಲಿ ಬೇಸಿಗೆ ಬರುವ ಹೊತ್ತಿಗೆ 80 ರೂ. ತಲುಪಿದರೂ ಅಚ್ಚರಿಯಿಲ್ಲ.

–ಶಾರದಮ್ಮ, ಎಳನೀರು ವ್ಯಾಪಾರಿ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಮಂಗಳವಾರ 18 ಜುಲೈ 2023

'ದಶಕೋಟಿ ರಾಮ ಜಪಯಜ್ಞ'ದಲ್ಲಿ ಸಾರ್ವಜನಿಕರು ಪಾಲ್ಗೊಳ್ಳಿ



ಮೈಸೂರು, ಜು.17(ಎಸ್‌ಪಿಎನ್)– ಆಷಾಢ ಮಾಸ ಕಳೆದು ಅಧಿಕಮಾಸ ಮಂಗಳವಾರ (ಜು.18)ದಿಂದ ಆರಂಭ ವಾಗುತ್ತಿದೆ. ಅದು ಶ್ರಾವಣ ಮಾಸದಲ್ಲಿ ಬಂದಿರುವುದು ಮತ್ತೊಂದು ವಿಶೇಷ. ಮಂಗಳವಾರ (ಜು.18ರಿಂದ) ಆಗಸ್ಟ್ 15ರವರೆಗೆ ಅಧಿಕ ಮಾಸ ಆಚರಣೆ ಯಲ್ಲಿರುತ್ತದೆ. ಈ ವೇಳೆ ದಶಕೋಟಿ ರಾಮ ಜಪಯಜ್ಞಕ್ಕೆ ಪೇಜಾವರ ಶ್ರೀಗಳು ನಾಡಿನ ಜನತೆಗೆ ಕರೆ ನೀಡಿದ್ದಾರೆ.

ಅಧಿಕ ಶ್ರಾವಣ ಮಾಸದಲ್ಲಿ ದೇವತಾ ಪ್ರೀತ್ಯರ್ಥವಾಗಿ ಮಾಡುವ ಯಾವುದೇ ಸತ್ಕರ್ಮಗಳಿಗೆ ಅತ್ಯಧಿಕ ಫಲವೆಂದು ಶಾಸ್ತ್ರಗಳು ಸಾರಿಸಾರಿ ಹೇಳಿವೆ. ಪುರು ಷೋತ್ತಮ ಮಾಸವೆಂದೇ ಕರೆಯಲ್ಪ ಡುವ ಈ ಅಧಿಕ ಮಾಸದಲ್ಲಿ ನಾಡಿನಾ ದ್ಯಂತ ಅಯೋಧ್ಯಾಪತಿ ಶ್ರೀರಾಮನ ಕೃಪೆ ಗಾಗಿ, ಲೋಕ ಕ್ಷೇಮಕ್ಕಾಗಿ ಪ್ರಾರ್ಥಿಸಿ 'ದಶಕೋಟಿ ರಾಮ ಜಪಯಜ್ಞ'ದಲ್ಲಿ ನಾಡಿನ ಪ್ರತಿಯೊಬ್ಬರು ಪಾಲ್ಗೊಳ್ಳು ವಂತೆ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಮನವಿ ಮಾಡಿದ್ದಾರೆ.

ಸನಾತನ ಧರ್ಮಿಯರು ತಮ್ಮ ತಮ್ಮ ಮನೆಗಳಲ್ಲಿ ಮಕ್ಕಳು, ಯುವಕ–ಯುವತಿಯರು, ವೃದ್ಧರು ಸೇರಿದಂತೆ ಶುದ್ಧಮನಸ್ಸಿನಿಂದ ಕನಿಷ್ಠ ಹತ್ತು ನಿಮಿಷಗಳ ಕಾಲ 108 ಬಾರಿ 'ಶ್ರೀ ರಾಮ ಜಯರಾಮ, ಜಯಜಯ ರಾಮ' ಎಂದು ಲೋಕ ಹಿತಕ್ಕೆ ಜಪ ಯಜ್ಞ ಮಾಡುವಂತೆ ಕೋರಿದ್ದಾರೆ.

ಅದರ ಜೊತೆಗೆ ಎಲ್ಲಾ ದೇವಸ್ಥಾನ, ಮಠ–ಮಂದಿರಗಳು, ಭಜನಾ ಮಂದಿರಗಳು, ಸೇವಾ ಸಂಸ್ಥೆಗಳು, ಸಂಘಟನೆಗಳು, ಶಿಕ್ಷಣ ಸಂಸ್ಥೆಗಳು (ಹಿಂದೂಯೇತರ ವಿದ್ಯಾರ್ಥಿಗಳನ್ನು ಜಪಯಜ್ಞದಲ್ಲಿ ಪಾಲ್ಗೊಳ್ಳುವಂತೆ ಒತ್ತಾಯಿಸಬೇಕಿಲ್ಲ) ಹಾಗೂ ಇತರೆ ಸ್ಥಳದಲ್ಲಿ ಒಂದು ತಿಂಗಳ ಪರ್ಯಂತ ಇಲ್ಲವೇ 3 ಅಥವಾ 5 ದಿನಗಳಾದರೂ ರಾಮ ಜಪ ಯಜ್ಞದಲ್ಲಿ ಜನರು ಸ್ವಯಂ ಪ್ರೇರಿತರಾಗಿ ಪಾಲ್ಗೊಳ್ಳುವಂತೆ ಶ್ರೀಗಳು ಮನವಿ ಮಾಡಿದ್ದಾರೆ.

ಕೋಟ್ಯಂತರ ಹಿಂದೂಗಳ ಕನಸು ನೆರವೇರುವ ದಿನ ಹತ್ತಿರ: ಮುಂದಿನ ವರ್ಷ 2024ರ ಜನವರಿ ಅಂತ್ಯದಲ್ಲಿ ನೂತನ ರಾಮ ಮಂದಿರದಲ್ಲಿ ಶ್ರೀ ಸೀತಾ ರಾಮಚಂದ್ರ ವಿಗ್ರಹ ಪ್ರತಿಷ್ಠಾಪನೆಯೂ ನೆರವೇರಲಿದೆ. ಈ ವೇಳೆ ಶ್ರೀರಾಮ ಪ್ರಭುವಿನ ಹೆಸರಿನಲ್ಲಿ ಬೇರೆ ಬೇರೆ ರೀತಿಯ ಸೇವಾ ಕಾರ್ಯಕ್ರಮಗಳನ್ನು ಭಕ್ತರು ಹಮ್ಮಿಕೊಂಡು ರಾಮನ ಕೃಪೆಗೆ ಪಾತ್ರರಾಗುವಂತೆ ಪ್ರಕಟಣೆಯಲ್ಲಿ ಶ್ರೀಗಳು ಮನವಿ ಮಾಡಿದ್ದಾರೆ.

ಶಾಸಕ ಕೆ.ಹರೀಶ್‌ಗೌಡರ ಅದ್ಧೂರಿ ಹುಟ್ಟುಹಬ್ಬ ಆಚರಣೆ



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಸಿ.ಭಾಸ್ಕರ್, ಮಾರ್ಕೆಟ್ ದಿನೇಶ್, ಕಾರ್ಪೋರೇಟರ್ ಗೋಪಿ, ಕೇಬಲ್ ಪುಟ್ಟರಾಜು, ರಾಜೇಶ್, ಕೌಶಿಕ್, ಜೀವನ್, ಸತೀಶ್, ಸಂತೋಷ್, ಪ್ರಸನ್ನ ಮತ್ತಿತರರು ಅಭಿನಂದಿಸಿ, ಶುಭ ಕೋರಿದರು.



ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬದ ಅಂಗವಾಗಿ ನಜರ್‌ಬಾದ್ ಗೆಳೆಯರ ಬಳಗದ ವತಿಯಿಂದ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಎಸ್.ಆರ್.ರವಿ, ವರದರಾಜು, ಅರುಣಾ, ಪಾಪ, ಮೋಹನ, ಶಾನು, ದಿನೇಶ್, ವಿಜಯ್, ಭರತ್, ಮಹೇಶ್ ಮತ್ತಿತರರಿದ್ದಾರೆ.



ಶಾಸಕ ಕೆ.ಹರೀಶ್‌ಗೌಡ ಅವರಿಗೆ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ, ನಗರಪಾಲಿಕೆ ಸದಸ್ಯ ಗೋಪಿ, ನಗರ ಕಾಂಗ್ರೆಸ್ ಹಿಂದುಳಿದ ವರ್ಗಗಳ ಅಧ್ಯಕ್ಷ ಎನ್.ಆರ್.ನಾಗೇಶ್, ಪ್ರಧಾನ ಕಾರ್ಯದರ್ಶಿ ಯೋಗೇಶ್ ಉಪ್ಪಾರ, ಉಪಾಧ್ಯಕ್ಷ ರವಿನಂದನ, ಮಾರ್ಕೆಟ್ ದಿನೇಶ್, ಲೋಕೇಶ್‌ಕುಮಾರ್ ಹುಟ್ಟುಹಬ್ಬದ ಶುಭಾಶಯ ಕೋರಿದರು.



ಹುಟ್ಟುಹಬ್ಬ ಆಚರಿಸಿಕೊಂಡ ಶಾಸಕ ಕೆ.ಹರೀಶ್‌ಗೌಡರಿಗೆ ಕಾಂಗ್ರೆಸ್ ಮುಖಂಡರಾದ ಎಸ್.ಕೆ ಗ್ರೂಪ್ಸ್ ಮುಖ್ಯಸ್ಥ ಎಚ್.ಎಸ್.ಸುಜಿತ್ ಕುಮಾರ್ ಶುಭ ಕೋರಿದರು. ಈ ವೇಳೆ ಕೆ.ದಿನೇಶ್, ಮಂಜುನಾಥ, ಧನುಷ್‌ಗೌಡ, ಆಟೋ ಪ್ರಕಾಶ್, ಪ್ರಸನ್ನ, ರವಿಕುಮಾರ್, ಅಬ್ದುಲ್, ಅಭಿಲಾಶ್, ಮಾರ್ಕೆಟ್ ಇಬ್ರಾಹಿಂ, ಶ್ರೀಕಾಂತ್, ಜೋಸೆಫ್, ಯೋಗೇಶ್, ನಿರಂಜನ್, ಪ್ರದೀಪ್, ಸೂರ್ಯ ನಾರಾಯಣ್, ಅಮರ್, ಪ್ರವೀಣ್, ಆನಂದ, ಮನುಗೌಡ, ರೋಹನ್, ಮಹೇಶ್ ಉಪಸ್ಥಿತರಿದ್ದರು.

ಮೈಸೂರು, ಜು.17(ಬಿಎಲ್‌ಯು)– ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರ ಹುಟ್ಟುಹಬ್ಬವನ್ನು ಇಂದು ಅದ್ಧೂರಿಯಾಗಿ ಆಚರಿಸಲಾಯಿತು.

ದಕ್ಷಿಣ ಕಾಶಿ ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನಕ್ಕೆ ಸೋಮವಾರ ಮುಂಜಾನೆ ಭೇಟಿ ನೀಡಿ, ಕೆ.ಹರೀಶ್‌ಗೌಡರು ಶ್ರೀಕಂಠೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದರು.

ತರುವಾಯ ಮೈಸೂರಿನ ಕೆ.ಟಿ. ಸ್ಟ್ರೀಟ್‌ನ ಶ್ರೀ ಭೈರವೇಶ್ವರ ದೇವಸ್ಥಾನ, ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನಕ್ಕೆ ಕೂಡ ಭೇಟಿ ನೀಡಿ, ದೇವರಿಗೆ ಅಭಿಮಾನಿಗಳು, ಹಿತೈಷಿಗಳೊಂದಿಗೆ ವಿಶೇಷ ಪೂಜೆ ಸಲ್ಲಿಸಿದರು.

ಇದೇ ವೇಳೆ ನಗರದ ಮಂಚೇಗೌಡನ ಕೊಪ್ಪಲಿನ ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಪುಸ್ತಕ ಸೇರಿದಂತೆ ಇತರೆ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಿದರು. ನಂತರ ಚೆಲುವಾಂಬ ಆಸ್ಪತ್ರೆಯಲ್ಲಿ ಸೋಮವಾರ ಜನಿಸಿದ ಮಕ್ಕಳಿಗೆ ಬೇಬಿ ಕಿಟ್ ವಿತರಿಸಿದರು.

ಚಾಮರಾಜ ಕ್ಷೇತ್ರದ ಹಲವೆಡೆ ಸನ್ಮಾನ ಸಮಾರಂಭಗಳಲ್ಲಿ ಶಾಸಕ ಹರೀಶ್‌ಗೌಡ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಹರೀಶ್‌ಗೌಡರಿಗೆ ಮೈಸೂರು ಪೇಟ ತೊಡಿಸಿ, ಭಾರೀ ಗಾತ್ರದ ನಾನಾ ರೀತಿಯ ಹಾರ ಹಾಕಿ, ಸನ್ಮಾನಿಸಿ ಶುಭಾಶಯ ಕೋರಿದರು. ಶೇಷಾದ್ರಿ ಐಯ್ಯರ್ ರಸ್ತೆಯಲ್ಲಿ ವಿದ್ಯಾವರ್ಧಕ ಕಾಲೇಜು ಎದುರು ಉದ್ಯಮಿ ಹಾಗೂ ಸಮಾಜ ಸೇವಕ ಸುಜಿತ್‌ಕುಮಾರ್ ಹರೀಶ್‌ಗೌಡರ ಹುಟ್ಟುಹಬ್ಬದ ಅಂಗವಾಗಿ ಅದ್ಧೂರಿ ಸಮಾರಂಭವನ್ನೇ ಏರ್ಪಡಿಸಿದ್ದರು.



ನಾಯಕ ಸಮುದಾಯದ ಮುಖಂಡರು ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಿಸಿದರು. ಪಾಲಿಕೆ ಸದಸ್ಯ ಲೋಕೇಶ್ ಪಿಯಾ, ಮುಖಂಡರಾದ ಸತೀಶ್, ಲೋಕೇಶ್, ಸಿದ್ದಪ್ಪ, ಹೇಮಂತ್, ಯೋಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಹಾವುಗಳ ಬಗ್ಗೆ ಅನಗತ್ಯ ಭಯ ಬೇಡ

ಹಾವುಗಳ ರಕ್ಷಣೆ ದಿನಾಚರಣೆಯಲ್ಲಿ ಸ್ನೇಕ್ ಶ್ಯಾಮ್ ಅಭಯ



ಮೈಸೂರು,ಜು.17–ಅನಗತ್ಯ ಭಯದಿಂದ ಹಾವುಗಳನ್ನು ಸಾಯಿಸಲಾಗುತ್ತಿದೆ. ಎಲ್ಲಾ ಹಾವುಗಳು ವಿಷಕಾರಿಯಲ್ಲ ಎಂದು ಉರಗ ರಕ್ಷಕ ಸ್ನೇಕ್ ಶ್ಯಾಮ್ ಹೇಳಿದರು.

ನಗರದ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮುಂಭಾಗ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಹಾಗೂ ಪರಿಸರ ಸ್ನೇಹಿ ತಂಡದ ಆಶ್ರಯದಲ್ಲಿ ಹಾವುಗಳ ದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅರಣ್ಯ ಇಲಾಖೆ ಪರಿಸರ ಹಾಗೂ ವನ್ಯಜೀವಿಗಳ ಸಂರಕ್ಷಣೆಗೆ ಮುಂದಾಗಿರುವುದಕ್ಕೆ ಸಾರ್ವಜನಿಕರು ಸಹಕರಿಸಬೇಕು. ನಾಗರಹಾವು, ಕಾಳಿಂಗ ಸರ್ಪ ವಿಷಕಾರಿಯಾಗಿದ್ದು, ಹಪ್ಪಟೆ, ಕೇರೆಹಾವು, ಹಸಿರು ಹಾವು ಮುಂತಾದವು ವಿಷಕಾರಿಯಲ್ಲ. ಕೆಲವು ಹಾವುಗಳು ಹೆಚ್ಚು ವಿಷಕಾರಿಯಲ್ಲದಿದ್ದರೂ, ಹಪ್ಪಟೆ ಹಾವು ಕಚ್ಚಿದರೆ ವೈದ್ಯರ ಬಳಿ ತೆರಳಿ ಚಿಕಿತ್ಸೆ ಪಡೆಯಬೇಕು. ಹಾವುಗಳ ಬಗ್ಗೆ ಅನಗತ್ಯ ಭಯ ಬೇಡ ಎಂದು ಸಲಹೆ ನೀಡಿದರು.

ಹಾವು ಕಚ್ಚಿದಾಗ ಬಹುತೇಕ ಜನರು ಆಘಾತಕ್ಕೊಳಗಾಗಿ ಹೃದಯಾಘಾತದಿಂದ ಸಾವನ್ನಪ್ಪುತ್ತಾರೆ. ಹಾವು ಕಚ್ಚಿದಾಗ ವ್ಯಕ್ತಿಗೆ ಧೈರ್ಯ ತುಂಬಬೇಕು ಮತ್ತು ಸಾಧ್ಯವಾದಷ್ಟು ಬೇಗ ಸಮೀಪದ ಆಸ್ಪತ್ರೆಗೆ ಕರೆದೊಯ್ಯಬೇಕು ಎಂದರು.

ಕೆಎಂಪಿ ಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಮಾತನಾಡಿ, ಕೋವಿಡ್‌ನಂತಹ ಕಷ್ಟಕಾಲದಲ್ಲೂ ಮನೆಗಳಿಗೆ ಹಾವು ಬಂದಾಗ ಸ್ನೇಕ್ ಶ್ಯಾಮ್ ಅವರು ಹಾವನ್ನು ಸಂರಕ್ಷಿಸಿದ್ದಾರೆ. ಹೀಗೆ 86 ಸಾವಿರಕ್ಕೂ ಹೆಚ್ಚು ಹಾವನ್ನು ಸಂರಕ್ಷಿಸಿದ್ದಾರೆ. ಪರಿಸರ ಸಂರಕ್ಷಣೆ ಜೊತೆಯಲ್ಲೇ ಧಾರ್ಮಿಕ ಕೇಂದ್ರವನ್ನು ಸ್ಥಾಪಿಸಿರುವುದು ಶ್ಲಾಘನೀಯ. ಪರಿಸರ ಸಂರಕ್ಷಣೆ ವಿಚಾರವಾಗಿ ಪಠ್ಯಪುಸ್ತಕಗಳಲ್ಲಿ ಸ್ನೇಕ್ ಶ್ಯಾಮ್ ಅವರ ಪರಿಸರ ಕಾಳಜಿಯ ವಿಷಯ ಅಳವಡಿಸಿ ಸಣ್ಣಮಕ್ಕಳಲ್ಲಿ ಉರಗ ಮತ್ತು ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು. ಇದೇ ವೇಳೆ ಜಿ.ರಾಘವೇಂದ್ರ, ರಾಜೇಶ್, ರಾಕೇಶ್, ಪ್ರಸನ್ನ (ಅಪ್ಪಿ), ಬೈರತಿ ಲಿಂಗರಾಜು, ಹರೀಶ್ ನಾಯ್ಡು, ರವಿಚಂದ್ರ, ದುರ್ಗಾ ಪ್ರಸಾದ್, ಗಿರೀಶ್, ರಾಮ್‌ಮೂರ್ತಿ ಹಾಗೂ ಇನ್ನಿತರರು ಹಾಜರಿದ್ದರು.



ಮೈಸೂರಿನ ಒಂಟಿಕೊಪ್ಪಲ್ ಕ್ಲಬ್‌ನಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಮಿಲೇನಿಯಂ ವತಿಯಿಂದ 2023–24ನೇ ಸಾಲಿನ ಕ್ಲಬ್‌ನ ನೂತನ ಅಧ್ಯಕ್ಷ ಎ.ಸಿ.ರವಿ ಹಾಗೂ ಅವರ ತಂಡಕ್ಕೆ ಸೇವಾದೀಕ್ಷೆ ಕಾರ್ಯಕ್ರಮ ನೆರವೇರಿತು. ಈ ವೇಳೆ ಪಾಸ್ಟ್ ಮಲ್ಟಿಪಲ್ ಕೌನ್ಸಿಲ್ ಚೇರ್ ಪರ್ಸನ್ ಲಯನ್ ಡಾ.ನಾಗರಾಜ ವಿ.ಭೈರಿ ನೂತನ ಸದಸ್ಯರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಈ ಸಂದರ್ಭ ಲಯನ್ ಡಿ.ಎನ್.ಚಂದ್ರಶೇಖರ್, ಲಯನ್ ಹೇಮಂತಕುಮಾರ್ ಬನ್ನಾಲಿ, ಲಯನ್ ಸಿ.ಎಂ. ಲವ, ಲಯನ್ ಕೆ.ಪಿ.ಕಿರಣ್‌ಕುಮಾರ್, ಲಯನ್ ವಿ.ವೆಂಕಟೇಶ್, ಲಯನ್ ನ.ಗಂಗಾಧರಪ್ಪ, ಕ್ಲಬ್‌ನ ಸದಸ್ಯರು ಹಾಜರಿದ್ದರು.

ಯಾವುದೇ ಆರೋಪಕ್ಕೆ ದಾಖಲೆ ಇರಬೇಕು; ಕುಮಾರಸ್ವಾಮಿಯವರದು ಆಧಾರರಹಿತ ಆರೋಪ



ಕಾಂಗ್ರೆಸ್ ಮುಖಂಡರ ವಾಗ್ದಾಳಿ

ಮೈಸೂರು,ಜು.17(ಪಿಎಂ)– ಹೆಚ್.ಡಿ. ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ ಅವರ ಪುತ್ರನ ವಿರುದ್ಧ ಅಧಿಕಾರ ದುರುಪಯೋಗದ ಆರೋಪ ಕೇಳಿ ಬಂದಿತ್ತು. ಈ ಸಂಬಂಧ ದಾಖಲೆಗಳನ್ನು ಇಟ್ಟುಕೊಳ್ಳಬೇಕೆಂದು ವಿಧಾನ ಸಭೆ ಅಧಿವೇಶನದಲ್ಲಿ ಹೆಚ್.ಡಿ.ದೇವೇಗೌಡರು ಸ್ಪಷ್ಟವಾಗಿ ಹೇಳಿದ್ದರು. ಇಂದು ಪೆನ್‌ಡ್ರೈವ್ ಹಿಡಿದು ಸರ್ಕಾರದ ವಿರುದ್ಧ ಆರೋಪ ಮಾಡುತ್ತಿರುವ ಹೆಚ್‌ಡಿ.ಕುಮಾರಸ್ವಾಮಿ, ಇದನ್ನು ಗಮನಿಸಬೇಕೆಂದು ಕಾಂಗ್ರೆಸ್ ಮುಖಂಡರು ಹೇಳಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ, ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಹೆಚ್.ಡಿ.ರೇವಣ್ಣ ವಿರುದ್ಧದ ಆರೋಪ ಗಳ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆಯಾಗಿರುವ ದಾಖಲೆಯನ್ನು ಬಿಡುಗಡೆ ಮಾಡಿದ ಕಾಂಗ್ರೆಸ್ ಮುಖಂಡರು, ಪೆನ್‌ಡ್ರೈವ್‌ನಲ್ಲಿರುವುದನ್ನು ಬಹಿರಂಗಪಡಿಸಲು ಇವರನ್ನು ಯಾರು ತಡೆಹಿಡಿದಿದ್ದಾರೆ. ದಾಖಲೆಗಳೇ ಇಲ್ಲದೇ ಮಾಜಿ ಸಿಎಂ ಕುಮಾರಸ್ವಾಮಿಯವರು ಸುಮ್ಮನೆ ಪೆನ್ ಡ್ರೈವ್ ಇದೆ ಎನ್ನುತ್ತಿದ್ದಾರೆ ಎಂದು ಕಿಡಿಕಾರಿದರು.

ಕೆಪಿಸಿಸಿ ವಕ್ತಾರ ಹಾಗೂ ವಕೀಲ ಟಿ.ಎಸ್. ಸತ್ಯಾನಂದ ಮಾತನಾಡಿ, ಇಂದು ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳ ಪುತ್ರ ಡಾ.ಯತೀಂದ್ರ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಚಲುವರಾಯಸ್ವಾಮಿಯವರ ಬಗ್ಗೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. 1995ರಲ್ಲಿ ಹೆಚ್.ಡಿ. ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ, ಅವರ ಪುತ್ರ ಹೆಚ್.ಡಿ.ರೇವಣ್ಣ ತಮ್ಮ ತಂದೆಯ ಅಧಿಕಾರ ದುರುಪಯೋಗ ಮಾಡಿಕೊಂಡಿರುವ ಆರೋಪ ವ್ಯಕ್ತವಾದಾಗ, ಹೆಚ್.ಡಿ.ದೇವೇಗೌಡರು ಆರೋಪಕ್ಕೆ ದಾಖಲೆಗಳನ್ನು ಇಟ್ಟುಕೊಳ್ಳಬೇಕೆಂದು ಸ್ಪಷ್ಟವಾಗಿ ಹೇಳಿದ್ದಾರೆ. ರೇವಣ್ಣನವರು ಮುಖ್ಯಮಂತ್ರಿ ಕಚೇರಿಯಲ್ಲಿ ಕೂತು ಅಧಿಕಾರ ನಡೆಸುತ್ತಿದ್ದಾರೆ ಎಂದು ಅಂದಿನ ವಿಪಕ್ಷ ನಾಯಕ ಬಿ.ಎಸ್. ಯಡಿಯೂರಪ್ಪ ಆರೋಪ ಮಾಡಿದ್ದರು ಎಂದರು.

ಜೆಡಿಎಸ್ ಅತಂತ್ರ ವಿಧಾನಸಭೆಯನ್ನು ಅಪೇಕ್ಷೆಪಡುವ ಪಕ್ಷ, ಅಧಿಕಾರಕ್ಕಾಗಿ ಅವಕಾಶವಾದಿಯಾಗಲಿದೆ. ಕುಮಾರಸ್ವಾಮಿಯವರು ಸರ್ಕಾರದ ವಿರುದ್ಧ ಆರೋಪಿಸುವ ಮೂಲಕ ಬ್ಲ್ಯಾಕ್ ಮೇಲ್ ತಂತ್ರ ಪ್ರಯೋಗಿಸಿ, ಅಧಿಕಾರ ದಾಹ ತೀರಿಸಿಕೊಳ್ಳಲು ಹೊರಟಿದ್ದಾರೆ. ಪೆನ್‌ಡ್ರೈವ್‌ನಲ್ಲಿ ಇರುವುದು ಯಾವುದೇ ದಾಖಲಾತಿಯಲ್ಲ. ಬದಲಿಗೆ 'ಬೊಗಳೆ ದಾಸ ಕುಮಾರ' ಫಿಲ್ಮ್‌ನ ಟ್ರೈಲರ್ ಎಂದು ವ್ಯಂಗ್ಯವಾಡಿದರು.

ಕೆಪಿಸಿಸಿ ಮತ್ತೊಬ್ಬ ವಕ್ತಾರ ಹೆಚ್.ಎ.ವೆಂಕಟೇಶ್ ಮಾತನಾಡಿ, ರಾಜ್ಯದಲ್ಲಿ ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ಜಾತಿ– ಧರ್ಮದ ಲೆಕ್ಕಾಚಾರ ನಡೆಯಲಿಲ್ಲ. ಜಾತಿ–ಧರ್ಮ ಹೊರತಾಗಿ ಜನ ತಮ್ಮ ಕಲ್ಯಾಣ ಬಯಸಿ ಕಾಂಗ್ರೆಸ್ ಅಧಿಕಾರಕ್ಕೆ ತಂದಿದ್ದಾರೆ. ಇದರಿಂದ ಜಾತಿ–ಧರ್ಮ ನಂಬಿಕೊಂಡಿದ್ದ ಬಿಜೆಪಿ ಮತ್ತು ಜೆಡಿಎಸ್‌ನವರಿಗೆ ನೀರಿನಿಂದ ಮೀನು ಆಚೆ ಹಾಕಿದಂತೆ ಆಗಿದೆ ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಹೊಂದಿದ್ದು, ಉತ್ತಮ ವಿಪಕ್ಷ ನಾಯಕನನ್ನು ಬಯಸುತ್ತದೆ. ಆದರೆ ಬಿಜೆಪಿಗೆ ವಿಪಕ್ಷ ನಾಯಕನ ಆಯ್ಕೆಯೇ ಸಾಧ್ಯವಾಗಿಲ್ಲ. ಅಂದರೆ ಅವರಲ್ಲಿ ಉತ್ತಮ ನಾಯಕರಿಲ್ಲ. ದೇಶದಲ್ಲಿ ಮಾದರಿ ಯೋಜನೆಗಳು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ನೀಡಿದೆ. ಹಾಗಾಗಿ ಮುಂದಿನ ಲೋಕಸಭಾ ಚುನಾವಣೆಯಲ್ಲಿ ನಾವು ಕರ್ನಾಟಕದ ಹೆಚ್ಚು ಸ್ಥಾನ ಗೆಲ್ಲಲು ಸಾಧ್ಯವಿಲ್ಲ ಎಂದು ಬಿಜೆಪಿಗೆ ಗೊತ್ತಾಗಿದೆ ಎಂದರು.

ದೇಶದಲ್ಲಿ ಮತ್ತೆ ಅಧಿಕಾರಕ್ಕೆ ಬರುವ ಗ್ಯಾರಂಟಿ ಬಿಜೆಪಿಗೆ ಇಲ್ಲ. ತಿ.ನರಸೀಪುರದ ವೇಣು ಗೋಪಾಲ ಹತ್ಯೆ ಬಗ್ಗೆ ನಮ್ಮೆಲ್ಲರಿಗೂ ಅನುಕಂಪ ಇದೆ. ಆದರೆ ಈ ಪ್ರಕರಣದಲ್ಲಿ ಸಚಿವರ ಪುತ್ರನ ಹೆಸರು ತರುವ ಮೂಲಕ ಬಿಜೆಪಿ ರಾಜಕೀಯ ಬಣ್ಣ ಕಟ್ಟುವ ಪ್ರಯತ್ನ ಮಾಡುತ್ತಿದೆ ಎಂದು ದೂರಿದರು. ಕೆಪಿಸಿಸಿ ವಕ್ತಾರೆ ಮಂಜುಳಾ ಮಾನಸ, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಪಕ್ಷದ ಮುಖಂಡರಾದ ಕೆ.ಮಹೇಶ್, ನರಸಪ್ಪ, ಗೋಪಿನಾಥ್ ಗೋಷ್ಠಿಯಲ್ಲಿದ್ದರು.

ಮಾರಕಾಸ್ತ್ರಗಳಿಂದ ರೈತನ ಮೇಲೆ ಹಲ್ಲೆ; ನಗದು, ಮೊಬೈಲ್ ಸುಲಿಗೆ

ಬಿಂಡಿಗನವಿಲೆ,ಜು.17–ಕಾರಿನಲ್ಲಿ ಬಂದಿದ್ದ ಖದೀಮರು ರೈತನನ್ನು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ನಗದು ಹಾಗೂ ಮೊಬೈಲ್ ಕಿತ್ತುಕೊಂಡು ಪರಾರಿಯಾದ ಘಟನೆ ನಾಗಮಂಗಲ ತಾಲೂಕು ಚೋಳೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರೈತ ಮಂಜುನಾಥ್(51) ಎಂಬುವರು ಜು.15ರಂದು ರಾತ್ರಿ ಟಿವಿಎಸ್ ಜೂಪಿಟರ್ ಸ್ಕೂಟರ್‌ನಲ್ಲಿ (ಕೆಎ 54–ಆರ್ 2249) ತಮ್ಮ ಗ್ರಾಮದಿಂದ ರಾಜಾಪುರ ಗ್ರಾಮದ ಇಟ್ಟಿಗೆ ಫ್ಯಾಕ್ಟರಿಗೆ ಹೋಗುತ್ತಿದ್ದಾಗ ಅಲ್ಲಿನ ರಸ್ತೆ ಪಕ್ಕದ ಪೊದೆಗಳಲ್ಲಿ ಅಡಗಿ ಕುಳಿತಿದ್ದ ನಾಲ್ವರು ಖದೀಮರು ಇವರನ್ನು ಅಡ್ಡಗಟ್ಟಿ ರಾಡ್, ಕಬ್ಬಿಣದ ಹಾರೆ ಹಾಗೂ ದೊಣ್ಣೆಯಿಂದ ಇವರ ಮೇಲೆ ಹಲ್ಲೆ ನಡೆಸಿ 30,500 ರೂ. ನಗದು ಹಾಗೂ ಮೊಬೈಲ್ ಕಿತ್ತುಕೊಂಡಿದ್ದಾರೆ. ಅದೇ ವೇಳೆಗೆ ಮಂಜುನಾಥ್ ಅವರ ಮಗ ಮನೋಜ್ ಬೈಕ್‌ನಲ್ಲಿ ಬರುತ್ತಿದ್ದಾಗ ಹೆಡ್‌ಲೈಟ್ ಬೆಳಕು ನೋಡಿ ಖದೀಮರು ಕೆಎ 41–ಎಂಬಿ 1068 ಸಂಖ್ಯೆಯ ಕಾರಿನಲ್ಲಿ ಪರಾರಿಯಾಗಿದ್ದಾರೆ. ಈ ಸಂಬಂಧ ಬಿಂಡಿಗನವಿಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಗ್ಯ ಕಾರ್ಯಕರ್ತೆಯರು, ಸಂಯೋಜಕರ ಹುದ್ದೆಗೆ ಅರ್ಜಿ

ಮೈಸೂರು,ಜು.17–ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಆದಿವಾಸಿ ಆರೋಗ್ಯ ಕಾರ್ಯಕರ್ತೆಯರು ಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಯಲ್ಲಿ ಆದಿವಾಸಿ ಆರೋಗ್ಯ ಸಂಯೋಜಕರನ್ನು ನೇಮಕ ಮಾಡುವ ಸಂಬಂಧ ಅರಣ್ಯಾಧಾರಿತ ಪರಿಶಿಷ್ಟ ವರ್ಗದ ಸೋಲಿಗ, ಕಾಡುಕುರುಬ, ಜೇನುಕುರುಬ ಹಾಗೂ ಯರವ ಜನಾಂಗದ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜು.22 ಕಡೆಯ ದಿನಾಂಕವಾಗಿದೆ. ಮಾಹಿತಿಗೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ದೂ.ಸಂ.0821–2411113/ ವಿವಿಧ ತಾಲೂಕಿನ ಪ.ವರ್ಗಗಳ ಕಲ್ಯಾಣಾಧಿಕಾರಿಗಳ ಮೊ.ಸಂ. 7899235352, 8497079704, 9686544602, 9480116321 ಸಂಪರ್ಕಿಸಬಹುದು.

ಕಾಳಮ್ಮ ನಿಧನ



ಮೈಸೂರು,ಜು.17–ಮೈಸೂರಿನ ಗಾಂಧಿನಗರದ ನಿವಾಸಿ ಕಾಳಮ್ಮ(57) ಭಾನುವಾರ ರಾತ್ರಿ ನಿಧನರಾದರು. ಪತಿ ಜವರಪ್ಪ ಪುತ್ರರಾದ ಪರಮೇಶ್, ಅನಿಲ್ ಕುಮಾರ್, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಸೋಮವಾರ ಮಧ್ಯಾಹ್ನ ಗಾಂಧಿನಗರದ ಆದಿ ಕರ್ನಾಟಕ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಪುಸ್ತಕದಷ್ಟು ದೊಡ್ಡ ಆಸ್ತಿ ಬೇರೆ ಇಲ್ಲ



ಮೈಸೂರು, ಜು.17 (ಎಸ್‌ಪಿಎನ್)– 'ಸಾವು' ಯಾವಾಗ ಬರುತ್ತದೆ, ಯಾವ ಸ್ವರೂಪದಲ್ಲಿ ಬರುತ್ತದೆ. ಎಂಬುದನ್ನು ಊಹಿಸಲು ಸಾಧ್ಯವಿಲ್ಲ ಎಂದು ಲೇಖಕ ಸತೀಶ್ ಚಪ್ಪರಿಕೆ ಅಭಿಪ್ರಾಯಪಟ್ಟರು.

ಮೈಸೂರು ರಾಮಸ್ವಾಮಿ ವೃತ್ತದ ಬಳಿ ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಅಂಕಿತ ಪುಸ್ತಕ ಸಹಯೋಗದೊಂದಿಗೆ 'ಫಾಂದ್ರುಕ್' ಕಾದಂಬರಿ ಕುರಿತು ಕಾದಂಬರಿಕಾರ, ಪತ್ರಕರ್ತ ಸತೀಶ್ ಚಪ್ಪರಿಕೆ ಅವರೊಂದಿಗೆ ಹಿರಿಯ ವಿಮರ್ಶಕ ಓ.ಎಲ್.ನಾಗಭೂಷಣ ಸ್ವಾಮಿ ಸಂವಾದ ನಡೆಸಿಕೊಟ್ಟ ಸಂದರ್ಭದಲ್ಲಿ ತಿಳಿಸಿದರು.

ಓರ್ವ ವ್ಯಕ್ತಿಗೆ ಯಾವುದೋ ಒತ್ತಡಕ್ಕೆ ಸಿಲುಕಿ ಇಲ್ಲವೇ ಬೇರೆ ಕಾರಣಗಳಿಗೆ ಹೃದಯಾಘಾತವಾದಾಗ ಆ ವ್ಯಕ್ತಿಯನ್ನು ಉಳಿಸಲು ಮೊದಲು ಆಂಜಿಯೋ ಪ್ಲ್ಯಾಸ್ಟಿ ಶಸ್ತ್ರಚಿಕಿತ್ಸೆ ಮೂಲಕ ಹೃದಯದ ರಂಧ್ರದಲ್ಲಿನ ಬ್ಲಾಕ್‌ಗಳನ್ನು ಗುರುತಿಸಿ, ಕ್ಲಿಯರ್ ಮಾಡಲು ಹೃದಯ ತಜ್ಞರು ಹರಸಾಹಸ ಪಡುತ್ತಾರೆ. ಈ ಸಂದರ್ಭದಲ್ಲಿ ಐಸಿಯು ಮೇಲೆ ಮಲಗಿರುವ ರೋಗಿಗೆ ಸಾಮಾನ್ಯವಾಗಿ ಉದರ, ಕಾಲು ಹಾಗೂ ಮೂತ್ರಪಿಂಡದ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. ಈ ವೇಳೆಗೆ ರೋಗಿಯ ಅಂತರಂಗದಲ್ಲಿ ಮೂಡುವ ಯಾತನೆ, ಸಾವಿನ ಸುಳಿವು, ಸನ್ನಿವೇಶ ಊಹಿಸಲು ಅಸಾಧ್ಯ ಎಂದು ತಿಳಿಸಿದರು.

ಆಂಜಿಯೋಪ್ಲ್ಯಾಸ್ಟಿ ಚಿಕಿತ್ಸಾ ವಿಧಾನ ಕೊನೆ ಹಂತದಲ್ಲಿರುವಾಗ ಅಥವಾ ಬ್ಲಾಕ್ ಗುರುತಿಸಿ ಚಿಕಿತ್ಸೆ ಮುಂದುವರೆಸಿದಾಗ ಆಗುವ ನೋವು, ಸಾವಿಗೆ ಹತ್ತಿರವಿರುತ್ತದೆ. ಇಂತಹ ಸಮಯದಲ್ಲಿ ರೋಗಿಯ ಕಣ್ಣ ಮುಂದೆ ಸಾವು–ನೋವು ಎರಡು ಪ್ರತ್ಯಕ್ಷವಾಗಿರುತ್ತದೆ. ಮತ್ತೊಂದೆಡೆ ರೋಗಿಯ ಮುಂದೆಯೇ ಪರದೆ ಮೇಲೆ ಚಿಕಿತ್ಸಕ ವಿಧಾನ ತೋರಿಸಿ, ತಜ್ಞರು ಕೆಲವು ಸೂಚನೆಗಳನ್ನು ಇತರೆ ವೈದ್ಯರಿಗೆ ತಿಳಿಸುತ್ತಿರುವಾಗ ಸಾವಿನ ಸ್ವರೂಪಗಳನ್ನು ತಿಳಿಸುತ್ತಿದ್ದಾರೆ ಎಂಬಂತೆ ರೋಗಿಗೆ ಭಾಸವಾಗುತ್ತದೆ ಎಂದು ಕಾದಂಬರಿಕಾರ ಸತೀಶ್ ಚಪ್ಪರಿಕೆ ಸಾವಿನ ಸ್ವರೂಪವನ್ನು ಎಳೆಎಳೆಯಾಗಿ ಬಿಡಿಸಿದರು.

ಹಾಗೆಯೇ 'ಫಾಂದ್ರುಕ್' ಕಾದಂಬರಿಯಲ್ಲಿ ಪ್ರೇಮ–ಪ್ರೀತಿ, ಧರ್ಮ, ಕಾಮ ಹಾಗೂ ಸಾವಿನ ಸ್ವರೂಪಗಳನ್ನು ಕೆಲವು ಪಾತ್ರಗಳ ಮೂಲಕ ಪ್ರಸ್ತುತಪಡಿಸಲಾಗಿದೆ ಎಂದು ಸಂವಾದ ಸಂದರ್ಭದಲ್ಲಿ ಕೆಲವುಗಳನ್ನು ಘಟನೆಗಳನ್ನು ಉಲ್ಲೇಖಿಸಿ, ತಿಳಿಸಿದರಲ್ಲದೆ, ಮನುಷ್ಯನಿಗೆ ಮನುಷ್ಯನಾಗಿ ಬದುಕಲು ಕಲಿಸದ ಧರ್ಮ ಏಕೆ ಎಂಬುದು 'ಫಾಂದ್ರುಕ್' ಕೃತಿಯ ಒಳನೋಟವೂ ಹೌದು ಎಂದರು.

'ಧರ್ಮ ಮನುಕುಲದ ಉದ್ಧಾರಕ್ಕಾಗಿ ಬಳಕೆಯಾಗುತ್ತಿಲ್ಲ. ಕೃತಿಕಾರನ ಬದುಕು ಆತನ ಬರಹದಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಬಿಂಬಿತವಾಗಿರುತ್ತದೆ. 'ಪುಸ್ತಕದಷ್ಟು ದೊಡ್ಡ ಆಸ್ತಿ ಬೇರೊಂದಿಲ್ಲ. ಎಲ್ಲರೂ ಪುಸ್ತಕ ಓದಿ. ಬರಹ ತೃಪ್ತಿ ನೀಡುತ್ತದೆ. ಅನುಭವ, ಓದು, ಜೀವನ ನೋಡುವ ರೀತಿಯೇ ನಿಮ್ಮ ಸೃಜನಶೀಲತೆಯನ್ನು ಸನ್ನಿವೇಶಗಳು ರೂಪಿಸುತ್ತವೆ ಎಂದರು.

ಪ್ರಧಾನಮಂತ್ರಿ ಆವಾಸ್ ಯೋಜನೆ: ಮನೆ ನಿರ್ಮಾಣಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.17–ಟಿ.ನರಸೀಪುರ ಪುರಸಭೆ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ವಿವಿಧ ನಗರ ವಸತಿ ಯೋಜನೆಗಳಲ್ಲಿ ಇದುವರೆಗೂ ಮನೆ ನಿರ್ಮಿಸಿಕೊಳ್ಳದೆ ಇರುವ ಫಲಾನುಭವಿಗಳು ಮನೆ ನಿರ್ಮಿಸಲು ಇಚ್ಛಿಸಿದಲ್ಲಿ ಜುಲೈ 20ರೊಳಗೆ ಪುರಸಭೆ ಕಚೇರಿಗೆ ಭೇಟಿ ನೀಡಿ ಮನವಿ ಸಲ್ಲಿಸಬಹುದು. ಡಾ.ಬಿ.ಆರ್.ಅಂಬೇಡ್ಕರ್ ನಗರ ವಸತಿ ಯೋಜನೆ ಮತ್ತು ಪ್ರಧಾನಮಂತ್ರಿ ಆವಾಸ್ ಯೋಜನೆ ಹಾಗೂ ವಾಜಪೇಯಿ ನಗರ ವಸತಿ ಯೋಜನೆ ಅಡಿ 2015–16ನೇ ಸಾಲಿನಿಂದ 2017–18 ಹಾಗೂ 2021–22ನೇ ಸಾಲಿನವರೆಗೆ ಆಯ್ಕೆಯಾಗಿರುವ ಫಲಾನುಭವಿಗಳಲ್ಲಿ ಇದುವರೆಗೂ ಹಲವರು ಮನೆಯನ್ನು ನಿರ್ಮಿಸಿಕೊಂಡಿಲ್ಲ. ಹೀಗಾಗಿ ಫಲಾನುಭವಿಗಳ ಮನೆಗೆ ಭೇಟಿ ನೀಡಿ ನಿರ್ಮಾಣ ಕಾಮಗಾರಿ ಪ್ರಾರಂಭಿಸಿ ಜಿಪಿಎಸ್ ಮಾಡಿಸುವಂತೆ ತಿಳಿಸಲಾಗಿತ್ತು. ಆದಾಗ್ಯೂ ಬಹುತೇಕ ಫಲಾನುಭವಿಗಳು ಮನೆ ನಿರ್ಮಾಣ ಮಾಡಿರುವುದಿಲ್ಲ. ಇವರು ಮನೆ ನಿರ್ಮಿಸಲು ಇಚ್ಛಿಸಿದಲ್ಲಿ ಜುಲೈ 20ರ ಒಳಗೆ ಪುರಸಭೆ ಕಚೇರಿಗೆ ಭೇಟಿ ನೀಡಿ ಮನವಿ ಸಲ್ಲಿಸಿದ್ದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿ ಮಾತ್ರ ಸಹಾಯಧನ ನೀಡಲಾಗುವುದು ಇಲ್ಲದಿದ್ದಲ್ಲಿ ಫಲಾನುಭವಿ ಆಯ್ಕೆಯನ್ನು ರದ್ದು ಮಾಡಲಾಗುವುದು. ಮಾಹಿತಿಗಾಗಿ ಪುರಸಭೆಯ ವಸತಿ ಶಾಖೆ ಭೇಟಿ ನೀಡುವಂತೆ ನರಸೀಪುರ ಪುರಸಭೆಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ರೈಲ್ವೆ ಬಡಾವಣೆಯಲ್ಲಿರುವ ಇನ್ನರ್‌ವ್ಹೀಲ್ ರೋಟರಿ ಭವನದಲ್ಲಿ ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಉತ್ತರದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು. 2023–24ನೇ ಸಾಲಿನ ಅಧ್ಯಕ್ಷೆಯಾಗಿ ಅಶ್ವಿನಿ ಪ್ರಶಾಂತ್, ಉಪಾಧ್ಯಕ್ಷೆಯಾಗಿ ವಿಮಲಾ ಮೂರ್ತಿ, ನಿಕಟಪೂರ್ವ ಅಧ್ಯಕ್ಷೆ ರಜನಿ ಸ್ವಾಮಿ, ಕಾರ್ಯದರ್ಶಿ ಪ್ರೇಮಸ್ವಾಮಿ, ಖಜಾಂಚಿ ಸುಮನಾ ನಟೇಶ್, ಪದ್ಮಾ ನಿರಂಜನ್, ಗೀತಾ ಪ್ರಸಾದ್, ಶರಣ್ಯ ಡಿ.ಚೌಟಾ, ಜಾಹ್ನವಿ ಮೂರ್ತಿ, ಅನಿತಾ ಸುರೇಶ್, ಉಮಾ ಮಹೇಶ್, ರಾಜೇಶ್ವರಿ ಗೌಡ ಮತ್ತಿತರರು ಹಾಜರಿದ್ದರು.

ಕೆಟಿಎಸ್‌ಗೆ ಅತ್ಯುತ್ತಮ ಶಾಸಕ ಪ್ರಶಸ್ತಿ



ಮಂಡ್ಯ, ಜು.17– ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಅವರು 2022ನೇ ಸಾಲಿನ ಅತ್ಯುತ್ತಮ ಶಾಸಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. 2016ರಿಂದ 2022 ರವರೆಗೆ ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಆಯ್ಕೆಯಾಗಿದ್ದ ಕೆಟಿಎಸ್ ಅವರಿಗೆ ಈ ಪ್ರಶಸ್ತಿ ದೊರೆತ್ತಿದ್ದು, ಜು.18ರಂದು ಸಂಜೆ 6ಗಂಟೆಗೆ ವಿಧಾನಸೌಧದ 3ನೇ ಮಹಡಿಯ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಶ್ರೀಕಂಠೇಗೌಡರಿಗೆ ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ. ಈ ಬಗ್ಗೆ ವಿಧಾನ ಪರಿಷತ್‌ನ ಅಧೀನ ಕಾರ್ಯದರ್ಶಿ ಮೀನಾ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಜು.17– ಜಿ.ಮಲ್ಲಿಗೆರೆ ಮತ್ತು ತೂಬಿನಕೆರೆ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಜು.19 ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆವರೆಗೆ ಜಿ.ಮಲ್ಲಿಗೆರೆ, ಹೊನ್ನೆಮಡು, ಹುನಗನಹಳ್ಳಿ, ನಂಜೇನಹಳ್ಳಿ, ಮುತ್ತೆಗೆರೆ, ತಿಪ್ಪಾಪುರ, ಬುಂಡಾರೆಕೊಪ್ಪಲು, ಎಂ.ಹಟ್ನ, ಸಂಗಾಪುರ, ಜವನಹಳ್ಳಿ, ಮಲ್ಲೇನಹಳ್ಳಿ, ಛತ್ರನಹಳ್ಳಿ, ಬಿಲ್ಲೇನಹಳ್ಳಿ, ಬಂಕನಹಳ್ಳಿ, ತೂಬಿನಕೆರೆ, ತೂಬಿನಕೆರೆ ಇಂಡಸ್ಟ್ರಿಯಲ್ ಏರಿಯಾ, ಉರಮಾರಕಸಲಗೆರೆ, ಯಲಿಯೂರು, ಕಾಳೇನಹಳ್ಳಿ, ಎಲೆಚಾಕನಹಳ್ಳಿ, ರಾಗಿಮುದ್ದನಹಳ್ಳಿ, ಸುಂಡಹಳ್ಳಿ, ಪೀಹಳ್ಳಿ, ಕೊಡಿಯಾಲ ಆಲಗೂಡು, ಮತ್ತು ಐಪಿ ಮಾರ್ಗಗಳಾದ ಎ.ಹುಲಿಕೆರೆ, ಬಿ.ಹುಲಿಕೆರೆ, ಹುಲ್ಲುಕೆರೆ ಕೊಪ್ಪಲು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಇಂದು ನೇರ ಸಂದರ್ಶನ

ಮಂಡ್ಯ, ಜು.17– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಹಯೋಗದಲ್ಲಿ ಮೆ.ರಾಜ್ ಬಯೋ ಆರ್ಗ್ಯಾನಿಕ್ ಲಿ., ಮಂಡ್ಯ ಮತ್ತು ಮೆ.ಬಿ.ಜೆಡ್ ಫಿನ್‌ಸರ್ವ್ ಪ್ರೈ ಲಿ., ವತಿಯಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೋಮಾ, ಐಟಿಐ ಮತ್ತು ಯಾವುದೇ ಪದವಿ ತೇರ್ಗಡೆಯಾದ ಅರ್ಹ ಅಭ್ಯರ್ಥಿಗಳಿಗೆ ಜು.18 ರಂದು ಬೆಳಗ್ಗೆ 10 ಗಂಟೆಗೆ ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ ಸಂದರ್ಶನ ಆಯೋಜಿಸಲಾಗಿದೆ. ವಿವರಗಳಿಗೆ ದೂ: 8217803781, 08232–295124 ಅನ್ನು ಸಂಪರ್ಕಿಸಬಹುದು.

ನಾಲೆಗೆ ನೀರು ಹರಿಸುವಂತೆ ಪ್ರತಿಭಟನೆ



ಮಂಡ್ಯ, ಜು.17– ಬೆಳೆದು ನಿಂತಿರುವ ಬೆಳೆಗಳ ರಕ್ಷಣೆಗಾಗಿ ಕೆಆರ್‌ಎಸ್‌ನಿಂದ ನಾಲೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ರೈತರು ನಗರದ ಕಾವೇರಿ ನೀರಾವರಿ ನಿಗಮದ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಆಶ್ರಯದಲ್ಲಿ ನೂರಾರು ರೈತರು ಪ್ರತಿಭಟನೆ ನಡೆಸಿ ನೀರಾವರಿ ಇಲಾಖೆ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲೆಯ ಸಾವಿರಾರು ಎಕರೆಯಲ್ಲಿ ಕಬ್ಬು, ಭತ್ತ ಸೇರಿದಂತೆ ವಿವಿಧ ಬೆಳೆಗಳನ್ನು ಹಾಕಲಾಗಿದೆ. ಹಲವು ಬೆಳೆಗಳು ಕಟಾವಿಗೆ ಬಂದಿದ್ದು, ಅವುಗಳಿಗೆ ಕೊನೆ ಹಂತದ ನೀರು ಅವಶ್ಯಕವಾಗಿದೆ. ಕೃಷಿ ಮತ್ತು ನೀರಾವರಿ ಇಲಾಖೆ ಅಧಿಕಾರಿಗಳು ಸಭೆ ನಡೆಸಿದ್ದಾರೆ. ಆದರೆ ವರದಿಯನ್ನು ನೀರಾವರಿ ಸಲಹಾ ಸಮಿತಿ ಮತ್ತು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿಲ್ಲ. ಇದರಿಂದ ನಾಲೆಗಳಲ್ಲಿ ನೀರು ಇಲ್ಲದೆ ಬೆಳೆಗಳು ಒಣಗುತ್ತಿವೆ ಎಂದು ಕಿಡಿಕಾರಿದರು.

ಜಲಾಶಯದ ನೀರಿನ ಪ್ರಮಾಣ 74 ಅಡಿಗೆ ಇಳಿದರೆ ಡೆಡ್ ಸ್ಟೋರೇಜ್ ಹಂತ ತಲುಪಲಿದೆ. ಅಂತಹ ಸಂದರ್ಭದಲ್ಲಿ ಕುಡಿಯುವ ನೀರಿಗೆ ಮಾತ್ರ ನೀರು ಲಭ್ಯವಾಗಲಿದೆ. ಆದರೆ ಇದೀಗ ಕೃಷ್ಣರಾಜ ಸಾಗರದಲ್ಲಿ 89 ಅಡಿ ನೀರು ಸಂಗ್ರಹವಾಗಿದೆ. ಆರು ಟಿಎಂಸಿ ನೀರನ್ನು ಬಳಕೆ ಮಾಡಿಕೊಳ್ಳಬಹುದಾಗಿದೆ. ನಾಲೆಗಳಿಗೆ ನೀರು ಹರಿಸಿದರೆ ಯಾವುದೇ ತೊಂದರೆಯಾಗುವುದಿಲ್ಲ ಕೇವಲ ಎರಡೂವರೆ ಟಿಎಂಸಿ ನೀರು ಮಾತ್ರ ನಾಲೆಗೆ ಹರಿಯಲಿದೆ. ನಮಗೂ ಸಹ ನೀರಿನ ಬಳಕೆಯ ಅರಿವಿದ್ದು, ಜಲಾಶಯದಲ್ಲಿ ಸಂಕಷ್ಟ ಕಾಲದಲ್ಲಿ ನಾಲೆಗೆ ಹರಿಸಬಹುದಾದ ನೀರು ಇರುವುದರಿಂದ ಜಲಾಶಯದಿಂದ ನಾಲೆಗೆ ನೀರು ಬಿಡಿ ಎಂದು ಒತ್ತಾಯಿಸುತ್ತಿದ್ದೇವೆ. ಬೆಳೆದು ನಿಂತಿರುವ ಬೆಳೆಗಳ ರಕ್ಷಣೆಗಾಗಿ ನೀರು ಬಳಕೆ ಮಾಡುತ್ತೇವೆ ಹೊರತು ಯಾವುದೇ ಹೊಸ ಬೆಳೆಗೆ ನೀರು ಕೇಳುತ್ತಿಲ್ಲ ಎಂದರು.

ರೈತರಿಂದ ಖರೀದಿಸುವ ಹಾಲಿನ ದರವನ್ನು ಮನ್‌ಮುಲ್ ಕಡಿತ ಮಾಡಿರುವುದು ಹಾಲು ಉತ್ಪಾದಕರಿಗೆ ಮಾಡಿರುವ ದ್ರೋಹವಾಗಿದೆ. ಬರಗಾಲ ಎದುರಾಗುತ್ತಿರುವ ಸಂದರ್ಭದಲ್ಲಿ ಏಕಾಏಕಿ ಪ್ರತಿ ಲೀಟರ್ ಹಾಲಿಗೆ 1.75 ರೂ.ಗಳನ್ನು ಕಡಿತ ಮಾಡಿದೆ. ತಕ್ಷಣ ಹಾಲಿನ ದರ ಕಡಿತ ವಾಪಸ್ ಪಡೆದು ಈ ಹಿಂದಿನಂತೆ ಪ್ರತಿ ಲೀಟರ್‌ಗೆ 33 ರೂ. ನೀಡಬೇಕು. ಇಲ್ಲದಿದ್ದರೆ ಮನ್‌ಮುಲ್ ಎದುರು ಹೋರಾಟ ನಡೆಸುವುದಾಗಿ ಪ್ರತಿಭಟನಾನಿರತ ರೈತರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ಮುಖಂಡರಾದ ಲಿಂಗಪ್ಪಾಜಿ, ವಿಜಯ್ ಕುಮಾರ್, ಸಿದ್ದೇಗೌಡ, ಲತಾಶಂಕರ್, ರವಿಕುಮಾರ್ ಇನ್ನಿತರರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಿಆರ್‌ಎಸ್ ಚಾಲನೆ



ನಾಗಮಂಗಲ, ಜು.17– ತಾಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಕೋಟೆಬೆಟ್ಟ ರಸ್ತೆಯ ಹೊಸಹಳ್ಳಿ ಗೇಟ್‌ನಿಂದ ಕೆಂಚೇಗೌಡನಕೊಪ್ಪಲು ಗ್ರಾಮದವರೆಗಿನ 3 ಕಿಮೀ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಚಾಲನೆ ನೀಡಿದರು.

ನಂತರ ಮಾತನಾಡಿದ ಸಚಿವರು, 5 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಗುತ್ತಿಗೆದಾರರು ರಸ್ತೆ ನಿರ್ಮಾಣದಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ಅಲ್ಲದೇ ನಿಗದಿತ ಸಮಯದೊಳಗೆ ಕಾಮಗಾರಿ ಮುಗಿಸಬೇಕು ಎಂದರು. ಈ ವೇಳೆ ಲೋಕೋಪಯೋಗಿ ಇಲಾಖೆ ಎಇಇ ನಂದಕುಮಾರ್, ಎಇ ಸೌಮ್ಯ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ವಸಂತ, ಪಾಲಗ್ರಹಾರ ಗ್ರಾಪಂ ಅಧ್ಯಕ್ಷೆ ರೇವಮ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ.ರಾಜೇಶ್, ಶರತ್ ರಾಮಣ್ಣ, ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಬೆಟ್ಟೇಗೌಡ, ಕಂಬದ ನರಸಿಂಹಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ನರಸಿಂಹ ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಗೃಹಲಕ್ಷ್ಮಿ ಯೋಜನೆ ನೋಂದಣಿಗೆ ಅಗತ್ಯ ಸಿದ್ಧತೆ ಕೈಗೊಳ್ಳಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಸೂಚನೆ



ಮಂಡ್ಯ, ಜು.17– ಕುಟುಂಬದ ಯಜಮಾನಿಗೆ 2 ಸಾವಿರ ರೂ. ನೀಡುವ ಸರ್ಕಾರದ ಮಹತ್ವಾಕಾಂಕ್ಷೆ ಗೃಹಲಕ್ಷ್ಮಿ ಯೋಜನೆಗೆ ಜಿಲ್ಲೆಯಲ್ಲಿ ಜು.19 ರಂದು ಚಾಲನೆ ನೀಡಲಾಗುವುದು. ಜು.20ರಿಂದ ಆರಂಭವಾಗುವ ನೋಂದಣಿಯಲ್ಲಿ ಯಾವುದೇ ಲೋಪವಾಗದಂತೆ ಗ್ರಾಮ, ತಾಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಕೆಸ್ವಾನ ಮೂಲಕ ಸಭೆ ನಡೆಸಿ ಅವರು ಮಾತನಾಡಿದರು.

ಯೋಜನೆ ನೋಂದಣಿಗೆ ಮಹಿಳೆಯರು ಯಾವುದೇ ಶುಲ್ಕ ನೀಡುವಂತಿಲ್ಲ. ನೋಂದಣಿಯು ಗ್ರಾಮ ಒನ್ ಕೇಂದ್ರ, ಬಾಪೂಜಿ ಸೇವಾ ಕೇಂದ್ರ ನಗರ ಭಾಗದಲ್ಲಿ ಕರ್ನಾಟಕ ಒನ್ ಸೆಂಟರ್ ಹಾಗೂ ಹೆಚ್ಚುವರಿಯಾಗಿ ನಗರಸಭೆ ವ್ಯಾಪ್ತಿಯಲ್ಲಿ ತೆರೆಯುವ 5, ಪುರಸಭೆ ವ್ಯಾಪ್ತಿಯಲ್ಲಿ 3 ಹಾಗೂ ಪಪಂ ವ್ಯಾಪ್ತಿಯಲ್ಲಿ ತೆರೆಯುವ 2 ಕೇಂದ್ರಗಳಲ್ಲಿ ನಡೆಯಲಿದೆ ಎಂದರು.

ಪ್ರತಿದಿನ ಒಂದು ಕೇಂದ್ರದಲ್ಲಿ 60 ಮಹಿಳೆಯರ ನೋಂದಣಿ ನಡೆಯಲಿದೆ. ನೋಂದಣಿ ಕೇಂದ್ರದಲ್ಲಿ ನೂಕು ನುಗ್ಗಲು ಉಂಟಾಗಬಾರದೆಂದು ಮೊದಲೇ ಮಹಿಳೆಯರಿಗೆ ನೋಂದಣಿ ದಿನಾಂಕ, ಸ್ಥಳ ಮತ್ತು ಸಮಯದ ವಿವರವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪಟ್ಟಿ ಸಿದ್ಧಪಡಿಸಲಾಗಿದ್ದು, ಎಸ್‌ಎಂಎಸ್ ಮೂಲಕ ವಿವರ ಕಳುಹಿಸಲಾಗುವುದು. ಎಸ್‌ಎಂಎಸ್‌ನಲ್ಲಿ ನಿಗದಿಪಡಿಸಿರುವ ದಿನಾಂಕ ಹಾಗೂ ಕೇಂದ್ರದಲ್ಲಿ ತಪ್ಪದೇ ನೋಂದಣಿ ಮಾಡಿಸಿಕೊಳ್ಳಬೇಕು. ನಿಗದಿಪಡಿಸಿರುವ ಸಮಯಕ್ಕೆ ಆಗಮಿಸಲು ಸಾಧ್ಯವಾಗದಿದ್ದಲ್ಲಿ ಅದೇ ದಿನ ಸಂಜೆ ನೋಂದಣಿ ಮಾಡಿಸಿಕೊಳ್ಳುವುದು. ಎಸ್‌ಎಂಎಸ್ ಬಾರದೇ ಕೇಂದ್ರಕ್ಕೆ ತೆರಳಿದರೇ ನೋಂದಣಿ ಕೇಂದ್ರದಲ್ಲೂ ನೋಂದಣಿ ಮಾಡಲು ಸಾಧ್ಯವಿಲ್ಲ ಎಂದರು.

ಪಡಿತರ ಚೀಟಿ ಹೊಂದಿರುವ ಆಧಾರ್ ಸೀಡಿಂಗ್ ಆಗಿರುವ ಖಾತೆಗೆ ಹಾಗೂ ಡಿಬಿಟಿ ಪಾವತಿ ಹೊಂದಿರುವ ಕುಟುಂಬದ ಯಜಮಾನಿಗೆ ಎಸ್‌ಎಂಎಸ್ ಮೂಲಕ ನೋಂದಣಿಗೆ ವಿವರ ಬರಲಿದೆ. ಆದಾಯ ತೆರಿಗೆ ಪಾವತಿಸುವ ಮಹಿಳೆ ಅಥವಾ ಕುಟುಂಬದ ಯಜಮಾನಿ ಪತಿ ಆದಾಯ ತೆರಿಗೆ ಪಾವತಿಸುತ್ತಿದ್ದಲ್ಲಿ ಅವರು ಈ ಯೋಜನೆ ವ್ಯಾಪ್ತಿಗೆ ಬರುವುದಿಲ್ಲ ಎಂದು ವಿವರಿಸಿದರು.

ಈ ಯೋಜನೆ ಅನುಷ್ಠಾನಕ್ಕಾಗಿ ಪ್ರಜಾಪ್ರತಿನಿಧಿಯನ್ನು ನೇಮಕ ಮಾಡಿಕೊಳ್ಳಲಾಗುವುದು. ಇವರಿಗೆ ಯಾವುದೇ ರೀತಿಯ ಗೌರವಧನ ನೀಡಲಾಗುವುದಿಲ್ಲ. ಒಂದು ಸಾವಿರ ಜನಸಂಖ್ಯೆಗೆ ಇಬ್ಬರು ಪ್ರಜಾಪ್ರತಿನಿಧಿ ನೇಮಕ ಮಾಡಲು ಅವಕಾಶವಿದೆ. ಇಬ್ಬರಲ್ಲಿ ಒಬ್ಬರು ಕಡ್ಡಾಯವಾಗಿ ಮಹಿಳೆಯಾಗಿರಬೇಕು. ಪ್ರಜಾಪ್ರತಿನಿಧಿಗಳು ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹಾಗೂ ಮೊಬೈಲ್ ಹೊಂದಿರಬೇಕು ಎಂದರು.

ಹೋಬಳಿ ಹಾಗೂ ತಾಲೂಕು ಮಟ್ಟದಲ್ಲಿ ನೋಂದಣಿ ಪ್ರಕ್ರಿಯೆ ಪರಿಶೀಲಿಸಲು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ತಹಸೀಲ್ದಾರ್ ತಾಲೂಕು ಮಟ್ಟದಲ್ಲಿ ಸಭೆ ನಡೆಸಿ ಬಾಪೂಜಿ ಸೇವಾ ಕೇಂದ್ರ ಗ್ರಾಮ ಒನ್ ಸೆಂಟರ್‌ಗಳ ಸಿಬ್ಬಂದಿಗಳಿಗೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಲೆಕ್ಕಿಗರಿಗೆ ಸೂಕ್ತ ನಿರ್ದೇಶನ ನೀಡುವಂತೆ ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಮಾತನಾಡಿ, ಈ ಯೋಜನೆಯಡಿ ವಯಸ್ಸಾದ ಮಹಿಳೆಯರು, ಗ್ರಾಮೀಣ ಮಹಿಳೆಯರು, ಅನಕ್ಷರಸ್ಥ ಮಹಿಳೆಯರು ಬರುತ್ತಾರೆ. ನೋಂದಣಿ ಕೇಂದ್ರದವರು ಅವರೊಂದಿಗೆ ಸೌಜನ್ಯದಿಂದ ವರ್ತಿಸಿ ಗ್ರಾಮ ಒನ್ ಸೆಂಟರ್‌ಗೆ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ ಮಹಿಳೆಯರಿಗೆ ಆಸನದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಎಂದರು.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪ ನಿರ್ದೇಶಕ ಎಂ.ಕೃಷ್ಣಕುಮಾರ್ ಮಾತನಾಡಿ, ಹೊಸ ರೇಷನ್ ಕಾರ್ಡ್‌ಗೆ ಅರ್ಜಿ ಸ್ವೀಕರಿಸುವ ಪ್ರಕ್ರಿಯೆ ಹಾಗೂ ತಿದ್ದುಪಡಿ ತಡೆ ಹಿಡಿಯಲಾಗಿದೆ. ಸರ್ಕಾರ ಮುಂದಿನ ಆದೇಶದಲ್ಲಿ ತಿಳಿಸಿದ ನಂತರ ಸಾರ್ವಜನಿಕರಿಗೆ ಮಾಹಿತಿ ನೀಡಿ ಅರ್ಜಿ ಸ್ವೀಕಾರ ಹಾಗೂ ತಿದ್ದುಪಡಿ ಪ್ರಕ್ರಿಯೆ ಪ್ರಾರಂಭಿಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಪಂ ಉಪ ಕಾರ್ಯದರ್ಶಿ ಎಂ.ಬಾಬು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಎಸ್.ರಾಜಮೂರ್ತಿ, ನಗರಸಭೆ ಆಯುಕ್ತ ಆರ್.ಮಂಜುನಾಥ್, ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ತುಷಾರಮಣಿ, ತಾಪಂ ಇಓ ವೇಣುಗೋಪಾಲ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಹಿರಿಯ ನಾಗರಿಕರಿಂದ ಅರ್ಜಿ ಆಹ್ವಾನ

ಮಂಡ್ಯ, ಜು.17– 2023–24ನೇ ಸಾಲಿನ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ಅ.1 ರಂದು ರಾಜ್ಯ ಮಟ್ಟದಲ್ಲಿ ಆಚರಿಸುವ ಸಂದರ್ಭ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವವರನ್ನು ಸನ್ಮಾನಿಸಲು ವಿವಿಧ ಕ್ಷೇತ್ರಗಳಲ್ಲಿ ಶಿಕ್ಷಣ, ಸಾಹಿತ್ಯ, ಕಾನೂನು, ಪ್ರತಿಭೆ/ಕ್ರೀಡೆ ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯನ್ನು ಒಳಗೊಂಡಂತೆ 6 ಮಂದಿ ಹಿರಿಯ ನಾಗರಿಕರಿಗೆ ವೈಯಕ್ತಿಕ ಪ್ರಶಸ್ತಿ ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಒಂದು ಸಂಸ್ಥೆಗೆ ರಾಜ್ಯ ಪ್ರಶಸ್ತಿಗಾಗಿ ಅರ್ಹ ಹಿರಿಯ ನಾಗರಿಕರಿಂದ ಆ.14 ರೊಳಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳ ಕಚೇರಿ, ಹಳೆ ತಾಲೂಕು ಕಚೇರಿ ಆವರಣ, ಡಿಸಿ ಆಫೀಸ್ ಹತ್ತಿರ, ದೂ:08232–231090 ಮಂಡ್ಯ ಇವರಿಂದ ಪಡೆದು ಕನ್ನಡದಲ್ಲಿ ಭರ್ತಿ ಮಾಡಿ ದ್ವಿಪ್ರತಿಯಲ್ಲಿ ನಿಗದಿತ ದಿನಾಂಕದೊಳಗೆ ಸಲ್ಲಿಸುವುದು. ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಎಂದು ಜಿಲ್ಲಾ ಅಂಗವಿಕಲ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾನು ಮುಖ್ಯಮಂತ್ರಿಯಾದಾಗಲೂ ಹೀಗೆ ಎಲ್ಲರೂ ನನ್ನ ಕೈ ಮೇಲೆತ್ತಿದ್ದರು!

ಮಹಾಘಟಬಂಧನ್ ನಾಯಕರ ಬಗ್ಗೆ ಕುಮಾರಸ್ವಾಮಿ ವ್ಯಂಗ್ಯ



ಬೆಂಗಳೂರು, ಜು.17– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮಣಿಸುವ ಉದ್ದೇಶದೊಂದಿಗೆ ಬೆಂಗಳೂರಲ್ಲಿ ಆಯೋಜಿಸಿರುವ ಮಹಾಘಟ ಬಂಧನ್ ಸಭೆ ಬಗ್ಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ.

ಮಹಾಘಟ ಬಂಧನ್ ಹೊಸದಲ್ಲ. ಈಗ ದೇಶದ 40 ನಾಯಕರನ್ನು ಕರೆಸಿ, ದೇಶಕ್ಕೆ ಏನೋ ಸಂದೇಶ ಕೊಡುತ್ತಾರಂತೆ. ನೋಡೋಣ ಯಾವ ಸಂದೇಶ ಕೊಡುತ್ತಾರೆಂದು. ಮಹಾಘಟಬಂಧನ್ ಮಾಡುತ್ತಿರುವುದೇ ಅಧಿಕಾರ ಬೇಕೆಂದು. ಆದರೆ ಅಧಿಕಾರಕ್ಕೆ ಬಂದಾಗ ಏನು ಮಾಡುತ್ತೇವೆಂದು ಜನರಿಗೆ ಹೇಳಬೇಕಲ್ಲವೇ. ಕೇವಲ ನಾವೆಲ್ಲಾ ಒಂದಾಗಿದ್ದೇವೆ ಎಂದು ಎಲ್ಲರೂ ಕೈ ಮೇಲೆತ್ತಿದರೆ ಸಾಲದು. ನಾನು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದಾಗಲೂ ಎಲ್ಲರೂ ಇದೇ ರೀತಿಯಲ್ಲಿ ನನ್ನ ಕೈಯನ್ನು ಎತ್ತಿದ್ದರು. ಆಮೇಲೆ ಏನಾಯ್ತು ಎಂದು ಎಲ್ಲರಿಗೂ ಗೊತ್ತಿದೆ ಎಂದು ಕುಟುಕಿದ್ದಾರೆ.

ಯಾವ ಸಭೆಗೂ ನಮಗೆ ಆಹ್ವಾನ ಬಂದಿಲ್ಲ. ಆಹ್ವಾನ ಕೊಡಿ ಅಂತಾ ಕೇಳೋದೂ ಇಲ್ಲ. ನಾವೇನು ಅರ್ಜಿ ಹಾಕಿದ್ದೀವಾ. ಅದು ಅವರಿಗೆ ಬಿಟ್ಟ ವಿಚಾರ. ಆದರೆ ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್ ಇನ್ನೂ ಕೆಲವರು ಜೆಡಿಎಸ್ ಅವಕಾಶವಾದಿ ಪಕ್ಷ, ಬಿಜೆಪಿ ಜೊತೆ ವಿಲೀನವಾಗುತ್ತಿದೆ ಎಂದಿದ್ದಾರೆ. ಬಿಜೆಪಿ ಜೊತೆ ಸೇರಿ ಸರ್ಕಾರ ಮಾಡಿ ಹೊರಬಂದಿರುವ ನಿತೀಶ್ ಕುಮಾರ್ ಹೀಗೆಯೇ ಮಾತನಾಡಿದ್ದಾರೆ. ನಾನೇನು ಇವರ ಗುಲಾಮನೇ, ಅವರ ಅಪ್ಪಣೆ ಪಡೆದುಕೊಂಡು ತೀರ್ಮಾನ ಮಾಡಬೇಕಾ ಎಂದು ಕಿಡಿಕಾರಿದ್ದಾರೆ.

ಸಿಎಂಗೆ ತಿರುಗೇಟು: ಪಂಚರತ್ನ ಕಾರ್ಯಕ್ರಮಗಳು ಜಾರಿಯಾಗದೇ ಇದ್ದಲ್ಲಿ ಜೆಡಿಎಸ್ ಪಕ್ಷವನ್ನು ವಿಸರ್ಜನೆ ಮಾಡುತ್ತೇನೆ ಎಂದಿದ್ದೆ. 123 ಸೀಟು ಬರದಿದ್ದಲ್ಲಿ ವಿಸರ್ಜನೆ ಮಾಡುತ್ತೇನೆ ಎಂದು ಎಲ್ಲಿಯೂ ಹೇಳಿರಲಿಲ್ಲ. ತಮ್ಮನ್ನು ಕನ್ನಡ ಪಂಡಿತ ಎಂಬಂತೆ ಸಿದ್ದರಾಮಯ್ಯ ಎಲ್ಲಾ ಕಡೆ ಹೇಳಿಕೊಳ್ಳುತ್ತಾರೆ. ಅವರಿಗೇನು ಕನ್ನಡ ಬರೋದಿಲ್ವಾ, ದೇವರಾಜು ಅರಸು ನಂತರ 2ನೇ ಬಾರಿಗೆ ಸಿಎಂ ಆಗಿದ್ದೀರಿ ಅಂತಾ ಹೇಳ್ಕೊಂಡು ಓಡಾಡುತ್ತೀರಿ. ಇದರಿಂದ ಜನರಿಗೆ ಯಾವ ಸಂದೇಶ ಕೊಡೋಕೆ ಹೊರಟಿದ್ದೀರಿ, ಅದನ್ನು ಮೊದಲು ಹೇಳಿ. ಇದು ನನ್ನ ಕೊನೆ ಚುನಾವಣೆ ಎಂದಿದ್ದೀರಿ. ಜನರ ಬಳಿ ಒಳ್ಳೆಯ ಹೆಸರು ತೆಗೆದುಕೊಂಡು ಅಧಿಕಾರ ಮಾಡಿ. ಯಾವ ಸರ್ಕಾರದ ಮೇಲೂ ಈ ರೀತಿಯ ಆರೋಪಗಳನ್ನು ನಾನೆಲ್ಲೂ ಕೇಳಿರಲಿಲ್ಲ ಎಂದು ಎಚ್‌ಡಿಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ತಿರುಗೇಟು ನೀಡಿದ್ದಾರೆ.

ಒಂದನೇ ಪುಟದಿಂದ

ಮೇಯ್ದುಕೊಂಡು ಹೋಗಲು ಬಂದಿದ್ದಾರೆ...

ಅಧಿಕಾರಕ್ಕಾಗಿ ಮಾತ್ರ ಅನೇಕ ಬಾರಿ ಈ ನಾಯಕರೆಲ್ಲಾ ಕೈ ಮೇಲೆತ್ತಿ ಒಬ್ಬರ ಕೈ ಮತ್ತೊಬ್ಬರು ಹಿಡಿದು ಕೊಂಡಿದ್ದಾರೆ. ಆ ನಂತರ ಅವರೇ ಕಿತ್ತುಕೊಂಡು ಹೋಗಿದ್ದಾರೆ. ಕಾಂಗ್ರೆಸ್ ಜತೆ ಕೈಜೋಡಿಸಿ ನಾವು ಅನುಭವಿಸುತ್ತಿರುವ ಪರಿಸ್ಥಿತಿ ಬೇರೆಯವರಿಗೂ ಬರಲಿದೆ ಎಂದರು. ಎನ್‌ಡಿಎ ಸಭೆಗೆ ನಮಗೇನೂ ಆಹ್ವಾನ ಬಂದಿಲ್ಲ. ಒಂದು ವೇಳೆ ಆಹ್ವಾನ ಬಂದಾಗ ಹೋಗುವುದರ ಬಗ್ಗೆ ತೀರ್ಮಾನ ಕೈಗೊಳ್ಳುತ್ತೇನೆ. ಚುನಾವಣಾ ಸಂದರ್ಭದಲ್ಲಿ ನಮ್ಮ ಪಕ್ಷಕ್ಕೆ ನೀಡಿದಷ್ಟು ಪ್ರಚಾರ ಈಗ ಮಾಧ್ಯಮಗಳಲ್ಲಿ ದೊರೆಯುತ್ತಿದೆ.

ರಾಷ್ಟ್ರ ರಾಜಕಾರಣದ ಕುರಿತು ನನಗೆ ಯಾವುದೇ ಒಲವಿಲ್ಲ. ಜೆಡಿಎಸ್ ಎನ್‌ಡಿಎ ಸೇರಿ ಕುಮಾರಸ್ವಾಮಿ ಕೇಂದ್ರದಲ್ಲಿ ಮಂತ್ರಿಯಾಗುತ್ತಾರೆ ಎಂಬ ವಿಚಾರವೂ ನನಗೆ ಗೊತ್ತಿಲ್ಲ. ವಿರೋಧ ಪಕ್ಷದ ನಾಯಕನ ಸ್ಥಾನವೂ ನನಗೆ ಬೇಕಿಲ್ಲ. ಬಿಜೆಪಿಯ 65 ಮಂದಿ ಗೆದ್ದಿದ್ದು, ಅವರಲ್ಲೇ ಪ್ರತಿಪಕ್ಷದ ನಾಯಕನಾಗುವ ಅರ್ಹತೆ ಹೊಂದಿದವರು ಇದ್ದಾರೆ. ಅಂಥವರಲ್ಲಿ ಒಬ್ಬರನ್ನು ಮಾಡಿಕೊಳ್ಳಲಿ ಎಂದು ಬಿಜೆಪಿಯವರಿಗೆ ಸಲಹೆ ಮಾಡಿದರು. ಈ ವಿಚಾರದಲ್ಲಿ ಕಾಲಹರಣ ಮಾಡಬೇಡಿ ಎಂದು ಆ ಪಕ್ಷದ ದೆಹಲಿ ನಾಯಕರಿಗೂ ಮನವಿ ಮಾಡುತ್ತೇನೆ. ಮೈತ್ರಿ ಮತ್ತು ವಿರೋಧ ಪಕ್ಷದ ನಾಯಕನ ಸ್ಥಾನ ಸೇರಿದಂತೆ ನಮ್ಮ ಪಕ್ಷದಿಂದ ಯಾವ ಬೇಡಿಕೆಯೂ ಇಟ್ಟಿಲ್ಲ. ಆ ಪಕ್ಷದ ಜತೆ ಈ ಸಂಬಂಧ ಮಾತುಕತೆ ನಡೆದಿಲ್ಲ. ನಮಗೆ ನಾಡಿನ ಜನತೆ 19 ಸ್ಥಾನ ನೀಡಿದ್ದಾರೆ. ಅವರು ಕೊಟ್ಟ ಕೆಲಸ ಮಾಡಿಕೊಂಡು ಇರುತ್ತೇವೆ ಎಂದು ಅವರು ಹೇಳಿದರು.

ವಿಪಕ್ಷಗಳ ಒಗ್ಗಟ್ಟು ಭಾರತದ ರಾಜಕೀಯ ಚಿತ್ರಣವನ್ನು ಬದಲಿಸಲಿದೆ

ಬಿಜೆಪಿ ಎನ್‌ಡಿಎಗೆ ಹೊಸ ಜೀವ ತುಂಬುವ ಪ್ರಯತ್ನ ಮಾಡುತ್ತಿದೆ: ಕಾಂಗ್ರೆಸ್



ಬೆಂಗಳೂರು: ಪ್ರತಿಪಕ್ಷಗಳ ಒಗ್ಗಟ್ಟು ಭಾರತದ ರಾಜಕೀಯ ಸನ್ನಿವೇಶದಲ್ಲಿ 'ಗೇಮ್ ಚೇಂಜರ್' ಆಗಲಿದೆ ಎಂದು ಕಾಂಗ್ರೆಸ್ ಬಣ್ಣಿಸಿದೆ. ಇದೇ ಸಂದರ್ಭದಲ್ಲಿ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದು, ಏಕಾಂಗಿಯಾಗಿ ವಿರೋಧ ಪಕ್ಷಗಳನ್ನು ಸೋಲಿಸುವ ಮಾತುಗಳನ್ನಾಡುತ್ತಿದ್ದ ಬಿಜೆಪಿಯವರು ಈಗ 'ಭೂತ' ಎನಿಸಿಕೊಂಡಿದ್ದ ಎನ್‌ಡಿಎಗೆ ಹೊಸ ಜೀವ ತುಂಬುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಟೀಕಿಸಿದೆ.

ಇಂದು ಸಂಜೆಯಿಂದ ಆರಂಭವಾಗಲಿರುವ ವಿರೋಧ ಪಕ್ಷಗಳ ಎರಡು ದಿನಗಳ ಮಹತ್ವದ ಸಭೆಯ ಕುರಿತು ಇಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇದ್ದಕ್ಕಿದ್ದಂತೆ ಎನ್‌ಡಿಎ ನೆನಪಾಗಿದೆ. ಎನ್‌ಡಿಎಗೆ ಹೊಸ ಜೀವ ತುಂಬುವ ಪ್ರಯತ್ನಗಳು ನಡೆಯುತ್ತಿವೆ. ಇದರ ಪರಿಣಾಮ ದೆಹಲಿಯಲ್ಲಿ ಎನ್‌ಡಿಎ ಮೈತ್ರಿಕೂಟಗಳ ಸಭೆ ಕರೆದಿದ್ದಾರೆ ಎಂದರು.

ಎನ್‌ಡಿಎ ಬಗ್ಗೆ ಇದುವರೆಗೆ ಯಾವುದೇ ಚರ್ಚೆಗಳು ನಡೆಯುತ್ತಿರಲಿಲ್ಲ, ಆದರೆ ಕೆಲ ದಿನಗಳಿಂದ ಇದ್ದಕ್ಕಿದ್ದಂತೆ ಎನ್‌ಡಿಎ ಮೈತ್ರಿಕೂಟ ಅದರ ಸಭೆಯ ಬಗ್ಗೆ ಕೇಳುತ್ತಿದ್ದೇವೆ. ಭೂತವಾಗಿ ಮಾರ್ಪಟ್ಟಿದ್ದ ಎನ್‌ಡಿಎಗೆ ಈಗ ಹೊಸ ಜೀವ ತುಂಬುವ ಪ್ರಯತ್ನ ನಡೆಯುತ್ತಿದೆ, ಇದು ಪಾಟ್ನಾದಲ್ಲಿ ನಡೆದ ವಿಪಕ್ಷಗಳ ಸಭೆಯ ಫಲಿತಾಂಶವಾಗಿದೆ ಎಂದರು.

ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಆಡಳಿತದಲ್ಲಿ ಸಂಪೂರ್ಣ ವಿಫಲವಾಗಿರುವ ಮತ್ತು ಸುಳ್ಳು ಭರವಸೆ ನೀಡಿ ವಂಚಿಸಿದವರಿಗೆ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

26 ವಿರೋಧ ಪಕ್ಷಗಳು ಒಗ್ಗಟ್ಟಿನಿಂದ ಮುನ್ನಡೆಯಲು ಮತ್ತು ಜನರ ಸಮಸ್ಯೆಗಳಿಗೆ ಪರಿಹಾರವನ್ನು ನೀಡಲು ಮತ್ತು ಈ ಸರ್ವಾಧಿಕಾರಿ ಸರ್ಕಾರದ ಕ್ರಮಗಳಿಗೆ ಮುಕ್ತಿ ಹಾಡಿ ಜನರ ಸಮಸ್ಯೆಗಳಿಗೆ ಪರಿಹಾರ ನೀಡಲು ನಾವು ಇಲ್ಲಿ ಸಭೆ ಸೇರುತ್ತಿದ್ದೇವೆ ಎಂದರು. ಇದು ವಿಪಕ್ಷಗಳ ಎರಡನೇ ಸಭೆ. ಮುಂದಿನ ಕ್ರಮ ಏನು ಎಂಬುದನ್ನು ಈ ಸಭೆಯಲ್ಲಿ ನಿರ್ಧರಿಸುತ್ತೇವೆ ಎಂದು ವೇಣುಗೋಪಾಲ್ ಹೇಳಿದರು. ಜುಲೈ 20 ರಂದು ಸಂಸತ್ತಿನ ಅಧಿವೇಶನವೂ ಪ್ರಾರಂಭವಾಗುತ್ತಿದ್ದು, ವಿರೋಧ ಪಕ್ಷಗಳು ಅದಕ್ಕಾಗಿ ತಂತ್ರವನ್ನು ರೂಪಿಸಲಿವೆ ಎಂದು ಅವರು ಹೇಳಿದರು. ಭಾರತೀಯ ರಾಜಕೀಯ ಸನ್ನಿವೇಶದಲ್ಲಿ ಇದು ಬದಲಾವಣೆಯ ಸಮಯವಾಗಿದೆ. ಪಾಟ್ನಾ ಸಭೆಯ ನಂತರ ಪ್ರತಿಪಕ್ಷಗಳನ್ನು ಸುಲಭವಾಗಿ ಸೋಲಿಸುತ್ತೇವೆ ಎಂದು ಈಗ ಸಭೆಗಳನ್ನು ಮಾಡುತ್ತಿದ್ದಾರೆ. ಅದು ಪ್ರತಿಪಕ್ಷಗಳ ಒಗ್ಗಟ್ಟಿನ ನಿಜವಾದ ಯಶಸ್ಸು ಎಂದು ವೇಣುಗೋಪಾಲ್ ಹೇಳಿದರು.

2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಒಗ್ಗಟ್ಟಿನಿಂದ ಹೋರಾಡುವ ಕಾರ್ಯತಂತ್ರ ರೂಪಿಸಲು ಇಲ್ಲಿ ನಡೆಯುತ್ತಿರುವ ಎರಡು ದಿನಗಳ ಚಿಂತನ ಮಂಥನ ಸಮಾವೇಶದಲ್ಲಿ 24 ವಿಪಕ್ಷಗಳ ನಾಯಕರು ಪಾಲ್ಗೊಳ್ಳಲಿದ್ದಾರೆ.

ಸೀಟು ಹಂಚಿಕೆ, ಮೈತ್ರಿಕೂಟದ ಹೆಸರಿನ ಬಗ್ಗೆ ಚರ್ಚೆ

ಬೆಂಗಳೂರು: ಬೆಂಗಳೂರಿನಲ್ಲಿ ನಡೆಯಲಿರುವ ವಿರೋಧ ಪಕ್ಷಗಳ ಎರಡನೇ ಸಭೆಯಲ್ಲಿ, 2024ರ ಲೋಕಸಭೆ ಚುನಾವಣೆಗೆ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ನಿರ್ಧರಿಸುವ ಹೊರತಾಗಿ ವಿವಿಧ ವಿಷಯಗಳ ಬಗ್ಗೆ ನಿರ್ಧರಿಸಲು ಸಂಚಾಲಕರನ್ನು ನೇಮಿಸಿ, ವಿವಿಧ ತಂಡಗಳನ್ನು ರಚಿಸುವ ಸಾಧ್ಯತೆಯಿದೆ.

ಪ್ರತಿಪಕ್ಷಗಳಲ್ಲಿಯೇ ಕಾಂಗ್ರೆಸ್ ಅತೀ ದೊಡ್ಡ ಪಕ್ಷವಾಗಿರುವುದರಿಂದ, ತಾನೇ ಹೊಸ ಮೈತ್ರಿಕೂಟದ ನೇತೃತ್ವದ ವಹಿಸಿಕೊಳ್ಳಲು ಕಾಂಗ್ರೆಸ್ ಉತ್ಸುಕವಾಗಿದೆ ಎಂದು ಮೂಲಗಳು ತಿಳಿಸಿವೆ. ಆದಾಗ್ಯೂ, ಕಾಂಗ್ರೆಸ್ ಈ ವಿಷಯದಲ್ಲಿ ಅಚಲವಾಗಿರದಿರಬಹುದು ಮತ್ತು ವಿರೋಧ ಪಕ್ಷಗಳ ಸಂಯೋಜಿತ ನಿರ್ಧಾರ ಒಪ್ಪಿಕೊಳ್ಳಬಹುದು ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್‌ನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಹೆಸರಿಗೆ ಯಾವುದೇ ಪ್ರತಿಪಕ್ಷಗಳು ಆಕ್ಷೇಪ ವ್ಯಕ್ತಪಡಿಸುವುದಿಲ್ಲ. 2024ರ ಲೋಕಸಭೆ ಚುನಾವಣೆ ಯನ್ನು ಯಾವುದೇ ಒಬ್ಬ 'ನಾಯಕ ವರ್ಸಸ್ ಮೋದಿ' ನಡುವಿನ ಯುದ್ಧವನ್ನಾಗಿ ಮಾಡದೆ, ಸಮಸ್ಯೆಗಳ ಮೇಲೆ ಕೇಂದ್ರೀಕರಿಸಲು ಮತ್ತು ಅದನ್ನು 'ಮೋದಿ ವರ್ಸಸ್ ಜನರ' ಯುದ್ಧವನ್ನಾಗಿ ಮಾಡಲು ವಿರೋಧ ಪಕ್ಷಗಳು ಉತ್ಸುಕವಾಗಿವೆ ಎಂದು ಮೂಲಗಳು ತಿಳಿಸಿವೆ.

ಕಳೆದ ತಿಂಗಳು ಪಾಟ್ನಾದಲ್ಲಿ ನಡೆದ ವಿರೋಧ ಪಕ್ಷಗಳ ಸಭೆಯಲ್ಲಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಪ್ರತಿಪಕ್ಷಗಳ ಸಂಚಾಲಕರನ್ನಾಗಿ ಮಾಡಲು ಕೆಲವು ಪಕ್ಷಗಳು ಪ್ರಸ್ತಾಪಿಸಿದ್ದವು ಮತ್ತು ಈ ವಿಷಯದ ಬಗ್ಗೆ ಒಮ್ಮತ ಮೂಡಿದರೆ ಕಾಂಗ್ರೆಸ್ ಅದನ್ನು ಒಪ್ಪಿಕೊಳ್ಳುತ್ತದೆ ಎಂದು ಅವರು ಹೇಳಿದ್ದಾರೆ.

ಎನ್‌ಡಿಎ ಸೇರಲು ಆರು ಲೋಕಸಭಾ ಸ್ಥಾನ, ಒಂದು ರಾಜ್ಯಸಭಾ ಸ್ಥಾನದ ಬೇಡಿಕೆಯಿಟ್ಟ ಚಿರಾಗ್

ಪಾಟ್ನಾ: ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ ಅವರು ಎಲ್‌ಜೆಪಿ(ರಾಮ್‌ವಿಲಾಸ್) ಮುಖ್ಯಸ್ಥ ಚಿರಾಗ್ ಪಾಸ್ವಾನ್ ಅವರಿಗೆ ಎನ್‌ಡಿಎ ಸಭೆಯಲ್ಲಿ ಭಾಗವಹಿಸುವಂತೆ ಆಹ್ವಾನ ನೀಡಿದ ಎರಡು ದಿನಗಳ ನಂತರ, ತಮ್ಮ ಪಕ್ಷಕ್ಕೆ ಆರು ಲೋಕಸಭಾ ಸ್ಥಾನಗಳು ಮತ್ತು ಒಂದು ರಾಜ್ಯಸಭಾ ಸ್ಥಾನದ ಬೇಡಿಕೆಯನ್ನು ಬಿಜೆಪಿ ಒಪ್ಪಿಕೊಳ್ಳಬೇಕು ಎಂದು ಚಿರಾಗ್ ಒತ್ತಾಯಿಸಿದ್ದಾರೆ.

ಎಲ್‌ಜೆಪಿ(ರಾಮ್ ವಿಲಾಸ್) ಮುಖ್ಯಸ್ಥ ಚಿರಾಗ್ ಅವರು ತಮ್ಮ ಪಕ್ಷಕ್ಕೆ ಹಾಜಿಪುರ ಸೇರಿದಂತೆ ಆರು ಲೋಕಸಭಾ ಸ್ಥಾನಗಳು ಮತ್ತು ಒಂದು ರಾಜ್ಯಸಭಾ ಸ್ಥಾನವನ್ನು ನೀಡಬೇಕೆಂದು ಒತ್ತಾಯಿಸಿರುವುದಾಗಿ ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

ಚಿರಾಗ್ ಅವರನ್ನು ಎನ್‌ಡಿಎ ತೆಕ್ಕೆಗೆ ತರಲು ಬಿಜೆಪಿ ಯತ್ನಿಸುತ್ತಿದ್ದು, ಎಲ್‌ಜೆಪಿ (ರಾಮ್ ವಿಲಾಸ್) ಎನ್‌ಡಿಎನ ಪ್ರಮುಖ ಮಿತ್ರ ಪಕ್ಷ ಎಂದು ಜೆಪಿ ನಡ್ಡಾ ಅವರು ಬಣ್ಣಿಸಿದ್ದಾರೆ. ಅಲ್ಲದೆ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅವರು ಎಲ್‌ಜೆಪಿ ಯೊಂದಿಗೆ ನಿರಂತರ ಸಂಪರ್ಕದಲ್ಲಿರುವುದಾಗಿ ಹೇಳಿದ್ದಾರೆ. ಚಿರಾಗ್ ಈಗಾಗಲೇ ಬಿಜೆಪಿ ನಾಯಕರ ಮುಂದೆ ತಮ್ಮ ಬೇಡಿಕೆಗಳನ್ನು ಇಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ. ಚಿರಾಗ್ ಅವರಿಗೆ ಕೇಂದ್ರ ಸಂಪುಟದಲ್ಲಿ ಸಚಿವ ಸ್ಥಾನ ನೀಡಲಾಗುವುದು ಎಂಬ ಊಹಾಪೋಹಗಳಿವೆ. ಆದರೆ ಈ ಬಗ್ಗೆ ಚಿರಾಗ್ ಅವರೇ ಅಂತಿಮ ನಿರ್ಧಾರ ತೆಗೆದುಕೊಳ್ಳಲು ಸಮಯ ತೆಗೆದುಕೊಳ್ಳುತ್ತಿದ್ದಾರೆ ಎನ್ನಲಾಗಿದೆ.

ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ರೈ ಅವರು ಶುಕ್ರವಾರ ಸಂಜೆ ಚಿರಾಗ್ ಅವರನ್ನು ಎರಡನೇ ಬಾರಿ ಭೇಟಿಯಾಗಿ ಕೇಂದ್ರದ ಎನ್‌ಡಿಎ ಸರ್ಕಾರಕ್ಕೆ ಸೇರುವಂತೆ ಆಹ್ವಾನಿಸಿದ್ದರು. ಜುಲೈ 18 ರಂದು ನವದೆಹಲಿಯಲ್ಲಿ ಎನ್‌ಡಿಎ ಸಭೆ ನಡೆಯಲಿದೆ.

ತರಬೇತಿಗಾಗಿ ಅರ್ಜಿ ಆಹ್ವಾನ

ಮಂಡ್ಯ, ಜು.17– ಹಿಂದುಳಿದ ವರ್ಗಗಳಿಗೆ ಸೇರಿದ ಕಾನೂನು ಪದವೀಧರರಿಗೆ 2023–24ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಿಂದ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಜು.31 ರೊಳಗೆ ಮಂಡ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಲ್ಲಿಸಬೇಕು. ತರಬೇತಿಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯನ್ನು ಸ್ವೀಕರಿಸುವ ಕೊನೆ ದಿನಾಂಕಕ್ಕೆ ಅಭ್ಯರ್ಥಿಯು ವಕೀಲರಾಗಿ ಕಾರ್ಯನಿರ್ವಹಿಸಲು ನಿಗದಿಪಡಿಸಲಾದ ಕಾನೂನು ಪರೀಕ್ಷೆಯಲ್ಲಿ ತೇರ್ಗಡೆಯಾಗಿ 2 ವರ್ಷ ಅವಧಿ ಒಳಗಿರುವವರು ಮಾತ್ರ ತರಬೇತಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ದೂ:08232–220835 ಅನ್ನು ಸಂಪರ್ಕಿಸಬಹುದಾಗಿದೆ.

ಇಂದು ನಡೆಯುವ ಎನ್‌ಡಿಎ ಸಭೆಯಲ್ಲಿ 38 ಮೈತ್ರಿ ಪಕ್ಷಗಳ ನಾಯಕರು ಭಾಗಿ

ನವದೆಹಲಿ, ಜುಲೈ 17: ಲೋಕಸಭೆ ಚುನಾವಣೆಗೆ ಕೆಲವು ತಿಂಗಳು ಬಾಕಿ ಇರುವಂತೆಯೇ ರಾಜಕೀಯ ಪಕ್ಷಗಳ ಚಟುವಟಿಕೆಗಳು ಗರಿಗೆದರಿವೆ. ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಲಿಸಲು ಪಣತೊಟ್ಟಿರುವ ಕಾಂಗ್ರೆಸ್ ಸೇರಿದಂತೆ 24 ವಿರೋಧ ಪಕ್ಷಗಳು ನಾಳೆ ಬೆಂಗಳೂರಿನಲ್ಲಿ ಸಭೆ ನಡೆಸುತ್ತಿವೆ. ಪ್ರಬಲ ಪೈಪೋಟಿ ಸಾಧ್ಯತೆ ಹಿನ್ನೆಲೆ ಎಚ್ಚೆತ್ತಿರುವ ಬಿಜೆಪಿ, ಮಂಗಳವಾರ ಎನ್‌ಡಿಎ ಸಭೆ ನಡೆಸಿ ಒಗ್ಗಟ್ಟು ಪ್ರದರ್ಶಿಸಲು ಮುಂದಾಗಿದೆ. ಸಭೆಯಲ್ಲಿ 38 ಪಕ್ಷಗಳ ನಾಯಕರು ಭಾಗಿಯಾಗಲಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೆಪಿ ನಡ್ಡಾ, ಮಂಗಳವಾರ ದೆಹಲಿಯಲ್ಲಿ ನಡೆಯಲಿರುವ ಸಭೆಯಲ್ಲಿ 38 ಮೈತ್ರಿ ಪಕ್ಷಗಳ ನಾಯಕರು ಭಾಗಿಯಾಗಲಿದ್ದಾರೆ. ಪ್ರಧಾನಿ ಮೋದಿ ಮೇಲೆ ದೇಶದ ಜನ ನಂಬಿಕೆಯಿಟ್ಟಿದ್ದಾರೆ. ಮೋದಿ ನೇತೃತ್ವದಲ್ಲಿ ಒಂಬತ್ತು ವರ್ಷಗಳ ಆಡಳಿತ ಯಶಸ್ವಿಯಾಗಿದ್ದು, ಭ್ರಷ್ಟಾಚಾರ ರಹಿತ ಆಡಳಿತ ನೀಡಿದ್ದಾರೆ. ಒಂಬತ್ತು ವರ್ಷಗಳಲ್ಲಿ ಮೋದಿಯವರ ಬಲಿಷ್ಠ ನಾಯಕತ್ವ ನೋಡಿದ್ದೇವೆ. ಕೋವಿಡ್ ನಿರ್ವಹಣೆಯಲ್ಲಿ ಪ್ರಧಾನಿ ಮೋದಿ ಯಶಸ್ವಿಯಾಗಿದ್ದಾರೆ ಎಂದರು.

ಕಳೆದ ಒಂಬತ್ತು ವರ್ಷಗಳಲ್ಲಿ ಎಲ್ಲಾ ಎನ್‌ಡಿಎ ಮೈತ್ರಿ ಪಕ್ಷಗಳು ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಸೂಚಿ, ಯೋಜನೆಗಳು, ನೀತಿಗಳ ಬಗ್ಗೆ ಆಸಕ್ತಿ ತೋರಿಸಿವೆ. ಪಕ್ಷಗಳು ಎನ್‌ಡಿಎ ಕಡೆಗೆ ಉತ್ಸಾಹದಿಂದ ಬರುತ್ತಿವೆ ಎಂದು ನಡ್ಡಾ ಹೇಳಿದರು.

ಬೆಂಗಳೂರಿನಲ್ಲಿ ನಡೆಯುತ್ತಿರುವ ವಿಪಕ್ಷಗಳ ಸಭೆಯನ್ನು ಟೀಕಿಸಿದ ಜೆಪಿ ನಡ್ಡಾ, ನಮ್ಮ ಮೈತ್ರಿ ಅಧಿಕಾರಕ್ಕಾಗಿ ಅಲ್ಲ, ಅದು ಸೇವೆಗಾಗಿ. ಆದರೆ ಯುಪಿಎ ಮೈತ್ರಿಗೆ ನಾಯಕನೂ ಇಲ್ಲ, ನೀತಿಯೂ ಇಲ್ಲ. ಇದು ಹಗರಣಕೋರರ ಒಂದು ಗುಂಪು. ಅವರಿಗೆ ಯಾವ ಅಧಿಕಾರವೂ ಇಲ್ಲ ಎಂದರು. ಇದೇ ವೇಳೆ ಮೋದಿ ಸರ್ಕಾರದ ಸಾಧನೆಗಳನ್ನು ವಿವರಿಸಿದ ನಡ್ಡಾ, ಒಂಬತ್ತು ವರ್ಷಗಳಲ್ಲಿ ಗ್ರಾಮಗಳು, ಬಡವರು, ಶೋಷಿತರು, ಸಂತ್ರಸ್ತರು, ವಂಚಿತರು, ದಲಿತರು, ಯುವಕರು, ಮಹಿಳೆಯರು, ರೈತರ ಕಡೆಗೆ ಯೋಜನೆಗಳನ್ನು ಕೇಂದ್ರೀಕರಿಸಲಾಗಿದೆ. ಅವರ ಸಬಲೀಕರಣದಲ್ಲಿ ನಮಗೆ ಸಾಕಷ್ಟು ಯಶಸ್ಸು ಸಿಕ್ಕಿದೆ. ಕಳೆದ ಒಂಬತ್ತು ವರ್ಷಗಳಲ್ಲಿ, ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ಪ್ರಬಲ ನಾಯಕತ್ವ ಸಿಕ್ಕಿದೆ. ಈ ನಾಯಕತ್ವಕ್ಕೆ ಜನರ ಮೆಚ್ಚುಗೆ ಪಡೆದಿದೆ ಮತ್ತು ಅತ್ಯಂತ ಸಕಾರಾತ್ಮಕ ವಾತಾವರಣವನ್ನು ಸೃಷ್ಟಿಸಿದೆ ಎಂದರು

ಉಪೇಂದ್ರ ಕುಶ್ವಾಹಾಗೆ ಆಹ್ವಾನ ನೀಡಿದ ಜೆಪಿ ನಡ್ಡಾ: ಎನ್‌ಡಿಎ ಮಹತ್ವದ ಸಭೆಗೆ ರಾಷ್ಟ್ರೀಯ ಲೋಕ ಜನತಾದಳದ ಅಧ್ಯಕ್ಷ ಉಪೇಂದ್ರ ಕುಶ್ವಾಹಾ ಅವರಿಗೆ ಆಹ್ವಾನ ನೀಡಲಾಗಿದೆ. ಸಭೆಯಲ್ಲಿ ಭಾಗಿಯಾಗುವಂತೆ ಉಪೇಂದ್ರ ಕುಶ್ವಾಹಾಗೆ ನಡ್ಡಾ ಅವರು ಆಹ್ವಾನ ನೀಡಿದ್ದಾರೆ. ಆದರೆ ಅವರ ಭಾಗವಹಿಸುವಿಕೆ ಬಗ್ಗೆ ಇದುವರೆಗೆ ಯಾವುದೇ ಅಧಿಕೃತ ಮಾಹಿತಿ ತಿಳಿದುಬಂದಿಲ್ಲ.

ಮೈಸೂರು ಮಿತ್ರ ಮಂಗಳವಾರ 18 ಜುಲೈ 2023

ಪರೀಕ್ಷೆ ಮುಂದೂಡುವಂತೆ ಆಗ್ರಹಿಸಿ ಪ್ರತಿಭಟನೆ



ಮೈಸೂರು,ಜು.17(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಗಳನ್ನು ಮುಂದೂಡುವಂತೆ ಒತ್ತಾಯಿಸಿ ಎಐಡಿಎಸ್‌ಓ ಜಿಲ್ಲಾ ಸಮಿತಿ ನೇತೃತ್ವದಲ್ಲಿ ವಿವಿಧ ಪದವಿ ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಮುಂಭಾಗ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು, ಮೈಸೂರು ವಿವಿ ಪದವಿ ತರಗತಿಗಳು ಆರಂಭವಾಗಿ ಕೇವಲ 2 ತಿಂಗಳುಗಳಾಗಿವೆ. ಯಾವುದೇ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಸಂಪೂರ್ಣ ಪಾಠಗಳು ನಡೆದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಪರೀಕ್ಷೆ ನಡೆಸುವ ಮೈಸೂರು ವಿವಿಯ ನಿರ್ಧಾರದಿಂದ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದಾರೆ. ಜತೆಗೆ ಯಾವುದೇ ರೀತಿ ಕಾಲಾವಕಾಶ ನೀಡದೆ ತರಾತುರಿಯಲ್ಲಿ ಪರೀಕ್ಷೆ ನಡೆಸಲು ಮುಂದಾಗಿದ್ದಾರೆ. ಇದು ವಿದ್ಯಾರ್ಥಿ ವಿರೋಧಿ ಧೋರಣೆ. 4 ತಿಂಗಳು ಸಂಪೂರ್ಣವಾಗಿ ಸೆಮಿಸ್ಟರ್ ತರಗತಿಗಳು ನಡೆಯಬೇಕಾಗಿತ್ತು. ಕೇವಲ 2 ತಿಂಗಳು ಪಾಠ ನಡೆಸಿ ಪರೀಕ್ಷೆ ನಡೆಸುವುದು ವಿದ್ಯಾರ್ಥಿಗಳಿಗೆ ಅನನುಕೂಲವಾಗುತ್ತದೆ ಎಂದು ಕಿಡಿಕಾರಿದರು.

ಮಹಾರಾಜ ಕಾಲೇಜನ್ನು ಚುನಾವಣೆಗೆ ಬಳಸಿಕೊಳ್ಳಲಾಗಿದೆ. ಇದರಿಂದ ಸರಿಯಾಗಿ ಪಾಠ ಪ್ರವಚನಗಳು ನಡೆದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಪರೀಕ್ಷೆಗಳನ್ನು ಮುಂದೂಡಬೇಕು. ಪರೀಕ್ಷೆಗಳ ನಡುವೆ ಅಂತರ ಕೊಡಬೇಕು ಎಂದು ಒತ್ತಾಯಿಸಿದರು.

ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಸುಭಾಷ್, ಪದಾಧಿಕಾರಿಗಳಾದ ನಿತಿನ್, ಚಂದ್ರಿಕಾ, ಚಂದನ, ಹೇಮ, ರಕ್ಷಿತಾ, ವಿದ್ಯಾರ್ಥಿಗಳಾದ ಚೇತನ್, ನಾಗರಾಜ್, ವಿಜಯ್, ರಾಜು, ಸುಹೇಲ್, ಸಂತೋಷ್, ಶಿವು, ರತನ್, ಸುನಿಲ್, ಚೈತ್ರಾ, ಸುಮಂತ್, ಶ್ರೇಯಸ್, ಮಹಾರಾಜ, ಮಹಾರಾಣಿ, ವಿದ್ಯಾವರ್ಧಕ, ಶಾರದಾ ವಿಲಾಸ ಹಾಗೂ ವಿವಿಧ ಪದವಿ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಮೈಸೂರಿನ ಸುಣ್ಣದಕೇರಿ ಕಾಕರವಾಡಿಯಲ್ಲಿ 29ನೇ ವರ್ಷದ ತಾಯಿ ಚಾಮುಂಡೇಶ್ವರಿ ಪೂಜಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಭಾಗವಹಿಸಿ, ಪ್ರಸಾದ ಬಡಿಸಿದರು. ಈ ವೇಳೆ ಚಾಮುಂಡೇಶ್ವರಿ ಪೂಜಾ ಮಹೋತ್ಸವದ ಸಮಿತಿಯ ಗೌರವ ಅಧ್ಯಕ್ಷ ಎಂ.ಸ್ವಾಮಿ, ಭಗತ್ ಸಿಂಗ್ ಕುಮಾರ್, ಪ್ರಕಾಶ್ ಪ್ರಿಯಾ ದರ್ಶನ್, ಬೈರತಿ ಲಿಂಗರಾಜ್, ನಗರ ಪಾಲಿಕೆ ಮಾಜಿ ಸದಸ್ಯ ಕೆ.ಜಿ.ರಮೇಶ್, ನಾಗರಾಜ್, ಪೈ ಕೃಷ್ಣಕುಮಾರ್ ನಾಯಕ್, ಭಾನುಪ್ರಕಾಶ್, ಲಾಯರ್ ಶಿವರಾಜ್ ಮತ್ತಿತರರಿದ್ದರು.

ಪೈಪ್‌ಲೈನ್ ಒಡೆದು ಮನೆಗಳಿಗೆ ನುಗ್ಗಿದ ನೀರು



ಮೈಸೂರು, ಜು.17(ಎಂಕೆ)– ಮೈಸೂರಿನ ಗೋಕುಲಂನಲ್ಲಿರುವ ತ್ರಿನೇತ್ರ ವೃತ್ತದ ಬಳಿ ಕುಡಿಯುವ ನೀರಿನ ಪೈಪ್‌ಲೈನ್ ಒಡೆದುಹೋಗಿ ಹಲವು ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾದ ಘಟನೆ ಸೋಮವಾರ ರಾತ್ರಿ ನಡೆದಿದೆ.

ರಾತ್ರಿ 10 ಗಂಟೆ ಸುಮಾರಿಗೆ ಪೈಪ್‌ಲೈನ್ ಒಡೆದುಹೋಗಿದ್ದು, ಅಕ್ಕ–ಪಕ್ಕದಲ್ಲಿದ್ದ 7 ಮನೆಗಳಿಗೆ ನೀರು ನುಗಿದೆ. ಪರಿಣಾಮ ಮನೆಯಲ್ಲಿದ್ದ ಟಿವಿ, ಫ್ರಿಡ್ಜ್, ವಾಷಿಂಗ್ ಮಿಷನ್ ಸೇರಿದಂತೆ ಇನ್ನಿತರೆ ಗೃಹ ಬಳಕೆ ವಸ್ತುಗಳು ಹಾನಿಯಾಗಿವೆ.

ಏಕಾಏಕಿ ಮನೆಯೊಳಗೆ ನೀರು ನುಗಿದ್ದರಿಂದ ದಿಕ್ಕೇ ತೋಚದಂತಾಯಿತು. ನೀರನ್ನು ಹೊರ ಹಾಕಲು ಹರಸಾಹಸ ಪಡುವಂತಾಯಿತು. ಬಳಿಕ ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಆಗಮಿಸಿದ ಸರಸ್ವತಿಪುರಂ ಹಾಗೂ ಹೆಬ್ಬಾಳ ಅಗ್ನಿಶಾಮಕ ಠಾಣೆ ಸಿಬ್ಬಂದಿ ಪೈಪ್‌ಲೈನ್ ಅನ್ನು ತಾತ್ಕಾಲಿಕವಾಗಿ ಬಂದ್ ಮಾಡಿ ಮನೆಗಳಿಗೆ ನುಗ್ಗಿದ್ದ ನೀರನ್ನು ಹೊರಹಾಕಲು ಸಹಕರಿಸಿದ್ದಾರೆ.

ಇದೇ ವೇಳೆ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಭೇಟಿ ನೀಡಿ, ನೀರು ನುಗ್ಗಿದ್ದ ಮನೆ ಮಾಲೀಕರಿಗೆ ಧೈರ್ಯ ತುಂಬಿದಲ್ಲದೆ ಆಹಾರ ಪದಾರ್ಥಗಳ ಕಿಟ್ ನೀಡುವುದಾಗಿ ತಿಳಿಸಿದ್ದಾರೆ.

ಜೈನಮುನಿ ಹತ್ಯೆ ಪ್ರಕರಣ

ಆರೋಪಿಗಳಿಗೆ ಜು.21ರವರೆಗೆ ನ್ಯಾಯಾಂಗ ಬಂಧನ

ಚಿಕ್ಕೋಡಿ: ಹಿರೇಕೋಡಿ ನಂದಿ ಪರ್ವತ ಆಶ್ರಮದ ಕಾಮಕುಮಾರ ನಂದಿ ಮಹಾರಾಜರ ಹತ್ಯೆ ಪ್ರಕರಣದ ಇಬ್ಬರು ಆರೋಪಿಗಳಿಗೆ ಜುಲೈ 21 ರವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಎ1 ಆರೋಪಿ ನಾರಾಯಣ ಮಾಳಿ, ಎ2 ಆರೋಪಿ ಹಸನ್ ದಲಾಯತ್‌ಗೆ ನ್ಯಾಯಾಂಗ ಬಂಧನ ವಿಧಿಸಿ ಚಿಕ್ಕೋಡಿ ಪ್ರಧಾನ ದಿವಾಣಿ ನ್ಯಾಯಾಲಯ ನ್ಯಾಯಾಧೀಶ ಚಿದಾನಂದ ಬಡಿಗೇರ ಆದೇಶ ಹೊರಡಿಸಿದ್ದಾರೆ.

7 ದಿನಗಳ ಪೊಲೀಸ್ ಕಸ್ಟಡಿ ಅವಧಿ ಅಂತ್ಯ ಹಿನ್ನೆಲೆಯಲ್ಲಿ ಇಬ್ಬರೂ ಆರೋಪಿಗಳನ್ನು ಸೋಮವಾರ ಪೊಲೀಸರು ಕೋರ್ಟ್‌ಗೆ ಹಾಜರು ಪಡಿಸಿದ್ದರು. ಚಿಕ್ಕೋಡಿ ಪ್ರಧಾನ ದಿವಾಣಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದ ಪೊಲೀಸರು ಬಳಿಕ ಹಿಂಡಲಗಾ ಜೈಲಿಗೆ ರವಾನೆ ಮಾಡಿದ್ದಾರೆ. ಚಿಕ್ಕೋಡಿ ಸಿಪಿಐ ಆರ್‌ಆರ್ ಪಾಟೀಲ್ ನೇತೃತ್ವದಲ್ಲಿ ಬೆಳಗಾವಿಯ ಹಿಂಡಲಗಾ ಜೈಲಿಗೆ ರವಾನೆ ಮಾಡಲಾಗಿದೆ.



ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಹಾಗೂ ಬಸವ ಬಳಗಗಳ ಸಂಘ ಸಂಸ್ಥೆಗಳ ಒಕ್ಕೂಟದ ಸಹಯೋಗದಲ್ಲಿ ಆಗಸ್ಟ್ 26 ಮತ್ತು 27ರಂದು ಬಸವ ಜಯಂತಿ ಆಚರಿಸಲಿರುವ ಹಿನ್ನೆಲೆಯಲ್ಲಿ ಒಕ್ಕೂಟದ ಅಧ್ಯಕ್ಷ ಟಿ.ಲಿಂಗರಾಜು ನೇತೃತ್ವದಲ್ಲಿ ಸಮಿತಿಯ ಪದಾಧಿಕಾರಿಗಳು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರನ್ನು ಭೇಟಿಯಾಗಿ, ಕಾರ್ಯಕ್ರಮದ ರೂಪುರೇಷೆ ಹಾಗೂ ಸಿದ್ಧತೆ ಸಂಬಂಧ ಮಾರ್ಗದರ್ಶನ ಪಡೆದರು.

ಸೌಜನ್ಯ ಅತ್ಯಾಚಾರ, ಹತ್ಯೆ ಪ್ರಕರಣ

ನಿಜ ಆರೋಪಿಗಳ ಬಂಧಿಸಲು ಆಗ್ರಹಿಸಿ ಭಾರೀ ಹೋರಾಟ

ಮೈಸೂರು,ಜು.17(ಎಂಟಿವೈ)– ಧರ್ಮಸ್ಥಳದಲ್ಲಿ 11 ವರ್ಷದ ಹಿಂದೆ ಹತ್ಯೆಗೀಡಾದ ಅಪ್ರಾಪ್ತ ಬಾಲಕಿ ಸೌಜನ್ಯ ಪ್ರಕರಣವನ್ನು ಮರು ತನಿಖೆ ನಡೆಸಿ, ನಿಜವಾದ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿ ಮೈಸೂರಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಯಿತು.



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದ ಆವರಣದಿಂದ ಪ್ರಗತಿಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಆರಂಭವಾದ ಪ್ರತಿಭಟನಾ ಮೆರವಣಿಗೆಯಲ್ಲಿ ಒಡನಾಡಿ ಸಂಸ್ಥೆಯ ವಿದ್ಯಾರ್ಥಿಗಳು, ವಿವಿಧ ಸಂಘಟನೆಗಳ ಹೋರಾಟಗಾರರು, ಪ್ರಗತಿಪರರು ಹಾಗೂ ಸಾರ್ವಜನಿಕರು ಪಾಲ್ಗೊಂಡು, ಸೌಜನ್ಯ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು. ವಿನೋಬಾ ರಸ್ತೆ ಮೂಲಕ ಮಹಾತ್ಮಗಾಂಧಿ ವೃತ್ತದವರೆಗೂ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ಮಹಾತ್ಮಗಾಂಧಿ ವೃತ್ತದಲ್ಲಿ ಕೆಲಕಾಲ ಮಾನವ ಸರಪಳಿ ನಿರ್ಮಿಸಿ, ಸೌಜನ್ಯಳಿಗೆ ನ್ಯಾಯ ದೊರಕಿಸುವಂತೆ ಆಗ್ರಹಿಸಿದರು. ಗಾಂಧಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿದರು. ಈ ವೇಳೆ ವಾಹನ ಸಂಚಾರಕ್ಕೆ ಅಡಚಣೆ ಉಂಟಾದ ಪರಿಣಾಮ ಪೊಲೀಸರು, ಹೋರಾಟಗಾರರ ನಡುವೆ ಮಾತಿನ ಚಕಮಕಿ ನಡೆಯಿತು. ಬಳಿಕ ಹೋರಾಟಗಾರರು ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟು ಪ್ರತಿಭಟನೆ ಮುಂದುವರೆಸಿದರು.

ಸಂತ್ರಸ್ತ ಕುಟುಂಬಸ್ಥರ ಆಕ್ರಂದನ: ಮಹಾತ್ಮ ಗಾಂಧಿ ಪ್ರತಿಮೆ ಬಳಿ ನಡೆದ ಪ್ರತಿಭಟನಾ ಸಭೆಯಲ್ಲಿ ಸೌಜನ್ಯ ಪೋಷಕರು ಹಾಗೂ ಈ ಪ್ರಕರಣದಲ್ಲಿ ನಿರ್ದೋಷಿಯಾದ ಸಂತೋಷ್ ರಾವ್ ಕುಟುಂಬದ ಸದಸ್ಯರು, ನಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಎಂದು ಅಂಗಲಾಚಿದರೆ, ಸೌಜನ್ಯ ಪೋಷಕರು ಮಗಳನ್ನು ನೆನೆದು ಕಣ್ಣೀರಾಕಿದರೆ, ಮಾಡದ ತಪ್ಪಿಗೆ ಜೈಲು ವಾಸ ಅನುಭವಿಸಿ ಬಿಡುಗಡೆಯಾದ ಸಂತೋಷ್ ರಾವ್ ಕುಟುಂಬಸ್ಥರು, ವಿನಾಃ ಕಾರಣ ನಮಗೆ ಈ ಪ್ರಕರಣದಲ್ಲಿ ತೊಂದರೆ ನೀಡಲಾಗಿದೆ ಎಂದು ಅಳಲು ತೋಡಿಕೊಂಡರು.

ಮರು ತನಿಖೆ ಮಾಡಿ: ಪ್ರತಿಭಟನಾ ಸಭೆಯಲ್ಲಿ ರಂಗಾಯಣದ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ ಮಾತನಾಡಿ, ಧರ್ಮದ ನೆಲೆ ಎಂದು ಜನ ನಂಬುತ್ತಿರುವ ಸ್ಥಳದಲ್ಲೇ ಅಪ್ರಾಪ್ತ ಬಾಲಕಿ ಸೌಜನ್ಯಳ ಕೊಲೆ ನಡೆದಿದೆ. ಅಧರ್ಮ ನಡೆಯುತ್ತಿದೆ. ಸೌಜನ್ಯಳ ಪ್ರಕರಣದಲ್ಲಿ ಬಂಧಿಸಿದ್ದ ವ್ಯಕ್ತಿಯನ್ನು ನಿರ್ದೋಷಿ ಎಂದು ಸಿಬಿಐ ನ್ಯಾಯಾಲಯ ಹೇಳಿದೆ. ಹಾಗಿದ್ದರೆ, ನೈಜ ಆರೋಪಿಗಳು ಯಾರೆಂಬುದು ಗೊತ್ತಾಗಬೇಕು. ಮೂಲ ಪ್ರಕರಣವನ್ನು ಮರು ತನಿಖೆಗೆ ಒಳಪಡಿಸಿ ಆರೋಪಿಗಳನ್ನು ಬಂಧಿಸಬೇಕು. ನಿಜವಾದ ಆರೋಪಿಗಳಿಗೆ ಶಿಕ್ಷೆಯಾಗುವವರೆಗೂ ಹೋರಾಟ ಮುಂದುವರಿಸಬೇಕು. ಈ ಪ್ರಕರಣದಲ್ಲಿ ನ್ಯಾಯಕ್ಕಾಗಿ ಕಾನೂನು ಹೋರಾಟ ಮುಂದುವರೆಸುವುದರೊಂದಿಗೆ ಸಾಮಾಜಿಕ ಹೋರಾಟ ಮಾಡುತ್ತೇವೆ. ಮೈಸೂರಿನಿಂದ ಧರ್ಮಸ್ಥಳ ಚಲೋ ನಡೆಸಿ ನ್ಯಾಯಕ್ಕಾಗಿ ಆಗ್ರಹಿಸುತ್ತೇವೆ. ಸೌಜನ್ಯ ಕುಟುಂಬದವರಿಗೆ ಬಂದ ಸ್ಥಿತಿ ಇನ್ನಾರಿಗೂ ಬರಬಾರದು. ಬಲಾಢ್ಯರು ಕಾನೂನನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡಿರುವುದರಿಂದ ಅಮಾಯಕರಿಗೆ ನ್ಯಾಯ ಸಿಕ್ಕಿಲ್ಲ ಎಂದು ಕಿಡಿಕಾರಿದರು.

ಹೋರಾಟ ನಿರಂತರ: ವಿಶ್ರಾಂತ ಕುಲಪತಿ ಡಾ.ಸಬೀಹಾ ಭೂಮಿಗೌಡ ಮಾತನಾಡಿ, ಸೌಜನ್ಯ ಪ್ರಕರಣಕ್ಕೆ ನ್ಯಾಯ ದೊರೆಯುವವರೆಗೂ ನಮ್ಮ ಹೋರಾಟ ಮುಂದುವರೆಯುತ್ತದೆ. 11 ವರ್ಷದಿಂದ ಒಂದು ಹೆಣ್ಣು ಮಗಳ ಕುಟುಂಬಕ್ಕೆ ನ್ಯಾಯ ಸಿಕ್ಕಿಲ್ಲ. ಪೈಶಾಚಿಕ ಕೃತ್ಯ ಎಸಗಿದವರು ನಿರ್ಭಯವಾಗಿ ಓಡಾಡುತ್ತಿದ್ದಾರೆ. ಕಾನೂನಿನ ಭಯ ಇಲ್ಲದಂತಾಗಿದೆ. ಈ ಹಿನ್ನೆಲೆಯಲ್ಲಿ ಸೌಜನ್ಯ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಲು ಎಲ್ಲಾ ಸಂಘಟನೆಗಳು ಒತ್ತಾಸೆಯಾಗಿ ನಿಲ್ಲಬೇಕು ಎಂದರು.

ವಿಶೇಷ ತನಿಖಾ ತಂಡ ರಚಿಸಿ: ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ಸೌಜನ್ಯ ಪ್ರಕರಣದ ನಿಜವಾದ ಆರೋಪಿಗಳ ಪತ್ತೆಗೆ ಮರು ತನಿಖೆಗಾಗಿ ವಿಶೇಷ ತನಿಖಾ ತಂಡ ರಚಿಸುವ ಅಗತ್ಯವಿದೆ. ಈಗಾಗಲೇ ಪ್ರಕರಣದ ಸಾಕ್ಷಿ ನಾಶಕ್ಕೆ ಸಂಚು ನಡೆಯುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಆರೋಪಿಗಳ ಪತ್ತೆ ಮಾಡಿ, ಸೌಜನ್ಯಳ ಆತ್ಮಕ್ಕೆ ಶಾಂತಿ ದೊರಕುವಂತೆ ಮಾಡಬೇಕು ಎಂದು ಒತ್ತಾಯಿಸಿದರು.

ಸಂಜಯ್ ರಾವ್ ಮಾತನಾಡಿ, ದೇವಸ್ಥಾನಕ್ಕೆ ಹೋದ ನನ್ನ ತಮ್ಮ ಸಂತೋಷ್ ರಾವ್‌ನನ್ನು ಆರೋಪಿಯನ್ನಾಗಿ ಮಾಡಿದರು. ಯಾವ ತಪ್ಪು ಮಾಡದ ಆತ 6 ವರ್ಷಗಳ ಕಾಲ ಜೈಲು ಶಿಕ್ಷೆ ಅನುಭವಿಸಿದ. ಈಗ ನಿರಾಪರಾಧಿಯಾಗಿ ಹೊರಗೆ ಬಂದಿದ್ದಾನೆ. ನಮಗಾದ ಅನ್ಯಾಯಕ್ಕೆ ಪರಿಹಾರ ಸಿಗಬೇಕು ಎಂದು ಆಗ್ರಹಿಸಿದರು. ಒಡನಾಡಿ ಸ್ಟ್ಯಾನ್ಲಿ ಮಾತನಾಡಿ, ಕಾನೂನಿಗೆ ಗೋರಿ ಕಟ್ಟಿದ್ದರಿಂದ ಸೌಜನ್ಯ ಮತ್ತು ಸಂತೋಷ್‌ರಾವ್ ಮನೆಗಳು ಸ್ಮಶಾನದಂತಾಗಿವೆ. ಈ ಪ್ರಕರಣದಲ್ಲಿ ಭಾಗಿದಾರರಾದ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸಬೇಕು. ಮುಖ್ಯಮಂತ್ರಿಗಳು ಸೌಜನ್ಯ ಮನೆಗೆ ಭೇಟಿ ಕೊಡಬೇಕು ಎಂದು ಒತ್ತಾಯಿಸಿದರು.

ಹೋರಾಟಗಾರ್ತಿ ಸೀಮಾ ಮಾತನಾಡಿ, ತ್ವರಿತಗತಿಯಲ್ಲಿ ತನಿಖೆ ನಡೆಸಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಬೇಕು. ಇವತ್ತಿಗೂ ಹೆಣ್ಣು ಮಕ್ಕಳು ಅಭದ್ರತೆಯಲ್ಲಿ ಬದುಕುವಂತಾಗಿದೆ. ಸೂಕ್ತ ಭದ್ರತೆ ಕೊಡಬೇಕು ಎಂದು ಆಗ್ರಹಿಸಿದರು. ಜಿ.ಪಿ.ಬಸವರಾಜು ನಿರ್ವಹಿಸಿದರು. ಹೆಚ್.ಜನಾರ್ಧನ್ ಹೋರಾಟದ ಗೀತೆ ಹಾಡಿದರು.

ಪ್ರತಿಭಟನೆಯಲ್ಲಿ ಸೌಜನ್ಯ ತಾಯಿ ಕುಸುಮಾವತಿ, ಪ್ರೊ.ಕಾಳಚನ್ನೇಗೌಡ, ಒಡನಾಡಿ ಸಂಸ್ಥೆ ನಿರ್ದೇಶಕರಾದ ಸ್ಟ್ಯಾನ್ಲಿ, ಪರಶುರಾಮ್, ವಿವಿಧ ಸಂಘಟನೆಗಳ ಮುಖಂಡರಾದ ಕೆ.ವೆಂಕಟರಾಜು, ಕುಪ್ಪೇಗಾಲ ಸೋಮು, ನಾ.ದಿವಾಕರ, ಅಹಿಂದ ಜವರಪ್ಪ, ಆಲಗೂಡು ಶಿವಕುಮಾರ್, ಶಂಭುಲಿಂಗಸ್ವಾಮಿ, ರಂಗಕರ್ಮಿಗಳಾದ ಮೈಮ್ ರಮೇಶ್, ಒಡನಾಡಿಯ ಪರಶುರಾಮ್, ಸ.ರ.ಸುದರ್ಶನ, ಸಿ.ಬಸವಲಿಂಗಯ್ಯ, ರತಿರಾವ್, ಪ್ರೊ.ಪಂಡಿತರಾಧ್ಯ, ಲ.ಜಗನ್ನಾಥ್, ಚ.ಸರ್ವಮಂಗಳ, ಕೆ.ಆರ್.ಸುಮತಿ, ಕೆ.ಆರ್.ಗೋಪಾಲಕೃಷ್ಣ, ಉಗ್ರನರಸಿಂಹೇಗೌಡ, ಆರ್‌ಎಲ್‌ಎಚ್‌ಪಿ ಸರಸ್ವತಿ, ಎಲ್.ಶಿವಲಿಂಗಯ್ಯ, ಹರಿಹರ ಆನಂದಸ್ವಾಮಿ, ಮಾಜಿ ಮಹಾಪೌರ ಪುರುಷೋತ್ತಮ, ಲಕ್ಷ್ಮಣ್ ಹೊಸಕೋಟೆ, –ಮಹೇಶ್ ಶೆಟ್ಟಿ, ಟಿ.ಗುರುರಾಜ್, ಕಲ್ಲಹಳ್ಳಿ ಕುಮಾರ್, ಸಮಾಜ ಚಿಂತಕಿ ಸವಿತಾ ಪಿ.ಮಲ್ಲೇಶ್, ಕಲೀಂಪಾಷ, ನಾ.ದಿವಾಕರ ಇನ್ನಿತರರು ಪಾಲ್ಗೊಂಡಿದ್ದರು.

ಧರ್ಮದ ಕೇಂದ್ರವಾಗಲು ಮರು ತನಿಖೆಗೆ ಒಪ್ಪಬೇಕು

ಕಳೆದ ಕೆಲ ವರ್ಷಗಳಿಂದ ಧರ್ಮಸ್ಥಳದಲ್ಲಿ 467 ಅಸಹಜ ಸಾವಿನ ಪ್ರಕರಣ ದಾಖಲಾಗಿವೆ. ನಾಡಿನ ಜನ ನಂಬಿರುವಂತೆ ಧರ್ಮಸ್ಥಳ ಧರ್ಮದ ಕೇಂದ್ರವಾಗಿಯೇ ಮುಂದುವರೆಯಬೇಕಾದರೆ ಈ ಅಸಹಜ ಸಾವಿನ ಪ್ರಕರಣಗಳ ಬಗ್ಗೆ ಸಮಗ್ರ ತನಿಖೆಯಾಗಬೇಕು. ಸೌಜನ್ಯ ಹತ್ಯೆ ಪ್ರಕರಣದಲ್ಲಿ ಪೊಲೀಸರು ಒತ್ತಡಕ್ಕೆ ಒಳಗಾಗಿ ನಿರಾಪರಾಧಿಗಳನ್ನು ಆರೋಪಿಗಳೆಂದು ಬಿಂಬಿಸಿ, ನಿಜವಾದ ಅರೋಪಿಗಳನ್ನು ರಕ್ಷಿಸಿದ್ದಾರೆ.

-ಬೆಟ್ಟಯ್ಯ ಕೋಟೆ, ದಸಂಸ ಮುಖಂಡ

ವಿವಿಧ ಸಾಧಕರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ

ಮೈಸೂರು, ಜು.17(ಎಸ್‌ಪಿಎನ್)– ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿನಲ್ಲಿ ಪ್ರಶಸ್ತಿಯನ್ನು ತಾಯ್ನಾಡು ಕನ್ನಡ ರಕ್ಷಣಾ ವೇದಿಕೆ ವತಿಯಿಂದ ಸೋಮವಾರ ವಿತರಿಸಲಾಯಿತು.



ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಜಾನಪದ ಕಲಾಮೇಳ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅನೇಕ ಸಾಧಕರಿಗೆ ಮೈಸೂರು ವಿಭಾಗದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಪ್ರಶಸ್ತಿ ಪ್ರದಾನ ಮಾಡಿದರು.

ವಿವಿಧ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಸಾಧಕರಿಗೆ ಅಭಿನಂದಿಸುತ್ತಿರುವುದು ಉತ್ತಮ ಬೆಳವಣಿಗೆ. ಇದರಿಂದ ಅನೇಕ ಸಾಧಕರನ್ನು ಸಮಾಜಕ್ಕೆ ಪರಿಚಯಿಸುವ ಕೆಲಸ ಮಾಡುತ್ತಿರುವ ಹೆಚ್.ಆರ್.ಕುಶಾಲ್ ಗೌಡ ಅವರ ಸೇವೆ ಅನನ್ಯ ಎಂದು ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಶ್ಲಾಘಿಸಿದರು.

ಡಾ.ಎಸ್.ಬಸವರಾಜಪ್ಪ, ಕೆ.ಪಿ.ವೀರಪ್ಪ, ಎಸ್.ಶಿವಪ್ಪ, ಶಶಿಕಲಾ ಸುರೇಂದ್ರ, ಮಹೇಶ್, ವಿ.ಪ್ರಶಾಂತ, ಹೆಚ್.ಇ.ಆನಂದಮೂರ್ತಿ, ಜಾಹಿದುಲ್ಲಾ ಖಾನ್, ಎನ್.ಅಂಕರಾಜು, ಯದುಕುಮಾರ್, ಎಂ.ಪಿ.ಅಜಿತ್, ಮಿರ್ಲೆ ರಾಮಕೃಷ್ಣೇಗೌಡ, ಪ್ರಣತಿ ಗಿರಿಧರ್, ಸಿ.ವಾಯುಸಿಂಗ್, ಎಲ್.ಬಿ.ಚನ್ನಬಸಪ್ಪ ಮಹದೇವ್, ಎಂ.ಕೈಲಾಸಮೂರ್ತಿ, ಎಂ.ಮಹದೇವ, ಪ್ರಸನ್ನಕುಮಾರ್, ರಮೇಶ್, ಕೆ.ಸ್ವಾಮಿ, ಸಿದ್ದರಾಜು, ಕುಮಾರ್, ಕಿರಾಳು ಮಹೇಶ್, ಪಿ.ನಾಗರಾಜು, ಹೆಚ್.ಎಸ್.ದಿನೇಶ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಇದಕ್ಕೂ ಮೊದಲು ಮೈಸೂರು ಜಿಲ್ಲೆಯ ಕಿರಾಳು ಮಹೇಶ್ ತಂಡದಿಂದ ವೀರಗಾಸೆ, ಕೊರೆಗಾಲದ ರಮೇಶ್ ತಂಡದಿಂದ ಪೂಜಾ ಕುಣಿತ, ಬಾಣಸಮುದ್ರದ ಪ್ರಸನ್ನಕುಮಾರ್ ತಂಡದಿಂದ ತಮಟೆ ಕುಣಿತ, ಬಡಗಲಹುಂಡಿಯ ಎಂ.ಮಾದೇವ್ ತಂಡದಿಂದ ಬೀಸು ಕಂಸಾಳೆ, ಕೆ.ಸ್ವಾಮಿ ತಂಡದಿಂದ ಕಂಸಾಳೆ ಕುಣಿತ, ಕೊತ್ತತ್ತಿಯ ಸಿದ್ದರಾಜು ನೇತೃತ್ವದ ತಂಡ ದೊಣ್ಣೆವರಸೆ ಜಾನಪದ ನೃತ್ಯ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಿಂದ ಕಲಾಮಂದಿರ ಮೆರವಣಿಗೆ ನಡೆಯಿತು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ, ಪ್ರಾಧ್ಯಾಪಕ ಡಾ.ಎಸ್.ಬಸವರಾಜಪ್ಪ, ಡಾ.ನೀ.ಗೂ.ರಮೇಶ್, ಲೋಕೋಪಯೋಗಿ ಇಲಾಖೆ ತಾಂತ್ರಿಕ ಸಹಾಯಕ ಸಿದ್ದರಾಜು, ನಿವೃತ್ತ ಪೊಲೀಸ್ ಅಧಿಕಾರಿ ರಾಂ.ಕೆ.ಹನುಮಂತಪ್ಪ, ಶಶಿಕಲಾ ಸುರೇಂದ್ರ ಸೇರಿದಂತೆ ಇತರರಿದ್ದರು.



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ರೋಟರಿ ವಿಜಯನಗರ ಕ್ಲಬ್‌ನ ನೂತನ(2023–2024ನೇ ಸಾಲಿನ) ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು. ಪಿಡಿಜಿ ರೋ. ಆರ್.ಗುರು ಸಮ್ಮುಖದಲ್ಲಿ ನೂತನ ಅಧ್ಯಕ್ಷರಾಗಿ ಎಂ.ಎಸ್.ಹರೀಶ್, ಕಾರ್ಯದರ್ಶಿಯಾಗಿ ಎಂ.ಆರ್.ರಾಘವೇಂದ್ರ ಅಧಿಕಾರ ಸ್ವೀಕರಿಸಿದರು. ವಲಯ 8ರ ಸಹಾಯಕ ರಾಜ್ಯಪಾಲ ನಂಜುಂಡಯ್ಯ, ವಲಯ ಸೇನಾನಿ ಪಿ.ಸುರೇಂದ್ರ, ಜಗದೀಶ್, ಕೆ.ಜಿ.ಮಂಜುನಾಥ್, ನಾಗರಾಜ್, ರಾಜೇಶ್, ನಾರಾಯಣ ಸ್ವಾಮಿ, ಮರಿಸ್ವಾಮಿ ನಾಯಕ್, ಆನಂದ್ ಕುಮಾರ್, ಚಂದ್ರ ಕುಮಾರ್, ರಾಮೇಗೌಡ, ದೇವರಾಜ್, ಸುರೇಶ್, ನಾಗರಾಜ್, ಹರೀಶ್, ಪುಟ್ಟರಾಜ್, ಮಂಜು, ಕೃಷ್ಣೇಗೌಡ, ಹರೀಶ್ ರಂಗನಾಥ್, ಮಹೇಶ್, ಅಶ್ವಥ್ ರಾಮಸ್ವಾಮಿ ಹಾಗೂ ಮಹಾದೇವ ಸ್ವಾಮಿ ಉಪಸ್ಥಿತರಿದ್ದರು.

ಆಕಾಶವಾಣಿ ಬಳಿಯ ಲಕ್ಷ್ಮಿ ಸರ್ವೀಸ್ ಸ್ಟೇಷನ್ ಪೆಟ್ರೋಲ್ ಬಂಕ್ ನೆಲಸಮ



ಮೈಸೂರು, ಜು.17– ಮೈಸೂರಿನ ಕೆಆರ್‌ಎಸ್ ರಸ್ತೆ, ಆಕಾಶವಾಣಿ ಸಿಗ್ನಲ್ ಬಳಿಯ ಪೆಟ್ರೋಲ್ ಬಂಕ್ ಅನ್ನು ತೆರವುಗೊಳಿಸಲಾಗಿದೆ. ಮೂರು ದಶಕಗಳಿಂದ ಕಾರ್ಯ ನಿರ್ವಹಿಸುತ್ತಿದ್ದ ಭಾರತ್ ಪೆಟ್ರೋಲಿಯಂನ ಲಕ್ಷ್ಮಿ ಸರ್ವೀಸ್ ಸ್ಟೇಷನ್ ಪೆಟ್ರೋಲ್ ಬಂಕ್ ಈಗ ನೆಲಸಮವಾಗಿದೆ. ಸರದಿಯಲ್ಲಿ ವಾಹನಗಳಿಗೆ ಇಂಧನ ತುಂಬಿಸುತ್ತಿದ್ದ ಸ್ಥಳವೀಗ ಖಾಲಿ ಖಾಲಿಯಾಗಿದೆ. ಜಾಗದ ಭೋಗ್ಯ(ಲೀಸ್)ದ ಅವಧಿ ಮುಕ್ತಾಯವಾಗಿರುವುದರಿಂದ ಪೆಟ್ರೋಲ್ ಬಂಕ್ ಅನ್ನು ತೆರವುಗೊಳಿಸಲಾಗಿದೆ ಎಂದು ತಿಳಿದುಬಂದಿದೆ.

ಐದು ದಿನಗಳ ಹಿಂದೆಯೇ ಪೆಟ್ರೋಲ್ ಬಂಕ್ ಕಾರ್ಯ ಸ್ಥಗಿತಗೊಳಿಸಿ, ಯಂತ್ರೋಪಕರಣಗಳು ಇನ್ನಿತರ ವಸ್ತುಗಳನ್ನು ತೆರವು ಮಾಡಲಾಗುತ್ತಿದೆ. ತಮ್ಮ ವಾಹನಗಳಿಗೆ ನಿತ್ಯ ಇಲ್ಲಿಯೇ ಇಂಧನ ತುಂಬಿಸುತ್ತಿದ್ದವರು ದುರಸ್ತಿಗಾಗಿ ತಾತ್ಕಾಲಿಕವಾಗಿ ಬಂಕ್ ಸ್ಥಗಿತಗೊಳಿಸಿರಬಹುದು ಎಂದು ಭಾವಿಸಿದ್ದರು. ಆದರೆ ಈಗ ಸಂಪೂರ್ಣ ಖಾಲಿಯಾಗಿರುವುದನ್ನು ನೋಡಿ, ಬೇಸರ ವ್ಯಕ್ತಪಡಿಸಿದ್ದು ಕಂಡುಬಂದಿತು.

ಖ್ಯಾತ ಗಣಿತಶಾಸ್ತ್ರಜ್ಞೆ ಡಾ. ಮಂಗಳಾ ನಾರ್ಲಿಕರ್ ನಿಧನ



ಪುಣೆ: ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಖ್ಯಾತ ಗಣಿತಶಾಸ್ತ್ರಜ್ಞೆ ಮತ್ತು ವಿಜ್ಞಾನಿ, ಡಾ.ಜಯಂತ್ ನಾರ್ಲಿಕರ್ ಅವರ ಪತ್ನಿ ಡಾ.ಮಂಗಳಾ ನಾರ್ಲಿಕರ್ ಸೋಮವಾರ ಮಹಾರಾಷ್ಟ್ರದ ಪುಣೆಯಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರಿಗೆ 80 ವರ್ಷ ವಯಸ್ಸಾಗಿತ್ತು.

ಮಂಗಳಾ ನಾರ್ಲಿಕರ್ ಅವರು ಸುಮಾರು ಒಂದು ವರ್ಷಕ್ಕೂ ಹೆಚ್ಚು ಕಾಲದಿಂದಲೂ ಕ್ಯಾನ್ಸರ್‌ನೊಂದಿಗೆ ಹೋರಾಡುತ್ತಿದ್ದರು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ. ಅವರು ಪತಿ, ಮೂವರು ಪುತ್ರಿಯರು ಹಾಗೂ ಐವರು ಮೊಮ್ಮಕ್ಕಳನ್ನು ಅಗಲಿದ್ದಾರೆ. ತನ್ನ ಪತಿಯೊಂದಿಗೆ ಇಂಗ್ಲೆಂಡ್‌ನ ಕೇಂಬ್ರಿಡ್ಜ್‌ನಿಂದ ಭಾರತಕ್ಕೆ ಮರಳಿದ ನಂತರ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ ಡಾ. ಮಂಗಳಾ ನಾರ್ಲಿಕರ್ ಬಾಂಬೆ ವಿಶ್ವವಿದ್ಯಾಲಯದಲ್ಲಿ ಗಣಿತವನ್ನು ಸಹ ಬೋಧಿಸಿದ್ದರು.

ಮೇಯರ್ ನೇತೃತ್ವದಲ್ಲಿ ಫುಟ್‌ಪಾತ್ ಅತಿಕ್ರಮಣ ಪರಿಶೀಲನೆ

ರಾಜಮಾರ್ಗ, ಅರಮನೆ ಸುತ್ತ ಇಂದೇ ವ್ಯಾಪಾರಿಗಳ ತೆರವುಗೊಳಿಸಲು ನಿರ್ಧಾರ

ಮೈಸೂರು, ಜು.17(ಎಂಕೆ)– ಮೈಸೂರು ನಗರದ ಹೃದಯ ಭಾಗದಲ್ಲಿರುವ ಸಯ್ಯಾಜಿರಾವ್ ರಸ್ತೆ(ರಾಜಮಾರ್ಗ) ಹಾಗೂ ಅರಮನೆ ಸುತ್ತಲೂ ಫುಟ್‌ಪಾತ್ ಅತಿಕ್ರಮಣ ಸಂಬಂಧ ಮೇಯರ್ ಶಿವಕುಮಾರ್ ನೇತೃತ್ವದಲ್ಲಿ ಸೋಮವಾರ ಪರಿಶೀಲನೆ ನಡೆಸಲಾಯಿತು.

ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆಯಲ್ಲಿ ಆಯುರ್ವೇದ ವೃತ್ತದವರೆಗೆ, ಮಕ್ಕಾಜಿ ಚೌಕದೊಳಗೆ ಪಾದಯಾತ್ರೆ ಹಾಗೂ ಅರಮನೆ ಸುತ್ತಲೂ ಪ್ರದಕ್ಷಿಣೆ ಹಾಕಿ ಫುಟ್‌ಪಾತ್ ಪರಿಶೀಲನೆ ನಡೆಸಿದ ಅವರು, ಅರಮನೆ ಸುತ್ತಲೂ ಫುಟ್‌ಪಾತ್ ಅತಿಕ್ರಮಿಸಿ ವ್ಯಾಪಾರ–ವಹಿವಾಟು ಮಾಡುತ್ತಿರುವವರನ್ನು ನಾಳೆ(ಜು.18)ಯೇ ತೆರವುಗೊಳಿಸುವಂತೆ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಹಾಗೆಯೇ ಸಯ್ಯಾಜಿರಾವ್(ರಾಜಮಾರ್ಗದಲ್ಲಿ) ರಸ್ತೆಯ ಒಂದು ಬದಿಯಲ್ಲಿ(ದೇವರಾಜ ಮಾರುಕಟ್ಟೆ ಕಟ್ಟೆ ಹೊಂದಿಕೊಂಡಂತೆ) ಮಾತ್ರ ವ್ಯಾಪಾರಕ್ಕೆ ಅವಕಾಶ ಮಾಡಿಕೊಟ್ಟು ಮತ್ತೊಂದು ಬದಿಯಲ್ಲಿ ತೆರವುಗೊಳಿಸುವಂತೆ ತಿಳಿಸಿದರು. ಬಳಿಕ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಮೊನ್ನೆ ನಡೆದ ಕೌನ್ಸಿಲ್ ಸಭೆಯಲ್ಲಿ ಎಲ್ಲಾ ಸದಸ್ಯರು ಸಯ್ಯಾಜಿರಾವ್ ರಸ್ತೆ ಹಾಗೂ ಅರಮನೆ ಸುತ್ತ ಫುಟ್‌ಪಾತ್ ವ್ಯಾಪಾರಿಗಳ ಹಾವಳಿ ಜಾಸ್ತಿಯಾಗಿದೆ. ಸಾರ್ವಜನಿಕರಿಗೆ, ಪ್ರವಾಸಿಗರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಹೇಳಿದ್ದರಿಂದ ಸಭೆಯಲ್ಲೇ ಸ್ಥಳ ಪರಿಶೀಲನೆ ಮಾಡುವುದಾಗಿ ತಿಳಿಸಿದ್ದೆ. ಅದರಂತೆ ಸೋಮವಾರ ಆಯುಕ್ತರೊಡಗೂಡಿ ಪರಿಶೀಲನೆ ಮಾಡಿದ್ದೇವೆ. ಸಯ್ಯಾಜಿರಾವ್ ರಸ್ತೆ ಹಾಗೂ ಮಕ್ಕಾಜಿ ಚೌಕದೊಳಗೆ ಬರುವ ರಸ್ತೆ ಬದಿಯಲ್ಲಿ ಓಡಾಡುವುದಕ್ಕೆ ಕಷ್ಟವಾಗಿದೆ. ಆದ್ದರಿಂದ ಕೂಡಲೇ ಸಯ್ಯಾಜಿರಾವ್ ರಸ್ತೆಯಲ್ಲಿ ಎರಡು ಬದಿಯ ಫುಟ್‌ಪಾತ್‌ನಲ್ಲಿ ಒಂದು ಕಡೆ ತೆರವು ಮಾಡುವಂತೆ ಹಾಗೂ ಅರಮನೆ ಸುತ್ತಲೂ ಫುಟ್‌ಪಾತ್ ವ್ಯಾಪಾರ ಮಾಡುತ್ತಿರುವವರನ್ನು ನಾಳೆಯೇ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ತುರ್ತಾಗಿ ಅರಮನೆ ಸುತ್ತಲೂ ನಾಳೆಯೇ ತೆರವು ಮಾಡಲಾಗುವುದು. ಸಯ್ಯಾಜಿರಾವ್ ರಸ್ತೆಗೆ ಸಂಬಂಧಿಸಿದಂತೆ ದೇವರಾಜ ಮಾರುಕಟ್ಟೆ ಬದಿಯ ಫುಟ್‌ಪಾತ್‌ನಲ್ಲಿ ಹಣ್ಣು–ತರಕಾರಿ ವ್ಯಾಪಾರ ಮಾಡುತ್ತಿದ್ದಾರೆ. ಮಾರುಕಟ್ಟೆ ಎದುರಿನ ಫುಟ್‌ಪಾತ್‌ನಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದು, ತೆರವು ಮಾಡಿಸುವುದು ಅನಿವಾರ್ಯವಾಗಿದೆ. ಫುಟ್‌ಪಾತ್‌ನಲ್ಲಿ ಸಾರ್ವಜನಿಕರು ತಿರುಗಾಡಲು ಕಷ್ಟವಾಗುವಂತೆ ಬಟ್ಟೆ, ಇನ್ನಿತರೆ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದರು.

ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ, ಉಪ ಮೇಯರ್ ಡಾ.ರೂಪ, ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷೆ ಶಾಂತಕುಮಾರಿ, ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಸ್ಥಾಯಿ ಸಮಿತಿ ಅಧ್ಯಕ್ಷೆ ಸವಿತಾ, ಪಾಲಿಕೆ ಸದಸ್ಯರಾದ ಎಂ.ಡಿ.ನಾಗರಾಜು, ಸಿ.ವೇದಾವತಿ, ಪಾಲಿಕೆ ಆರೋಗ್ಯಾಧಿಕಾರಿ ಡಾ.ಎಂ.ಡಿ.ನಾಗರಾಜು, ಪರಿಸರ ಇಂಜಿನಿಯರ್‌ಗಳಾದ ಎಸ್.ಮೈತ್ರಿ, ಜ್ಯೋತಿ ಮತ್ತಿತರರು ಉಪಸ್ಥಿತರಿದ್ದರು.

ಈ ಹಿಂದೆಯೊಮ್ಮೆ ಫುಟ್‌ಪಾತ್ ತೆರವುಗೊಳಿಸಲಾಗಿತ್ತು. ಆದರೆ ನಂತರದ ದಿನಗಳಲ್ಲಿ ಮತ್ತೆ ವ್ಯಾಪಾರ–ವಹಿವಾಟು ಶುರುವಾಯಿತು. ಈ ಬಾರಿ ಕೌನ್ಸಿಲ್ ಸಭೆಯಲ್ಲಿ ಗಂಭೀರವಾಗಿ ಚರ್ಚಿಸಿ ಎಲ್ಲಾ ಪಾಲಿಕೆ ಸದಸ್ಯರ ಸಹಮತದೊಂದಿಗೆ ಫುಟ್‌ಪಾತ್ ತೆರವು ಮಾಡಲು ನಿರ್ಧರಿಸಲಾಗಿದೆ. ಅರಮನೆ ಒಳ ಆವರಣದಲ್ಲಿಯೂ ಕರಕುಶಲ ವಸ್ತುಗಳು ಸೇರಿದಂತೆ ಅನೇಕ ಆಕರ್ಷಣೆಯ ವಸ್ತುಗಳನ್ನು ಮಾರಾಟ ಮಾಡುವುದರಿಂದ ಫುಟ್‌ಪಾತ್‌ನಲ್ಲಿ ವ್ಯಾಪಾರ ನಡೆಸುವ ಅಗತ್ಯವಿಲ್ಲ. ಇದರಿಂದ ಪ್ರವಾಸಿಗರಿಗೆ ತೊಂದರೆಯಾಗುತ್ತಿದೆ.

- ಮೇಯರ್ ಶಿವಕುಮಾರ್

ಮಾದಕ ವಸ್ತು ಮಾರಾಟ, ಸೇವನೆ ವಿರುದ್ಧ ಕೊಡಗು ಪೊಲೀಸರ ಕಾರ್ಯಾಚರಣೆ

ಒರಿಸ್ಸಾ ಮೂಲದ ಪ್ರಮುಖ ಪೆಡ್ಲರ್ ಬಂಧನ

- 8 ಭಾಷೆ ಮಾತನಾಡುವ ಈತನಿಂದ ಮೈಸೂರು, ಕೇರಳಾಗೂ ಗಾಂಜಾ ಪೂರೈಕೆ
- ಒಂದೇ ವಾರದಲ್ಲಿ 36 ಪ್ರಕರಣ ದಾಖಲು

ಮಡಿಕೇರಿ, ಜು.17– ಕೊಡಗು ಜಿಲ್ಲೆಯಲ್ಲಿ ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆ ಮಾಡುವವರ ವಿರುದ್ಧ ನಿರಂತರ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಗಾಂಜಾ ಪೂರೈಸುತ್ತಿದ್ದ ಒರಿಸ್ಸಾ ಮೂಲದ ಪ್ರಮುಖ ಪೆಡ್ಲರ್‌ನನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾಹಿತಿ ನೀಡಿದ್ದಾರೆ.



ಎಸ್ಪಿ ಕೆ.ರಾಮರಾಜನ್

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 1 ವಾರದ ಅವಧಿಯಲ್ಲಿ 15 ಕೆ.ಜಿ. 2ಗ್ರಾಂ ಗಾಂಜಾ, ನಿಷೇಧಿತ ಮಾದಕ ವಸ್ತುವಾದ 19.5 ಗ್ರಾಂ ಎಂಡಿಎಂಎ ಹಾಗೂ 9 ಎಲ್‌ಎಸ್‌ಡಿ ಪದಾರ್ಥವನ್ನು ವಶಕ್ಕೆ ಪಡೆಯಲಾಗಿದೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 36 ಮಂದಿ ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆ ಎಂದು ಹೇಳಿದರು.

ಒರಿಸ್ಸಾದಿಂದ ಪೂರೈಕೆ: ಜಿಲ್ಲೆಯಲ್ಲಿ ಗಾಂಜಾ ಪೂರೈಕೆಯಾಗುತ್ತಿರುವ ಮಾಹಿತಿ ಕಲೆ ಹಾಕಿದ್ದ ಸಂದರ್ಭ ಒರಿಸ್ಸಾ ಮೂಲದ, ಈ ಹಿಂದೆ ವಿರಾಜಪೇಟೆಯಲ್ಲಿ ಗಾಂಜಾ ಮಾರಾಟ ಪ್ರಕರಣದಲ್ಲಿ ಬಂಧಿಸಲ್ಪಟ್ಟಿದ್ದ ಸೂರ್ಯಕಾಂತ್ ಎಂಬ ಆರೋಪಿಯಿಂದ ಗಾಂಜಾ ಪೂರೈಕೆಯಾಗುತ್ತಿರುವುದು ಪತ್ತೆಯಾಗಿತ್ತು. ಈ ವ್ಯಕ್ತಿ ಬೈಲುಕುಪ್ಪೆಯಲ್ಲಿ ನೆಲೆಸಿದ್ದು, 8 ಭಾಷೆಗಳಲ್ಲಿ ವ್ಯವಹರಿಸುತ್ತಾನೆ. ಒರಿಸ್ಸಾದಿಂದ ಹೈದರಾಬಾದ್ ಬಳಿಕ ಮೈಸೂರಿಗೆ ಗಾಂಜಾ ತರಿಸಿಕೊಂಡು ಅಲ್ಲಿಂದ ಕೊಡಗು ಸೇರಿದಂತೆ ಕೇರಳ ರಾಜ್ಯಕ್ಕೂ ಆರೋಪಿ ಸೂರ್ಯಕಾಂತ್ ಪೂರೈಕೆ ಮಾಡುತ್ತಿದ್ದ ಎಂದು ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ವಿವರಿಸಿದರು.

ಎಲ್ಲಾ ಮಾಹಿತಿ ಇದೆ: ಗಾಂಜಾ ಪೂರೈಕೆ ಸೇರಿದಂತೆ ಸೇವಿಸುವವರ ಬಗ್ಗೆಯೂ ಸಂಪೂರ್ಣ ವಿವರ ಜಿಲ್ಲಾ ಪೊಲೀಸರ ಬಳಿ ಇದೆ. ಗ್ರಾಮ ಮಟ್ಟದಿಂದಲೇ ಎಲ್ಲಾ ಮಾಹಿತಿ ಕಲೆ ಹಾಕಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮಾದಕ ವಸ್ತು ಸೇವನೆ ಮಾಡುವವರ ವಿರುದ್ಧವೂ ಎನ್‌ಡಿಪಿಎಸ್ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ಕಠಿಣ ಕಾನೂನು ಕ್ರಮ ಜರುಗಿಸಲಾಗುತ್ತದೆ. ಕೆಲವು ಕಾಲೇಜು ವಿದ್ಯಾರ್ಥಿಗಳ ವಿರುದ್ಧವೂ ಪ್ರಕರಣ ದಾಖಲು ಮಾಡಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾಹಿತಿ ನೀಡಿದರು.

ಭಾಗಮಂಡಲದಲ್ಲಿ ಶ್ರದ್ಧಾಭಕ್ತಿಯ ಪೊಲಿಂಕಾನ ಉತ್ಸವ



ಮಡಿಕೇರಿ, ಜು.17– ಭಾಗಮಂಡಲ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಸೋಮವಾರ ಶ್ರದ್ಧಾಭಕ್ತಿಯಿಂದ 'ಪೊಲಿಂಕಾನ ಉತ್ಸವ' ವಿಶೇಷ ಪೂಜೆ ಜರುಗಿತು.

ಭಾಗಮಂಡಲದ ಭಗಂಡೇಶ್ವರ ದೇವಾಲಯದ ಮಹಾಗಣಪತಿ, ಮಹಾವಿಷ್ಣು, ಸುಬ್ರಹ್ಮಣ್ಯ, ಭಗಂಡೇಶ್ವರ ದೇವಾಲಯಗಳಿಗೆ ಪೂಜೆ, ಬಳಿಕ ಬಾಳೆದಿಂಡಿನಿಂದ ತಯಾರಿಸಿದ ಸುಮಂಗಲಿ ಮಂಟಪಕ್ಕೆ ದೀಪ ಬೆಳಗಿ ಕರಿಮಣಿ, ತಾಳಿ, ಬಳೆ, ಸೀರೆ, ಬೆಳ್ಳಿತಟ್ಟೆ ಮತ್ತಿತರ ಆಭರಣವಿಟ್ಟು ವಿಶೇಷ ಪೂಜೆ ಸಲ್ಲಿಸಿ ಭಗಂಡೇಶ್ವರ ದೇವಾಲಯದ ಸುತ್ತ ಪ್ರದಕ್ಷಿಣೆ ಮಾಡಲಾಯಿತು. ಬಳಿಕ ತ್ರಿವೇಣಿ ಸಂಗಮದಲ್ಲಿ ಪೂಜಾ ವಿಧಿ ವಿಧಾನಗಳನ್ನು ಕೈಗೊಂಡು ವಿಸರ್ಜಿಸಲಾಯಿತು. ಪೊಲಿಂಕಾನ ಉತ್ಸವದಲ್ಲಿ ನೂರಾರು ಭಕ್ತರು ಪಾಲ್ಗೊಂಡಿದ್ದರು.

ತಲಕಾವೇರಿ ದೇವಾಲಯದ ತಕ್ಕ ಮುಖ್ಯಸ್ಥರಾದ ಕೋಡಿ ಮೋಟಯ್ಯ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಆಷಾಢ ಮಾಸದಲ್ಲಿ ಪೊಲಿಂಕಾನ ಉತ್ಸವ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಭಗಂಡೇಶ್ವರ ದೇವಾಲಯದ ಎಲ್ಲಾ ದೇವರಿಗೆ ಪೂಜೆ ಪುನಸ್ಕಾರ ಕೈಗೊಂಡು ಕರಿಮಣಿ, ಚಿನ್ನದ ಸರ, ತೊಟ್ಟಿಲು, ಬೆಳ್ಳಿತಟ್ಟೆ ಮತ್ತಿತರವನ್ನು ಸುಮಂಗಲಿಯ ಬಾಳೆದಿಂಡಿನ ಮಂಟಪಕ್ಕೆ ಹಾಕಿ ತ್ರಿವೇಣಿ ಸಂಗಮದಲ್ಲಿ ವಿಸರ್ಜಿಸುವ ಪದ್ಧತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ ಎಂದರು.

ಭಾಗಮಂಡಲ ಭಗಂಡೇಶ್ವರ ದೇವಾಲಯದ ಪ್ರಧಾನ ಅರ್ಚಕರಾದ ಹರೀಶ್ ಮತ್ತು ರವಿಕುಮಾರ್ ಅವರು, ಆಷಾಢ ಮಾಸದ ಅಮಾವಾಸ್ಯೆ ದಿನದಂದು ಭಗಂಡೇಶ್ವರ ದೇವಾಲಯದಲ್ಲಿ ಮಧ್ಯಾಹ್ನ ವಿಶೇಷ ಪೂಜೆ ಸಲ್ಲಿಸಿ ಬಳಿಕ ಬಾಳೆದಿಂಡಿನಿಂದ ಅಲಂಕರಿಸಿದ ಮಂಟಪಕ್ಕೆ ವಿಶೇಷ ಪೂಜೆ ಸಲ್ಲಿಸಿ, ಪೊಲಿಂಕಾನ ಉತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ ಎಂದರು.

ಗ್ರಾಮಸ್ಥರಾದ ಕುದುಕುಳಿ ಭರತ್ ಅವರು, ನಾಡಿನ ಜೀವನದಿ ಕಾವೇರಿಯು ತ್ರಿವೇಣಿ ಸಂಗಮಕ್ಕೆ ಬಾಗಿನ ಅರ್ಪಿಸುವ ಕಾರ್ಯಕ್ರಮ ಇದಾಗಿದೆ. ವಜ್ರ ವೈಡೂರ್ಯಗಳಿಂದ ಅಲಂಕರಿಸಿ ಕಾವೇರಿ ಮಾತೆಗೆ ಬೇಕಾದ ವಸ್ತುಗಳನ್ನು ಬಾಗಿನ ಅರ್ಪಿಸುವ ಕಾರ್ಯಕ್ರಮವು ಪೊಲಿಂಕಾನದ ವಿಶೇಷ ಪೂಜಾ ಕಾರ್ಯಕ್ರಮವಾಗಿದೆ ಎಂದು ತಿಳಿಸಿದರು.

ಜೀವನದಿ ಕಾವೇರಿ ನಾಡಿನಲ್ಲಿ ಉತ್ತಮ ಮಳೆಯಾಗಿ ರೈತರು, ನಾಡಿನ ಜನರಲ್ಲಿ ಸುಭಿಕ್ಷೆ ತರುವಂತಾಗಬೇಕು ಎಂದು ಪೊಲಿಂಕಾನ ಉತ್ಸವದಲ್ಲಿ ಪ್ರಾರ್ಥಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಪೊಲಿಂಕಾನ ಉತ್ಸವದಲ್ಲಿ ಭಗಂಡೇಶ್ವರ ದೇವಾಲಯದ ತಕ್ಕ ಮುಖ್ಯಸ್ಥರಾದ ಬಲ್ಲಡ್ಕ ಅಪ್ಪಾಜಿ, ಪಾರುಪತ್ತೆದಾರರಾದ ಕೆ.ಪಿ.ಪೊನ್ನಣ್ಣ, ಕುದುಪಜೆ ಪ್ರಕಾಶ್, ಎ.ಎಸ್.ಶ್ರೀಧರ ಇತರರು ಇದ್ದರು.

ಕದಿಯಲು ಶಾಲೆಗೆ ಬಂದ ಖದೀಮರು ಏನೂ ಸಿಗದೆ ಆವರಣದಲ್ಲಿ ಚಾಪೆ ಹಾಸಿ ಮಲಗಿ ಎದ್ದೋದರು!



ಶಾಲೆ ಆವರಣದಲ್ಲಿ ಮಲಗಲು ಖದೀಮರು ಹಾಸಿದ್ದ ಚಾಪೆ, ಬೆಡ್‌ಶೀಟ್

ಗೋಣಿಕೊಪ್ಪ, ಜು.17– ಕದಿಯಲು ಬಂದು ಶಾಲೆಗಳ ಬೀಗ ಮುರಿದ ಖದೀಮರು ಏನೂ ದೊರೆಯದ್ದರಿಂದ ಶಾಲೆ ಆವರಣದಲ್ಲಿ ಚಾಪೆ ಹಾಸಿಕೊಂಡು ನಿದ್ದೆ ಮಾಡಿ ಎದ್ದು ಹೋದ ವಿಚಿತ್ರ ಘಟನೆ ಪೊನ್ನಂಪೇಟೆ ತಾಲೂಕಿನಲ್ಲಿ ನಡೆದಿದೆ.

ಮಾಯಮುಡಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ನಲ್ಲೂರು ಪ್ರಾಥಮಿಕ ಶಾಲೆಯ ಬೀಗ ಮುರಿದು ಕಳ್ಳತನಕ್ಕೆ ಯತ್ನ ನಡೆಸಲಾಗಿದೆ. ಶನಿವಾರ ರಾತ್ರಿ ಮಾಯಮುಡಿ ಶಾಲೆಯ ಕಚೇರಿ ಬೀಗ ಮುರಿದು, ಒಳನುಗ್ಗಿರುವ ಕಳ್ಳರು ಬೀರುವನ್ನು ಮೀಟಿ ತಡಕಾಡಿದರೂ ಅವರಿಗೆ ಏನೂ ಸಿಕ್ಕಿಲ್ಲ. ನಂತರ ಖದೀಮರು ಶಾಲೆಯ ಹೊರ ಆವರಣದಲ್ಲಿ ಚಾಪೆ ಹಾಸಿ ಬೆಡ್‌ಶೀಟ್ ಹೊದ್ದುಕೊಂಡು ನಿದ್ದೆ ಮಾಡಿ ಕಾಲ್ಕಿತ್ತಿದ್ದಾರೆ.

ಭಾನುವಾರ ಗ್ರಾಮಸ್ಥರು ಶಾಲೆಯ ಬೀಗ ಮುರಿದಿರುವುದನ್ನು ಕಂಡು ಶಿಕ್ಷಕರು ಮತ್ತು ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರಿಗೆ ವಿಷಯ ಮುಟ್ಟಿಸಿದ್ದಾರೆ. ಶಾಲೆಯ ಆವರಣದಲ್ಲಿ ಹಾಸಿದ್ದ ಚಾಪೆ ಮತ್ತು ಅದರ ಮೇಲಿದ್ದ ಬೆಡ್‌ಶೀಟ್ ನೋಡಿದ ಗ್ರಾಮಸ್ಥರು, ಕಳ್ಳರು ಇಲ್ಲೇ ಮಲಗಿ ನಿದ್ದೆ ಮಾಡಿ ಎದ್ದು ಹೋಗಿದ್ದಾರೆ ಎಂದು ಮಾತನಾಡಿಕೊಳ್ಳುತ್ತಿದ್ದದ್ದು ಕೇಳಿಬಂತು. ಮತ್ತೊಂದೆಡೆ ಭಾನುವಾರ ರಾತ್ರಿ ನಲ್ಲೂರು ಸರ್ಕಾರಿ ಶಾಲೆಯ ಬೀಗ ಮುರಿದು ಖದೀಮರು ಒಳ ನುಗ್ಗಿದ್ದರಾದರೂ ಏನೂ ಸಿಗದೆ ಬರಿಗೈಲಿ ವಾಪಸ್ಸಾಗಿದ್ದಾರೆ. ಈ ಸಂಬಂಧ ಗೋಣಿಕೊಪ್ಪ ಮತ್ತು ಪೊನ್ನಂಪೇಟೆ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ.

ಕೊಡಗಲ್ಲಿ ಅನ್ನಭಾಗ್ಯ ಯೋಜನೆಯಡಿ 4.24 ಕೋಟಿ ರೂ ನಗದು ವರ್ಗಾವಣೆ

ಮಡಿಕೇರಿ, ಜು.17– ಸರ್ಕಾರದ ಆದೇಶದಂತೆ ಅಂತ್ಯೋದಯ ಅನ್ನಯೋಜನೆ (ಎಎವೈ) ಮತ್ತು ಆದ್ಯತಾ ಪಡಿತರ ಚೀಟಿ (ಬಿಪಿಎಲ್) ಪ್ರತಿ ಫಲಾನುಭವಿಗಳಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ವಯ ವಿತರಿಸಲಾಗುವ 5 ಕೆ.ಜಿ ಆಹಾರ ಧಾನ್ಯದೊಂದಿಗೆ ರಾಜ್ಯ ಸರ್ಕಾರದ ವತಿಯಿಂದ ಆದ್ಯತಾ ಪಡಿತರ ಚೀಟಿಗಳ ಪ್ರತಿ ಫಲಾನುಭವಿಗಳಿಗೆ ಪ್ರತಿ ತಿಂಗಳು 5 ಕೆ.ಜಿ ಹೆಚ್ಚುವರಿ ಅಕ್ಕಿಯ ಬದಲಾಗಿ ಜುಲೈ ಮಾಹೆಯಿಂದ ಪ್ರತಿ ಕೆ.ಜಿಗೆ ರೂ.34 ರಂತೆ (34x5 ಕೆ.ಜಿ=170) 170 ರೂ.ಗಳನ್ನು ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಹಣವನ್ನು ವರ್ಗಾಯಿಸಲಾಗಿದೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ತಿಳಿಸಿದ್ದಾರೆ.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಆಹಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾಹಿತಿ ನೀಡಿದರು. ಇನ್ನು 2 ಅಥವಾ 3 ದಿನಗಳಲ್ಲಿ ಫಲಾನುಭವಿಗಳ ಖಾತೆಗೆ ಜಮೆಯಾಗಲಿದ್ದು, ಈಗಾಗಲೇ ಡಿಬಿಟಿ ಮೂಲಕ ಹಣ ವರ್ಗಾಯಿಸಲಾಗಿದೆ ಎಂದು ಹೇಳಿದರು.

ಎಎವೈ ಮತ್ತು ಬಿಪಿಎಲ್ ಪಡಿತರ ಚೀಟಿಯನ್ನು ಹೊಂದಿರುವ ಕೊಡಗು ಜಿಲ್ಲೆಯ 80,525 ಫಲಾನುಭವಿಗಳಿಗೆ ರೂ. 4,24,67,530 ಮೊತ್ತವನ್ನು ಪಡಿತರ ಚೀಟಿ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ. ಫಲಾನುಭವಿಗಳು ಖಾತೆಗೆ ಜಮೆ ಆಗಿರುವ ಬಗ್ಗೆ ಮತ್ತು ಈ ಕುರಿತು ಸಮಸ್ಯೆಗಳಿದ್ದರೆ ಸ್ಥಳೀಯವಾಗಿ ತಾಲೂಕಿನ ಆಹಾರ ಶಿರಸ್ತೇದಾರರು/ನಿರೀಕ್ಷಕರುಗಳನ್ನು ಸಂಪರ್ಕಿಸಬಹುದಾಗಿದೆ ಎಂದರು.

ಆಧಾರ್ ಜೋಡಣೆ ಮಾಡಿರುವ ಮತ್ತು ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಯನ್ನು ಹೊಂದಿರುವ ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಯ ಕುಟುಂಬಗಳು ನೇರ ನಗದು ವರ್ಗಾವಣೆ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ ಹಾಗೂ ಕಳೆದ ಮಾರ್ಚ್, ಏಪ್ರಿಲ್, ಮೇ–2023ರ ತಿಂಗಳುಗಳಲ್ಲಿ ಸತತವಾಗಿ ಪಡಿತರ ಆಹಾರ ಧಾನ್ಯವನ್ನು ಪಡೆಯದ ಕುಟುಂಬಗಳು ನಗದು ವರ್ಗಾವಣೆ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ ಎಂದು ಆಹಾರ ಇಲಾಖೆಯ ಜಂಟಿ ನಿರ್ದೇಶಕರಾದ ಕುಮುದ ಶರತ್ ಅವರು ಮಾಹಿತಿ ನೀಡಿದರು.

ಡಿ.ಬಿ.ಟಿ ಮುಖಾಂತರ ಪಡಿತರ ಚೀಟಿ ಮುಖ್ಯಸ್ಥರ ಖಾತೆಗೆ ನಗದು ವರ್ಗಾವಣೆ ಮಾಡುವ ಯೋಜನೆ ಸಂಬಂಧ ಒಟ್ಟು 12930 ಡಿ.ಬಿ.ಟಿ ಫಲಾನುಭವಿಗಳ ಬ್ಯಾಂಕ್ ಖಾತೆಯು Inactive/ Not available in DB ಸ್ಥಿತಿಯಲ್ಲಿದ್ದು, ಇಂತಹ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿಗಳಲ್ಲಿ ಪ್ರದರ್ಶಿಸಲಾಗಿರುತ್ತದೆ. ಈ ಪಟ್ಟಿಯಲ್ಲಿರುವ ಫಲಾನುಭವಿಗಳು ತುರ್ತಾಗಿ ತಮ್ಮ ಬ್ಯಾಂಕ್ ಖಾತೆಗಳನ್ನು ಸರಿಪಡಿಸಿಕೊಳ್ಳಲು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ತಿಳಿಸಿದ್ದಾರೆ.

25ಕ್ಕೂ ಹೆಚ್ಚು ಆನೆಗಳ ಕಾಡಿಗಟ್ಟಿದ ಅರಣ್ಯ ಸಿಬ್ಬಂದಿ



ಸಿದ್ದಾಪುರ, ಜು.17(ಮುಬಾರಕ್)– ವಿರಾಜಪೇಟೆ ಅರಣ್ಯ ವಲಯ ಅಮ್ಮತ್ತಿ ಶಾಖೆ ವ್ಯಾಪ್ತಿಯಲ್ಲಿ ಬರುವ ಕಣ್ಣಂಗಾಲ, ಪುಲೀಯೇರ, ಗುಹ್ಯ, ಇಂಜಿಲಗೆರೆ, ಸಿದ್ದಾಪುರ ಗ್ರಾಮ ವ್ಯಾಪ್ತಿಯಲ್ಲಿ ಬೀಡುಬಿಟ್ಟಿದ್ದ 25ಕ್ಕೂ ಹೆಚ್ಚು ಕಾಡಾನೆಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ಕಾಡಿಗಟ್ಟುವಲ್ಲಿ ಸಫಲರಾದರು.

ಕಾಫಿ ತೋಟಗಳ ಮಾರ್ಗದಲ್ಲಿ ತೆರಳಿದ ಅರಣ್ಯ ಇಲಾಖೆಯ 20ಕ್ಕೂ ಹೆಚ್ಚು ಸಿಬ್ಬಂದಿ ಪುಲಿಯೇರಿ ಗ್ರಾಮಗಳಲ್ಲಿ ಬೀಡು ಬಿಟ್ಟಿದ್ದ 26 ಆನೆಗಳ ಹಿಂಡನ್ನು ಪಟಾಕಿ ಸಿಡಿಸಿ, ಕಾಡಿಗೆ ಅಟ್ಟುವಲ್ಲಿ ಯಶಸ್ವಿಯಾದರು.


ಈ ಆನೆಗಳು ತೋಟಗಳಿಗೆ ನುಗ್ಗಿ ಬೆಳೆ ಹಾನಿ ಮಾಡಿ ಕಾರ್ಮಿಕರು ಹಾಗೂ ಬೆಳೆಗಾರರಲ್ಲಿ ಆತಂಕ ಸೃಷ್ಟಿಸಿದ್ದವು. ಆನೆ ಕಾರ್ಯಾಚರಣೆ ಬಗ್ಗೆ ಮೊದಲೇ ಕಾಫಿ ತೋಟದಲ್ಲಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರು, ಶಾಲಾ ಮಕ್ಕಳು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗಿತ್ತು. ವಿರಾಜಪೇಟೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಶರಣಬಸಪ್ಪ, ವಲಯ ಅರಣ್ಯಾಧಿಕಾರಿ ಕಳ್ಳಿರ ಎಂ.ದೇವಯ್ಯ, ಉಪ ವಲಯ ಅರಣ್ಯಾಧಿಕಾರಿ ಸಂಜಿತ್ ಸೋಮಯ್ಯ, ಆರ್‌ಆರ್‌ಟಿ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪೇನತ್ತುಮ್ಮಟ್ಟ ಅಹ್ಮದ್ ನಿಧನ



ನಾಪೋಕ್ಲು, ಜು.17– ಇಲ್ಲಿಗೆ ಸಮೀಪದ ಎಮ್ಮೆಮಾಡು ಗ್ರಾಮ ನಿವಾಸಿ ನಿವೃತ್ತ ಶಿಕ್ಷಕ ಪೇನತ್ತುಮ್ಮಟ್ಟ ಅಹ್ಮದ್ (ಐಮದ್ 63) ಭಾನುವಾರ ನಿಧನರಾದರು. ಇವರು ಎಮ್ಮೆಮಾಡು ಜಮಾಅತ್ ಸದಸ್ಯರಾಗಿದ್ದು, ಪತ್ನಿ ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಎಮ್ಮೆಮಾಡು ಗ್ರಾಮದಲ್ಲಿ ಭಾನುವಾರ ನೆರವೇರಿಸಲಾಯಿತು.

ಮಾದಪ್ಪನ ಸನ್ನಿಧಿಗೆ ಹರಿದು ಬಂದ ಭಕ್ತ ಸಾಗರ



- ಹಣ್ಣು-ತರಕಾರಿಯಿಂದ ಕಂಗೊಳಿಸಿದ ದೇಗುಲ
- ಮಾದಪ್ಪನಿಗೆ ಹರಕೆ, ಪೂಜೆ ಸಲ್ಲಿಸಿದ ಭಕ್ತ ಗಣ
- ಸಾಲೂರು ಶ್ರೀಗಳ ಸಮ್ಮುಖದಲ್ಲಿ ವಿಶೇಷ ಅಭಿಷೇಕ



ಹನೂರು, ಜು.17(ಸೋಮು)– ಭೀಮನ ಅಮಾವಾಸ್ಯೆ ಅಂಗವಾಗಿ ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆಯಿತು.

ರಾಜ್ಯ ವಿವಿಧ ಜಿಲ್ಲೆ ಹಾಗೂ ಹೊರ ರಾಜ್ಯದಿಂದ ಲಕ್ಷಾಂತರ ಭಕ್ತರು ಮಹದೇಶ್ವರಸ್ವಾಮಿ ಬೆಟ್ಟಕ್ಕೆ ಆಗಮಿಸಿದ್ದರು. 'ಉಘೇ... ಉಘೇ ಮಾದಪ್ಪ...' ಎಂದು ಕೂಗುವ ಮೂಲಕ ಭಕ್ತಿ ಸಮರ್ಪಿಸಿದರು.

ದೇಗುಲದಲ್ಲಿ ಸಂಜೆ 6.30 ರಿಂದ ರಾತ್ರಿ 8.30ರವರೆಗೆ ಸಾಲೂರು ಬೃಹನ್ಮಠದ ಪೀಠಾಧಿಪತಿ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಸಮ್ಮುಖದಲ್ಲಿ ಬೇಡಗಂಪಣ ಅರ್ಚಕರು ಮಾದಪ್ಪನಿಗೆ ವಿವಿಧ ಅಭಿಷೇಕ ನೆರವೇರಿಸಿದರು. ಬಳಿಕ ಎಣ್ಣೆಮಜ್ಜನ ಸೇವೆ ನೆರವೇರಿಸಿ ಧೂಪ, ದೀಪದಾರತಿ ಹಾಗೂ ಮಹಾಮಂಗಳಾರತಿ ಬೆಳಗಿಸಲಾಯಿತು. ಬೆಳಗ್ಗೆಯಿಂದಲೇ ಹುಲಿ ವಾಹನ, ಬಸವ ವಾಹನ, ರುದ್ರಾಕ್ಷಿ ಮಂಟಪ, ಬೆಳ್ಳಿ, ಚಿನ್ನದ ತೇರಿನ ಉತ್ಸವದಲ್ಲಿ ಪಾಲ್ಗೊಂಡಿದ್ದ ಅಸಂಖ್ಯಾತ ಭಕ್ತರು, ಸ್ವಾಮಿಗೆ ಮುಡಿಸೇವೆ, ಪಂಜಿನ ಸೇವೆಯನ್ನು ಮಾಡುವ ಮೂಲಕ ಹರಕೆ ಸಲ್ಲಿಸಿದರು. ಬಳಿಕ, ಸರತಿ ಸಾಲಿನಲ್ಲಿ ನಿಂತು ಮಾದಪ್ಪನನ್ನು ಕಣ್ತುಂಬಿಕೊಂಡರು.

ವಿಶೇಷ ಅಲಂಕಾರ: ಗರ್ಭಗುಡಿ ಹಾಗೂ ಮುಂಭಾಗವನ್ನು ವಿವಿಧ ಬಗೆಯ ತರಕಾರಿ, ಹಣ್ಣು ಹಾಗೂ ತೆಂಗಿನಕಾಯಿಗಳಿಂದ ಮಾಡಿದ್ದ ವಿಶೇಷ ಅಲಂಕಾರ ಭಕ್ತರನ್ನು ಆಕರ್ಷಿಸಿತು. ದೇಗುಲವನ್ನು ವಿವಿಧ ಪುಷ್ಪ, ತಳಿರು ತೋರಣ ಹಾಗೂ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು.



ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆಯಿದ್ದರಿಂದ ಪ್ರಾಧಿಕಾರದಿಂದ ಅಲ್ಲಲ್ಲಿ ಕುಡಿಯುವ ನೀರು, ಶೌಚಾಲಯ ಮುಂತಾದ ಮೂಲಸೌಲಭ್ಯವನ್ನು ಕಲ್ಪಸಲಾಗಿತ್ತು. ಅಲ್ಲದೆ ಎರಡು ಕಡೆ ಪ್ರತ್ಯೇಕ ದಾಸೋಹದ ವ್ಯವಸ್ಥೆ ಮಾಡಲಾಗಿತ್ತು. ಹರಕೆ ಹೊತ್ತು ಕಾಲ್ನಡಿಗೆಯಲ್ಲಿ ಬರುವ ಭಕ್ತರಿಗೆ ಅಲ್ಲಲ್ಲಿ ಅನ್ನದಾನ ಮಾಡಲಾಗುತ್ತಿತ್ತು.

ಪ್ರಾಧಿಕಾರವು ಅಂತರಗಂಗೆಯನ್ನು ಶುದ್ಧಿಕರಿಸಿದ್ದು, ಮುಡಿಸೇವೆ ನಂತರ ಭಕ್ತರು ಅಂತರಗಂಗೆಯಲ್ಲಿ ಮಿಂದು ಪುನೀತರಾದರು. ಭೀಮನ ಅಮಾವಾಸ್ಯೆ ಹಿನ್ನೆಲೆ ಬೆಟ್ಟಕ್ಕೆ ಎರಡು ದಿನಗಳ ಮುಂಚೆಯೇ ಆಗಮಿಸಿದ್ದ ಭಕ್ತರು ಭಾನುವಾರ ಇಡೀ ರಾತ್ರಿ ರಂಗಮಂದಿರ ಮುಂಭಾಗ ಮಹದೇಶ್ವರ ಭಕ್ತಿಗೀತೆಗಳನ್ನು ಹಾಡಿದರು.

ಪ್ರಾಧಿಕಾರವೂ ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಕ್ಷೇತ್ರದಾದ್ಯಂತ ಸಿಸಿ ಕ್ಯಾಮೆರ ಅಳವಡಿಸಿತ್ತು. ಅಲ್ಲದೆ ಹೆಚ್ಚಿನ ಭದ್ರತೆಗಾಗಿ ಮಲೆಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಯಿಂದ ಹಾಗೂ ಜಿಲ್ಲೆಯ ವಿವಿಧ ಠಾಣೆಗಳಿಂದ ಹೆಚ್ಚಿನ ಸಿಬ್ಬಂದಿಯನ್ನು ಆಯಕಟ್ಟಿನ ಸ್ಥಳಗಳಲ್ಲಿ ನಿಯೋಜಿಸಲಾಗಿತ್ತು.

ಚಾಮರಾಜನಗರ ವರದಿ: ಬಿಳಿಗಿರಿ ರಂಗನಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಸಂತೇಮರಹಳ್ಳಿಯ ಶ್ರೀಮಹದೇಶ್ವರ, ಕಂದಹಳ್ಳಿಯ ಶ್ರೀಮಹದೇಶ್ವರ, ಕೂಡ್ಲೂರಿನ ಶ್ರೀಮಂಟೇಸ್ವಾಮಿ ಹಾಗೂ ಶ್ರೀಮಹದೇಶ್ವರ, ಯಡಬೆಟ್ಟದ ಶ್ರೀಮಹದೇಶ್ವರ, ಚಾಮರಾಜನಗರದ ಶ್ರೀಆದಿಶಕ್ತಿ, ಶ್ರೀಮಂಟೇಸ್ವಾಮಿ, ಶ್ರೀಚಾಮರಾಜೇಶ್ವರ, ಕೊಳದ ಗಣಪತಿ, ಶ್ರೀವೀರಭದ್ರಸ್ವಾಮಿ ದೇವಸ್ಥಾನ, ರಾಮಸಮುದ್ರದ ಶ್ರೀಮಹದೇಶ್ವರ, ಚಂದಕವಾಡಿ ಶ್ರೀಲಕ್ಷ್ಮೀದೇವಿ ದೇವಸ್ಥಾನ, ಶ್ರೀಶನೇಶ್ವರಸ್ವಾಮಿ ದೇವಸ್ಥಾನ, ಹರದನಹಳ್ಳಿ ಶ್ರೀದಿವ್ಯಲಿಂಗೇಶ್ವರ ದೇವಸ್ಥಾನ, ದೇಮಹಳ್ಳಿಯ ಶ್ರೀಮಂಟೇಸ್ವಾಮಿ, ತೊರವಳ್ಳಿಯ ಶ್ರೀಮಹದೇಶ್ವರ, ಸೋಮವಾರಪೇಟೆಯ ಶಿರಗಳ್ಳಿ ಶ್ರೀಲಕ್ಷ್ಮೀದೇವಿ ದೇವಾಲಯ ಹಾಗೂ ಬೊಮ್ಮೇಶ್ವರ ದೇವಸ್ಥಾನ ಸೇರಿದಂತೆ ಜಿಲ್ಲೆಯ ಎಲ್ಲಾ ಪ್ರಮುಖ ದೇವಾಲಯಗಳಲ್ಲಿ ಬೆಳಗ್ಗೆಯಿಂದ ರಾತ್ರಿವರೆಗೂ ವಿಶೇಷ ಪೂಜಾ ಕಾರ್ಯಗಳು ಜರುಗಿದವು.

ಮನೆಗಳಲ್ಲಿ ಭೀಮನ ಅಮಾವಾಸ್ಯೆ ಸಂಭ್ರಮ: ಜಿಲ್ಲೆಯಾದ್ಯಂತ ಹೆಂಗಳೆಯರು ಶ್ರದ್ಧಾ–ಭಕ್ತಿಯಿಂದ ಜ್ಯೋತಿರ್ಭೀಮೇಶ್ವರ ವ್ರತ ಆಚರಣೆ ಮಾಡಿದರು. ಬೆಳಗ್ಗೆಯೇ ಎದ್ದು ಮನೆ ಶುಚಿಗೊಳಿಸಿದರು. ಮನೆಯಲ್ಲಿ ಸಿಹಿ ಖಾದ್ಯ ತಯಾರಿಸಿ ದೇವರಿಗೆ ನೈವೇದ್ಯ ಅರ್ಪಿಸಿದರು. ನಂತರ ತಮ್ಮ ಪತಿಯ ಆಯುಷ್ಯ ಆರೋಗ್ಯಕ್ಕಾಗಿ ಪತಿಯ ಪಾದಪೂಜೆ ಮಾಡುವ ಮೂಲಕ ಜ್ಯೋತಿರ್ಭೀಮೇಶ್ವರ ವ್ರತ ಆಚರಣೆ ಮಾಡಿದರು.

ವಿವಾಹವಾದ ಹೆಣ್ಣುಮಕ್ಕಳು ತಮ್ಮ ಪತಿಗಾಗಿ ಈ ವ್ರತವನ್ನು ಆಚರಿಸಿದರೆ, ಅವಿವಾಹಿತ ಹೆಣ್ಣುಮಕ್ಕಳು ತಮ್ಮ ತಂದೆ, ಸಹೋದರರ ಏಳಿಗೆ, ಆರೋಗ್ಯಕ್ಕಾಗಿ ಪ್ರಾರ್ಥಿಸಿ, ತಮಗೆ ಉತ್ತಮ ಪತಿ ದೊರೆಯಲಿ ಎಂದು ಜ್ಯೋತಿರ್ಭೀಮೇಶ್ವರ ವ್ರತವನ್ನು ಆಚರಿಸಿದರು.

ಯಳಂದೂರಿನ ವಿವಿಧೆಡೆ ಭಕ್ತಿಭಾವದ ಭೀಮನ ಅಮಾವಾಸ್ಯೆ ಪೂಜೆ

ಯಳಂದೂರು, ಜು.17– ಯಳಂದೂರು ತಾಲೂಕಿನ ವಿವಿಧೆಡೆ ಭಕ್ತಿಭಾವದಿಂದ ಭೀಮನ ಅಮಾವಾಸ್ಯೆ ಆಚರಿಸಲಾಯಿತು.

ಗಣಿಗನೂರು(ಶಿವ) ಗ್ರಾಮದ ಶ್ರೀ ನೀಲಕಂಠೇಶ್ವರ ದೇವಾಲಯದಲ್ಲಿ ಭೀಮನ ಅಮಾವಾಸ್ಯೆ ವಿಶೇಷ ಪೂಜೆ ನಡೆಯಿತು. ಬೆಳಗ್ಗೆಯಿಂದಲೇ ನೀಲಕಂಠೇಶ್ವರಸ್ವಾಮಿಗೆ ಶಿವಮಂತ್ರ ಪಠಣೆಗಳೊಂದಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ ಮಾಡಲಾಯಿತು. ನಂತರ ಕೊಳಗ ಧಾರಣೆ ಮಾಡಿದ ಬಳಿಕ ಹೂವಿನಿಂದ ಸ್ವಾಮಿಗೆ ಅಲಂಕಾರ ಮಾಡಿ ಕರ್ಪೂರ ಆರತಿ ಮಾಡಲಾಯಿತು. ನಂತರ ಬೆಳಗ್ಗೆಯಿಂದಲೇ ಸಾಲುಗಟ್ಟಿ ದರ್ಶನಕ್ಕೆ ಕಾಯುತ್ತಿದ್ದ ಭಕ್ತರಿಗೆ ದರ್ಶನ ಮಾಡಲು ಅವಕಾಶ ಮಾಡಿಕೊಡಲಾಯಿತು. ನೀಲಕಂಠೇಶ್ವರ ದರ್ಶನ ಪಡೆಯಲು ಕೃಷ್ಣಪುರ, ಗುಂಬಳ್ಳಿ, ಯರಗಂಬಳ್ಳಿ, ದಾಸನಹುಂಡಿ, ಚಾಮಲಾಪುರ, ಗೌಡಹಳ್ಳಿ, ಅಗ್ರಹಾರ, ಬೂದಿತಿಟ್ಟು, ಉಪ್ಪಿನ ಮೋಳೆ ಸೇರಿದಂತೆ ಅನೇಕ ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸಿ ಶಿವಪೂಜೆ ತಮ್ಮ ಇಷ್ಟಾರ್ಥಗಳು ಈಡೇರಲಿ ಎಂದು ಪ್ರಾರ್ಥಿಸಿಕೊಂಡರು.

ನೀಲಕಂಠೇಶ್ವರ ಸೇವಾ ಸಮಿತಿ ವತಿಯಿಂದ ದರ್ಶನಕ್ಕೆ ಭಕ್ತರಿಗೆ ಅನ್ನ ಸಂತರ್ಪಣೆ, ಪ್ರಸಾದ ವಿನಿಯೋಗ ನಡೆಸಲಾಯಿತು. ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಸಿ.ಪುಟ್ಟರಂಶೆಟ್ಟಿ, ಮಾಜಿ ಶಾಸಕರಾದ ಎಸ್.ಬಾಲರಾಜು, ಜಿ.ಎನ್.ನಂಜುಂಡಸ್ವಾಮಿ, ಜಿಪಂ ಮಾಜಿ ಸದಸ್ಯ ಜೆ.ಯೋಗೇಶ್ ಸೇರಿದಂತೆ ಅನೇಕ ಗಣ್ಯರು ಶ್ರೀ ನೀಲಕಂಠೇಶ್ವರಸ್ವಾಮಿ ದರ್ಶನ ಪಡೆದರು.

ಗಂಗವಾಡಿಯಲ್ಲಿ ಪೂಜೆ: ತಾಲೂಕಿನ ಗಂಗವಾಡಿ ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿ ಮತ್ತು ಭದ್ರಕಾಳಮ್ಮ ಅಮ್ಮನವರಿಗೆ ಭೀಮನ ಅಮಾವಾಸ್ಯೆ ಅಂಗವಾಗಿ ವಿಶೇಷ ಪೂಜೆ ಪುನಸ್ಕಾರ ನಡೆಯಿತು.

ಸೋಮವಾರ ಮುಂಜಾನೆಯಿಂದಲೇ ವೀರಭದ್ರಸ್ವಾಮಿ ಮತ್ತು ಭದ್ರಕಾಳಿ ಅಮ್ಮನವರಿಗೆ ರುದ್ರಾಭಿಷೇಕ ನಡೆಸಲಾಯಿತು. ನಂತರ ಬೆಳ್ಳಿ ಕವಚದಿಂದ ಅಲಂಕರಿಸಿದ ಬಳಿಕ ಬಣ್ಣಬಣ್ಣದ ಹೂವುಗಳಿಂದ ಶೃಂಗರಿಸಿ, ಭದ್ರಕಾಳಿಗೆ ನಿಂಬೆಹಣ್ಣಿನ ಹಾರ ಹಾಕಲಾಗಿತ್ತು. ನಂತರ ಭಕ್ತರಿಗೆ ಮಹಾಮಂಗಳಾರತಿ ನೀಡಲಾಯಿತು. ನಂತರ ಪ್ರಸಾದ ವಿನಿಯೋಗ ನಡೆಯಿತು.

ಕಂದಹಳ್ಳಿ: ಕಂದಹಳ್ಳಿ ಮಹದೇಶ್ವರ ದೇವಾಲಯದಲ್ಲಿ ಭೀಮನ ಅಮಾವಾಸ್ಯೆ ಅಂಗವಾಗಿ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ಜರುಗಿತು. ಮುಂಜಾನೆಯಿಂದಲೇ ಮಹದೇಶ್ವರ ದೇವಾಲಯದಲ್ಲಿ ಶ್ರೀ ಕಾರಪುರದ ಶ್ರೀ ಬಸವರಾಜ ಸ್ವಾಮೀಜಿ ಅವರ ಅಧ್ಯಕ್ಷತೆಯಲ್ಲಿ ಲಿಂಗ ಸ್ವರೂಪಿಯಾದ ಉದ್ಭವಮೂರ್ತಿ ಮಹದೇಶ್ವರಸ್ವಾಮಿಗೆ ಶಿವ ಮಂತ್ರಾರ್ಪಣೆ ಮಾಡುತ್ತಾ ರುದ್ರಾಭಿಷೇಕ, ಬಿಲ್ವಾರ್ಚನೆ ನಡೆಸಿದ ಬಳಿಕ ಮಹಾಮಂಗಳಾರತಿ ನಡೆಸಲಾಯಿತು.





ನಂತರ ಕಾರಪುರ ಮಠದಿಂದ ಛತ್ರಿ, ಚಾಮರ, ಸೂರಿಪಾನಿ, ಕೊಂಬು ಕಹಳೆ, ವಾದ್ಯಮೇಳಗಳೊಂದಿಗೆ ಉತ್ಸವಮೂರ್ತಿ ಮಹದೇಶ್ವರರನ್ನು ಮೆರವಣಿಗೆ ಮೂಲಕ ತಂದು ರಥೋತ್ಸವಕ್ಕೆ ಅಲಂಕರಿಸಿದ ಬಳಿಕ ಕಾರಪುರ ಮಠಾಧ್ಯಕ್ಷ ಶ್ರೀ ಬಸವರಾಜಸ್ವಾಮೀಜಿ ಅವರು ಚಾಲನೆ ನೀಡಿದರು. ನಂತರ ಭಕ್ತರಿಗೆ ತಯಾರಿಸಿದ ದಾಸೋಹಕ್ಕೆ ಪೂಜೆ ಸಲ್ಲಿಸಿ, ಭಕ್ತರಿಗೆ ಅನ್ನಸಂತರ್ಪಣೆ ಮಾಡಿಕೊಡಲಾಯಿತು.

ಟಾಟಾ ಏಸ್ ಪಲ್ಟಿ: ಮಕ್ಕಳೂ ಸೇರಿ 17ಕ್ಕೂ ಹೆಚ್ಚು ಮಂದಿಗೆ ಗಾಯ

ಗುಂಡ್ಲುಪೇಟೆ, ಜು.17– ಭೀಮನ ಅಮಾವಾಸ್ಯೆಯ ಜಾತ್ರೆಗೆ ಹೋಗಿದ್ದ ಭಕ್ತರ ಟಾಟಾ ಏಸ್ ಮಗುಚಿ ಸುಮಾರು 17 ಮಂದಿ ಗಾಯಗೊಂಡ ಘಟನೆ ತಾಲೂಕಿನ ಶಿವಪುರ ಸಮೀಪ ನಡೆದಿದೆ.



ತಾಲೂಕಿನ ಅಂಕಹಳ್ಳಿ ಹಾಗೂ ಬಾಚಹಳ್ಳಿ ಗ್ರಾಮಗಳಿಂದ ಕೋಡಹಳ್ಳಿ ಸಮೀಪದ ಮಹದೇಶ್ವರ ದೇವಸ್ಥಾನದಲ್ಲಿ ಭೀಮನ ಅಮಾವಾಸ್ಯೆ ಅಂಗವಾಗಿ ನಡೆಯುತ್ತಿದ್ದ ಜಾತ್ರೆಗೆ ಹೋಗಿದ್ದ ಮಹಿಳೆಯರು ಹಾಗೂ ಮಕ್ಕಳು ಊರಿಗೆ ಹೋಗಲು ಟಾಟಾ ಏಸ್ ಗೂಡ್ಸ್ ವಾಹನ ಹತ್ತಿದ್ದಾರೆ. ಹೆಚ್ಚಿನ ಸಂಖ್ಯೆಯ ಜನರನ್ನು ಹೊತ್ತೊಯ್ಯುತ್ತಿದ್ದ ವಾಹನವು ಶಿವಪುರ ಸಮೀಪದ ತಿರುವಿನಲ್ಲಿ ಏಕಾಏಕಿ ಮಗುಚಿಬಿದ್ದ ಪರಿಣಾಮ ಮಕ್ಕಳು ಸೇರಿದಂತೆ 17ಕ್ಕೂ ಹೆಚ್ಚಿನ ಮಹಿಳೆಯರಿಗೆ ತೀವ್ರ ಪೆಟ್ಟು ಬಿದ್ದಿದೆ.

ಕೂಡಲೇ ಸ್ಥಳಕ್ಕೆ ತೆರಳಿದ ಪೊಲೀಸರು ಗಾಯಾಳುಗಳನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದರು. ತೀವ್ರ ಗಾಯಗಳಾಗಿದ್ದ 12 ಜನರನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಹಾಗೂ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕಳುಹಿಸಲಾಗಿದೆ. ಈ ಬಗ್ಗೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಟಾಟಾ ಏಸ್ ವಾಹನ ಹಾಗೂ ಚಾಲಕ ಅಂಕಹಳ್ಳಿ ಗ್ರಾಮದ ವೆಂಕಟಸ್ವಾಮಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯುತ್ ಸ್ಪರ್ಶದಿಂದ ಕಾಡಾನೆ ಸಾವು

ಬೇಗೂರು, ಜು.17– ಸಮೀಪದ ಕುರುಬರಹುಂಡಿ ಗ್ರಾಮದಲ್ಲಿ ಅಕ್ರಮವಾಗಿ ಬೆಳೆ ರಕ್ಷಣೆಗೆ ಜಮೀನಿನ ಸುತ್ತ ಹಾಯಿಸಲಾಗಿದ್ದ ವಿದ್ಯುತ್ ಸ್ಪರ್ಶದಿಂದ ಕಾಡಾನೆಯೊಂದು ಮೃತಪಟ್ಟಿರುವ ಘಟನೆ ನಡೆದಿದೆ.



ಬಂಡೀಪುರ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಓಂಕಾರ ಅರಣ್ಯ ವಲಯದ ಕುರಬರಹುಂಡಿ (ಶಿವಕುಮಾರಪುರ) ಗ್ರಾಮದ ಹೊರವಲಯದ ಕಾಡಂಚಿನ ಶಿವರಾಜಪ್ಪ ಎಂಬುವರ ಜಮೀನಿನಲ್ಲಿ ಕಾಡಿನಿಂದ ಆಹಾರ ಅರಸಿ ನಾಡಿನತ್ತ ಬಂದ ಸುಮಾರು 25 ರಿಂದ 30 ವರ್ಷದ ಒಂಟಿಸಲಗ ಸಾವಿಗೀಡಾಗಿದ್ದು, ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಪಶುವೈದ್ಯಾಧಿಕಾರಿ ಡಾ. ವಾಸೀಂ ಮಿರ್ಜಾ ಮೃತ ಆನೆಯ ಮರಣೋತ್ತರ ಪರೀಕ್ಷೆ ನಡೆಸಿ ನಂತರ ಮೃತ ಕಾಡಾನೆಯ ಕಳೇಬರವನ್ನು ಸ್ಥಳದಲ್ಲೇ ಹೂಳಲಾಯಿತು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಿಎಫ್‌ಒ ರಮೇಶ್ ಕುಮಾರ್, ಎ.ಸಿ.ಎಫ್. ರವೀಂದ್ರ, ವಲಯ ಅರಣ್ಯ ಅಧಿಕಾರಿ ಸತೀಶ್, ಬೇಗೂರು ವೃತ್ತ ನಿರೀಕ್ಷಕ ಕಿರಣ್ ಕುಮಾರ್, ಪಿ.ಎಸ್.ಐ ಚರಣ್‌ಗೌಡ ಹಾಜರಿದ್ದರು.

ಮೈಸೂರು ಮಿತ್ರ ಮಂಗಳವಾರ 18 ಜುಲೈ 2023

ರಾಜಕಾರಣದ ಬಗ್ಗೆ ಮಾತನಾಡಲ್ಲ; ಇನ್ನೇನಿದ್ದರೂ ಅಭಿವೃದ್ಧಿ ಮಾತ್ರ

ಮೈಸೂರು: ಸಂಸದ ಪ್ರತಾಪ್‌ಸಿಂಹ ಬಾಯಿ ಬಟ್ಟರೆ ಸಾಕು, ರಾಜಕೀಯ ಎದುರಾಳಿಗಳ ಮೇಲೆ ಹರಿಹಾಯುತ್ತಿದ್ದರು. ಆದರೆ ಇತ್ತೀಚೆಗೆ ರಾಜಕೀಯ ಬೆಳವಣಿಗೆಗಳ ಬಗ್ಗೆ ಪ್ರತಾಪ್ ಸಿಂಹ ತುಟಿ ಬಿಚ್ಚದೆ ಮೌನವಾಗಿದ್ದಾರೆ. ಪ್ರತಾಪ್ ಸಿಂಹ ಅವರ ಈ ನಡೆ ಕುತೂಹಲ ಮೂಡಿಸಿದೆ. ಬೆಂಗಳೂರಿನಲ್ಲಿ ಪ್ರತಿ ಪಕ್ಷಗಳ ಮಹಾಘಟಬಂಧನ್ ಸಭೆಯ ಬಗ್ಗೆ ಪ್ರತಾಪ್ ಸಿಂಹ ಯಾವುದೇ ಪ್ರತಿ ಕ್ರಿಯೆ ನೀಡಬಯಸಲಿಲ್ಲ. ಲೋಕಸಭಾ ಚುನಾವಣೆ ಬಂದಾಗ ಸಾಮಾನ್ಯವಾಗಿ ಇಂತಹ ಸಭೆಗಳು ನಡೆಯುತ್ತವೆ. ಒಂದಾಗುವ ಚರ್ಚೆಗಳು ಕೂಡ ಜರುಗುತ್ತವೆ. ಆದರೆ ನಾನು ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಸೋಮವಾರ ಸ್ಪಷ್ಟಪಡಿಸಿದರು. ನಾನು ಕ್ಷೇತ್ರದ ಅಭಿವೃದ್ಧಿ ಬಗ್ಗೆ ಮಾತ್ರ ಗಮನ ಹರಿಸುತ್ತೇನೆ. ನನಗೆ ಅಭಿವೃದ್ಧಿ ಅಜೆಂಡಾ ಇದೆಯೇ ಹೊರತು, ರಾಜಕೀಯ ಅಜೆಂಡಾ ಇಲ್ಲ. ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾರ್ಯ ಕುಂಠಿತವಾಗಿದೆ. ಈಗ ಅಭಿವೃದ್ಧಿಯ ಬಗ್ಗೆ ಗಮನ ಹರಿಸುತ್ತೇನೆಯೇ ಹೊರತು ಬೇರೆ ವಿಚಾರದ ಬಗ್ಗೆ ಮಾತನಾಡುವುದಿಲ್ಲ ಎಂದರು. ಬಿಜೆಪಿ ಹಾಗೂ ಜೆಡಿಎಸ್ ನಡುವೆ ಮೈತ್ರಿ ಬಗ್ಗೆ ಕೂಡ ತುಟಿ ಬಿಚ್ಚದ ಪ್ರತಾಪ್ ಸಿಂಹ, ನನ್ನ ಎದುರಾಳಿ ಯಾರು ಎಂಬ ಬಗ್ಗೆ ಕೂಡ ನಾನು ಚಿಂತೆ ಮಾಡುವುದಿಲ್ಲ. ಜನರು ನನ್ನ ಗೆಲ್ಲಿಸಿದ್ದಾರೆ. ನಾನು ಕ್ಷೇತ್ರದ ಅಭಿವೃದ್ಧಿ ಮಾಡುತ್ತೇನೆ ಅಷ್ಟೆ ಎಂದು ತಿಳಿಸಿದರು.

ರೇಣುಕಾಚಾರ್ಯ ಸೇರಿದಂತೆ ಇತರರಿಗೆ ಬಿಜೆಪಿ ವರಿಷ್ಠರು ನೋಟಿಸ್ ಜಾರಿ ಮಾಡಿರುವ ಕಾರಣ ಎಚ್ಚೆತ್ತುಕೊಂಡು ನೀವು ಮೌನ ತಾಳಿದ್ದೀರಾ ಎಂಬ ಪ್ರಶ್ನೆಗೆ ಪ್ರತಾಪ್ ಸಿಂಹ, ಇದು ನಿಮ್ಮ ಊಹೆ ಎಂದಷ್ಟೆ ಹೇಳಿದರು.

ಒಂದನೇ ಪುಟದಿಂದ

ಮುಂದಿನ ವರ್ಷಾಂತ್ಯಕ್ಕೆ ಸಂಚಾರಕ್ಕೆ ಮುಕ್ತ



ನಿರ್ಮಾಣಕ್ಕೆ ಭೂ ಸ್ವಾಧೀನಪಡಿಸಿಕೊಂಡಿರುವ ಭೂಮಿ ಯಲ್ಲಿ ರೈತರು ಹೊಸದಾಗಿ ಬೆಳೆ ಬೆಳೆಯುವಂತಿಲ್ಲ. ರೈತರು ಹೊಸ ಬೆಳೆ ಬೆಳೆಯದಂತೆ ತಡೆಯಲು ಹುಣಸೂರು, ಪಿರಿಯಾಪಟ್ಟಣ, ಶ್ರೀರಂಗಪಟ್ಟಣ ತಹಶೀಲ್ದಾರ್‌ಗಳಿಗೆ ಸೂಚನೆ ನೀಡಲಾಗಿದೆ ಎಂದರು. ಪ್ರವೇಶ ಮತ್ತು ನಿರ್ಗಮನ ನಿಯಂತ್ರಿತ ಚತುಷ್ಪಥ ಹೆದ್ದಾರಿ ನಿರ್ಮಾಣ ಕಾಮಗಾರಿ ಯನ್ನು ಸೆಪ್ಟೆಂಬರ್ ಮೊದಲ ವಾರದಲ್ಲಿ ಆರಂಭಿಸಲಾಗುವುದು. 24 ತಿಂಗಳ ಕಾಲ ಮಿತಿಯಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಆದರೂ 2024ರ ಡಿಸೆಂಬರ್ ತಿಂಗಳಲ್ಲೇ ಚತುಷ್ಪಥ ಹೆದ್ದಾರಿ ಪೂರ್ಣಗೊಳಿಸಲಾಗುವುದು. ಇದನ್ನು ನಾನು ಸವಾಲಾಗಿ ಸ್ವೀಕಾರ ಮಾಡಿದ್ದು, ಕಾಲ ಮಿತಿಯಲ್ಲಿ ಪೂರ್ಣಗೊಳಿಸಿಯೇ ತೀರುತ್ತೇನೆ ಎಂದು ಪ್ರತಾಪ್ ಸಿಂಹ ವಾಗ್ದಾನ ಮಾಡಿದರು.

ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗಿಂತಲೂ ಉತ್ತಮವಾಗಿ ಮೈಸೂರು-ಕುಶಾಲನಗರ ಚತುಷ್ಪಥ ಹೆದ್ದಾರಿ ನಿರ್ಮಾಣ ಮಾಡಲಾಗುವುದು. ಹೆದ್ದಾರಿ ನಿರ್ಮಾಣ ಮಾಡುವ ವೇಳೆ ಎದುರಾಗುವ ನೀರಿನ ಪೈಪ್‌ಲೈನ್, ಎಲೆಕ್ಟ್ರಿಕ್ ಲೈನ್ ಸ್ಥಳಾಂತರ ಮಾಡಲು ಈಗಾಗಲೇ ಡಿಸೈನ್ ನೀಡಲಾಗಿದೆ. ಸ್ಥಳಾಂತರಕ್ಕೆ ಸಂಬಂಧಿಸಿದ ಇಲಾಖೆಗಳ ಅನುಮತಿ ಕೂಡ ದೊರೆತಿದೆ. ಸ್ಥಳಾಂತರಕ್ಕೆ ಹಣವನ್ನು ಕೂಡ ನೀಡಲಾಗುತ್ತದೆ. ಈ ತಿಂಗಳ ಅಂತ್ಯಕ್ಕೆ ಈ ಕಾರ್ಯ ಪೂರ್ಣಗೊಳ್ಳಲಿದೆ ಎಂದರು.

ಶ್ರೀರಂಗಪಟ್ಟಣದ ಪಾಲಹಳ್ಳಿ ಬಳಿಯ ಬಿ.ಅಗ್ರಹಾರದಿಂದ ಚತುಷ್ಪಥ ಹೆದ್ದಾರಿ ಆರಂಭಗೊಂಡು ಕುಶಾಲನಗರದ ಗುಡ್ಡೆ ಹೊಸೂರಿನಲ್ಲಿ ಕೊನೆಗೊಳ್ಳಲಿದೆ. ಈ ಹೆದ್ದಾರಿಯಿಂದ ಕೈಗಾರಿಕಾ ಬೆಳವಣಿಗೆ, ಸುಗಮ ವಾಹನ ಸಂಚಾರ ಸೇರಿದಂತೆ ಹಲವು ರೀತಿಯ ಉಪಯೋಗ ಜನಸಾಮಾನ್ಯರಿಗೆ ದೊರೆಯಲಿದೆ. ಹುಣಸೂರು, ಪಿರಿಯಾಪಟ್ಟಣ, ಕೊಡಗು, ಕೇರಳ ಸೇರಿದಂತೆ ಇತರೆ ಸ್ಥಳಗಳಿಗೆ ಹೋಗುವವರಿಗೆ ಈ ಹೆದ್ದಾರಿಯಿಂದ ಬಹಳ ಅನುಕೂಲವಾಗಲಿದೆ. ಈ ಹೆದ್ದಾರಿ ನಿರ್ಮಾಣದಿಂದ ಬಹಳಷ್ಟು ವಾಹನಗಳು ಮೈಸೂರು ನಗರ ಪ್ರವೇಶಿಸುವುದು ತಪ್ಪಲಿದೆ. ಇದರಿಂದ ಸಹಜವಾಗಿಯೇ ಮೈಸೂರಿನಲ್ಲಿ ವಾಹನ ದಟ್ಟಣೆ ಕಡಿಮೆಯಾಗಲಿದೆ. ಮೈಸೂರಿನ ಪಾರಂಪರಿಕತೆ ಸಂರಕ್ಷಣೆಯಾಗಲಿದೆ ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.

ಮೈಸೂರಿನ ನಂಜನಗೂಡು ಕೈಗಾರಿಕಾ ಪ್ರದೇಶ ಅಭಿವೃದ್ಧಿಯಾಗಿದೆ. ಮೈಸೂರು-ಕುಶಾಲನಗರ ಚತುಷ್ಪಥ ಹೆದ್ದಾರಿ ನಿರ್ಮಾಣವಾದರೆ ಹುಣಸೂರು, ಪಿರಿಯಾಪಟ್ಟಣ ಭಾಗದಲ್ಲಿ ಕೈಗಾರಿಕಾ ಬೆಳವಣಿಗೆಯಾಗಿ ಸ್ಥಳೀಯರಿಗೆ ಉದ್ಯೋಗ ದೊರೆಯಲಿದೆ ಎಂದು ಪ್ರತಾಪ್ ಸಿಂಹ ವಿಶ್ವಾಸ ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಪ್ರಾದೇಶಿಕ ಅಧಿಕಾರಿ ವಿವೇಕ್ ಜೈಸ್ವಾಲ್ ಸೇರಿದಂತೆ ಹಲವು ಅಧಿಕಾರಿಗಳು ಈ ಸಭೆಯಲ್ಲಿ ಉಪಸ್ಥಿತರಿದ್ದರು.

ಮೂವರು ತಜ್ಞರ ಸಮಿತಿ ರಚನೆ

ರಚನೆ ಮಾಡಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ರಸ್ತೆ ಸುರಕ್ಷತೆ ವಿಭಾಗದ ಪ್ರಧಾನ ವ್ಯವಸ್ಥಾಪಕ ನಿರ್ದೇಶಕ ಸುನೀಲ್ ಜಿಂದಾಲ್ ತಜ್ಞರ ಸಮಿತಿ ರಚನೆ ಮಾಡಿದ್ದಾರೆ.

ರಸ್ತೆ ಸುರಕ್ಷತಾ ಸಲಹೆಗಾರ ಸುದರ್ಶನ್ ಕೆ. ಪೂಚ್ಚಿ, ರಸ್ತೆ ಸುರಕ್ಷತಾ ಕಚೇರಿಯ ಉಪ ಪ್ರಧಾನ ವ್ಯವಸ್ಥಾಪಕ ನಿರ್ದೇಶಕ ಪ್ರವೀಣ್ ಕುಮಾರ್, ಸೊಹ್ರಾ–ದೌಸಾ ಎಕ್ಸ್‌ಪ್ರೆಸ್ ಯೋಜನೆಯ ಜಾರಿ ಘಟಕದ ವ್ಯವಸ್ಥಾಪಕ ಜೈವರ್ಧನ್ ಸಿಂಗ್ ಒಳಗೊಂಡ ತಜ್ಞರ ಸಮಿತಿಯನ್ನು ಸುನೀಲ್ ಜಿಂದಾಲ್ ರಚನೆ ಮಾಡಿದ್ದಾರೆ.

ಈ ಮೂವರು ತಜ್ಞರ ಸಮಿತಿ ಜುಲೈ 20 ರೊಳಗೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಗೆ ಭೇಟಿ ನೀಡಿ ಹೆದ್ದಾರಿ ಸುರಕ್ಷತೆ ಕುರಿತಂತೆ ಪರಿಶೀಲನೆ ನಡೆಸಿ ಹತ್ತು ದಿನದಲ್ಲಿ ವರದಿ ನೀಡುವಂತೆ ಸೂಚನೆ ನೀಡಿದ್ದಾರೆ. ಎಕ್ಸ್‌ಪ್ರೆಸ್ ಹೈವೆಯಲ್ಲಿ ಹೆಚ್ಚು ಅಪಘಾತಗಳು ಸಂಭವಿಸುವ ಸ್ಥಳಗಳು, ಅಪಘಾತಗಳು ಸಂಭವಿಸಲು ಕಾರಣಗಳು, ಯಾವ ಯಾವ ವಾಹನಗಳು ಅಪಘಾತಕ್ಕೀಡಾಗುತ್ತಿವೆ ಎಂಬುದು ಸೇರಿದಂತೆ ಹಲವು ಮಾಹಿತಿಯನ್ನು ಸಮಿತಿಯು ಸ್ಥಳೀಯ ಅಧಿಕಾರಿಗಳಿಂದ ಸಂಗ್ರಹಿಸಲಿದೆ.

ಜೊತೆಗೆ ಅಪಘಾತ ಸಂಭವಿಸುವ ಸ್ಥಳಗಳಿಗೆ ಕೂಡ ಸಮಿತಿ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಲಿದೆ. ಅಂತಿಮವಾಗಿ ಅಪಘಾತಗಳನ್ನು ತಡೆಗಟ್ಟಲು ಏನೇನು ಸುರಕ್ಷತಾ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆಯೂ ಸಮಿತಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವರದಿ ಸಲ್ಲಿಸಲಿದೆ. ತಜ್ಞರ ಸಮಿತಿ ನೀಡುವ ವರದಿ ಆಧರಿಸಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಯಾವ ರೀತಿಯ ಸುರಕ್ಷತಾ ಕ್ರಮ ಕೈಗೊಳ್ಳಲಿದೆ ಎಂಬುದನ್ನು ಕಾದು ನೋಡಬೇಕಿದೆ. ಅಪಘಾತಗಳು ಸಂಭವಿಸದಿದ್ದರೆ ಅಷ್ಟೇ ಸಾಕು.

ಬೆಂಗಳೂರಲ್ಲಿ ಕಸರತ್ತು

ಸಂಸ್ಥೆಗಳನ್ನು ಅಸ್ತ್ರವಾಗಿ ಬಳಸಿ ಪ್ರತಿಪಕ್ಷಗಳನ್ನು ಹತ್ತಿಕ್ಕುವ ಕೆಲಸ ನಡೆದಿದೆ. ವಿವಿಧ ರಾಜ್ಯಗಳಲ್ಲಿ ಜನರು ನೀಡಿದ ತೀರ್ಪಿಗೆ ವಿರುದ್ಧವಾಗಿ ರಾತ್ರೋರಾತ್ರಿ ವಿಪಕ್ಷಗಳ ಸರ್ಕಾರಗಳನ್ನು ಕೆಳಗಿಳಿಸಿ ಬಿಜೆಪಿ ಮತ್ತು ಬೆಂಬಲಿತ ಸರ್ಕಾರವನ್ನು ಅಧಿಕಾರಕ್ಕೆ ತರಲಾಗುತ್ತಿದೆ. ಇತ್ತೀಚೆಗೆ ನಡೆದ ರಾಹುಲ್ ಗಾಂಧಿ ಅವರ ಅನರ್ಹತೆ, ಮಹಾರಾಷ್ಟ್ರದ ಬೆಳವಣಿಗೆ ಇದಕ್ಕೆ ಸಾಕ್ಷಿ ಎಂದು ಹೇಳಿದರು. ಮಣಿಪುರ ಕಳೆದ 75 ದಿನಗಳಿಂದ ಹೊತ್ತಿ ಉರಿಯುತ್ತಿದೆ. ಆ ಬಗ್ಗೆ ಒಂದೇ ಒಂದು ಪರಿಹಾರ ಇಲ್ಲ. ಈ ಬಗ್ಗೆ ದೇಶದ ಪ್ರಧಾನಮಂತ್ರಿಗಳು ಒಂದೇ ಒಂದು ಮಾತನಾಡಿಲ್ಲ. ಇದು ಆಘಾತಕಾರಿ ಬೆಳವಣಿಗೆ.

ಇನ್ನು ದೇಶದ ಜನರು ನಿರುದ್ಯೋಗ, ಬೆಲೆ ಏರಿಕೆ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ನಾವು ಅಧಿಕಾರ ಪಡೆಯಲು ಸಭೆ ಸೇರುತ್ತಿಲ್ಲ. ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ನಡೆಯುತ್ತಿರುವ ಸಭೆ ಇದಾಗಿದೆ ಎಂದು ತಿಳಿಸಿದರು. ಮೋದಿ ಸರ್ಕಾರ ಜನರಿಗೆ ಸುಳ್ಳು ಭರವಸೆಗಳನ್ನು ನೀಡುತ್ತಿದ್ದು, ಆಡಳಿತದಲ್ಲಿ ಸಂಪೂರ್ಣ ವಿಫಲವಾಗಿದ್ದು, ಸಮಯ ಬಂದಾಗ ಜನರೇ ಅವರಿಗೆ ತಕ್ಕ ಪಾಠ ಕಲಿಸಲಿದ್ದಾರೆ. ಇಂದು 26 ವಿರೋಧ ಪಕ್ಷಗಳು ಒಗ್ಗಟ್ಟಾಗಿ ಕೆಲಸ ಮಾಡಲು ಮುಂದಾಗಿವೆ. ಇದು ವಿರೋಧ ಪಕ್ಷಗಳ ಎರಡನೇ ಸಭೆಯಾಗಿದ್ದು, ಮುಂದಿನ ದಿನಗಳಲ್ಲಿ ಯಾವ ರೀತಿ ಹೋರಾಟ ಮಾಡಬೇಕು ಎಂಬುದರ ಬಗ್ಗೆ ಚರ್ಚೆ ಮಾಡಲಾಗುವುದು. ಜು.20ರಿಂದ ಸಂಸತ್ ಅಧಿವೇಶನ ಆರಂಭವಾಗಲಿದ್ದು, ಅಲ್ಲಿಯೂ ಹೋರಾಟದ ಬಗ್ಗೆ ತಂತ್ರಗಾರಿಕೆ ರೂಪಿಸಲಾಗುವುದು. ಈ ಸಭೆಯು ರಾಷ್ಟ್ರ ರಾಜಕಾರಣದಲ್ಲಿ ಭಾರೀ ಬದಲಾವಣೆ ತರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಪಾಟ್ನಾ ಸಭೆ ನಂತರ ಎಲ್ಲಾ ವಿರೋಧ ಪಕ್ಷಗಳನ್ನು ಏಕಾಂಗಿಯಾಗಿ ಎದುರಿಸಬಲ್ಲೆವು ಎಂದು ಬೀಗುತ್ತಿದ್ದ ಬಿಜೆಪಿಯವರು ಈಗ ಬೇರೆ ಪಕ್ಷಗಳ ಜೊತೆ ಮೈತ್ರಿಗೆ ಮುಂದಾಗಿದ್ದಾರೆ. ಇದು ವಿರೋಧ ಪಕ್ಷಗಳ ಒಗ್ಗಟ್ಟಿನ ಮೊದಲ ಯಶಸ್ಸಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಪಕ್ಷದ ಮತ್ತೊಬ್ಬ ಹಿರಿಯ ನಾಯಕ ಜೈರಾಮ್ ರಮೇಶ್, ಪಾಟ್ನಾ ಸಭೆ ನಂತರ ಅವರಿಗೆ ಎನ್‌ಡಿಎ ಮೈತ್ರಿಕೂಟ ನೆನಪಾಗಿದ್ದು, ನಾಳೆ ಅದರ ಸಭೆ ನಡೆಸುತ್ತಿದ್ದಾರೆ. ಈ ಮೈತ್ರಿಕೂಟಕ್ಕೆ ಜೀವ ತುಂಬುವ ಕೆಲಸ ಮಾಡುತ್ತಿದ್ದಾರೆ. ಎಲ್ಲ ವಿರೋಧ ಪಕ್ಷಗಳ ನಾಯಕರು ಈ ಸಭೆಯಲ್ಲಿ ಸರ್ಕಾರದ ವಿರುದ್ಧ ಸಂಸತ್ ಒಳಗೆ ಹಾಗೂ ಹೊರಗೆ ಹೇಗೆ ಹೋರಾಡಬೇಕು ಎಂದು ಸಭೆ ನಡೆಸಲಿದೆ ಎಂದರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ದೇಶದ ಹಿತಾಸಕ್ತಿ ಕಾಯಲು ವಿರೋಧ ಪಕ್ಷಗಳು ಒಂದುಗೂಡುತ್ತಿರುವುದು ದೇಶದ ಭವಿಷ್ಯವನ್ನು ಹೇಗೆ ರೂಪಿಸಬೇಕು ಎಂಬುದರ ಬಗ್ಗೆ ಚರ್ಚೆ ನಡೆಸಲು ಎಂದರು.

ದೇಶದ 140 ಕೋಟಿ ಜನರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳಿಗೆ ಪರಿಹಾರ ನೀಡಲು ಈ ಸಭೆಯಲ್ಲಿ ಚರ್ಚೆ ಮಾಡಲಾಗುವುದು. ಈ ಒಗ್ಗಟ್ಟನ್ನು ಮುಂದಿನ ದಿನಗಳಲ್ಲಿ ಮುಂದುವರಿಸಿಕೊಂಡು ಕರ್ನಾಟಕ ರಾಜ್ಯದಲ್ಲಿ ಪಡೆದ ಫಲಿತಾಂಶವನ್ನೇ 2024ರ ಚುನಾವಣೆಯಲ್ಲಿ ಪಡೆಯಲು ಕೆಲಸ ಮಾಡಲಾಗುವುದು ಎಂದು ಹೇಳಿದರು.

ಮೈಸೂರಲ್ಲಿ ಕಣ್ಮನ ಸೆಳೆಯುತ್ತಿವೆ ಅರಣ್ಯ ಇಲಾಖೆಯ ವೃಕ್ಷೋದ್ಯಾನ

- ಆಲನಹಳ್ಳಿ, ಲಿಂಗಾಂಬುದಿ ಕೆರೆ ಹಾಗೂ ಮಳಲವಾಡಿಯಲ್ಲಿ ವೃಕ್ಷೋದ್ಯಾನ
- ಬೆಟ್ಟದ ತಪ್ಪಲಿನಲ್ಲಿ ದೈವಿವನ, ಅಲೋಕದಲ್ಲಿ ಬಿದಿರು ವನ ನಿರ್ಮಾಣ



ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಜು.17 – ಸಾಂಸ್ಕೃತಿಕ ನಗರಿ ಮೈಸೂರಿನ ವಾತಾವರಣದ ಸಮತೋಲನ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಮೂರು ವೃಕ್ಷೋದ್ಯಾನ ಹಾಗೂ ಬಿದಿರು ವನ ನಿರ್ಮಿಸಿದ್ದು, ಕಣ್ಮನ ಸೆಳೆಯುವ ವಿವಿಧ ತಳಿಯ ಗಿಡ–ಮರಗಳನ್ನು ಬೆಳೆಸಲಾಗಿದೆ.



ಬೆಂಗಳೂರು ನಂತರ ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರದ ಭವಿಷ್ಯದ ಹಿತದೃಷ್ಟಿಯಿಂದ ಹಾಗೂ ಪರಿಸರ ಸಮತೋಲನ ಕಾಪಾಡಿಕೊಳ್ಳುವುದಕ್ಕಾಗಿ ಅರಣ್ಯ ಇಲಾಖೆ ವಿವಿಧ ಕಾರ್ಯಕ್ರಮ ರೂಪಿಸಲಾಗಿದೆ. ನೆಡುತೋಪು ನಿರ್ಮಾಣ, ವೃಕ್ಷೋದ್ಯಾನ, ಬಿದಿರು ವನ ನಿರ್ಮಾಣಕ್ಕೆ ಕಳೆದ ಮೂರ್ನಾಲ್ಕು ವರ್ಷದ ಹಿಂದೆ ಕೈಗೊಂಡಿದ್ದ ಕ್ರಮ ಇದೀಗ ಫಲಪ್ರದವಾಗಿದೆ ವೃಕ್ಷೋದ್ಯಾನ ನೈಸರ್ಗಿಕವಾಗಿ ಮೈದಳೆಯುತ್ತಿದ್ದು, ಮೈಸೂರಿಗರಿಗೆ ವಾಯುವಿಹಾರಕ್ಕೆ ಹಾಗೂ ಮುಂದಿನ ದಿನಗಳಲ್ಲಿ ಮೈಸೂರಿನ ವಾತಾವರಣ ತಂಪಾಗಿಸಲು ಸಹಕಾರಿಯಾಗಲಿದೆ.

ಆಲನಹಳ್ಳಿ ವೃಕ್ಷೋದ್ಯಾನ: ಮೈಸೂರು ತಾಲೂಕಿನ ಆಲನಹಳ್ಳಿ ಬಳಿ ಚಾಮುಂಡಿ ಬೆಟ್ಟದ ತಪ್ಪಲಿಗೆ ಹೊಂದಿಕೊಂಡಂತೆ 21 ಹೆಕ್ಟೇರ್ ಪ್ರದೇಶದಲ್ಲಿ ನಿರ್ಮಿಸಿರುವ 'ಆಲನಹಳ್ಳಿ ವೃಕ್ಷೋದ್ಯಾನ' ಸ್ಥಳೀಯರು ಮಾತ್ರವಲ್ಲದೆ, ಮೈಸೂರಿಗರು ವಿರಮಿಸಲು ಹಾಗೂ ವಾಯುವಿಹಾರ ಮಾಡಲು ಅತ್ಯುತ್ತಮವಾದ ಉದ್ಯಾನವಾಗಿದೆ. ಇಲ್ಲಿ ಎರಡು ಪರ್ಗೋಲಾ, ವಿರಮಿಸಲು ವಿವಿಧೆಡೆ ಕಲ್ಲಿನ ಕುರ್ಚಿ, ಮಕ್ಕಳು ಆಟ ಆಡಲು ಆಟಿಕೆಗಳು ಹಾಗೂ ವಾಯುವಿಹಾರಿಗಳು ಕಸರತ್ತು ಮಾಡಲು ಜಿಮ್ ಉಪಕರಣಗಳನ್ನು ಅಳವಡಿಸಲಾಗಿದೆ. ಕುಡಿಯುವ ನೀರು ಪೂರೈಕೆಗಾಗಿ ಆರ್‌ಓ ಪ್ಲಾಂಟ್ ನಿರ್ಮಿಸಲಾಗಿದೆ.

ವಾಯುವಿಹಾರಿಗಳಿಗೆ ಅರಣ್ಯ ಪ್ರದೇಶದ ಅನುಭವದೊಂದಿಗೆ ಚಾಮುಂಡಿಬೆಟ್ಟದಿಂದ ಬೀಸುವ ಶುದ್ಧ ಗಾಳಿ, ಹಚ್ಚಹಸಿರಿನ ವಾತಾವರಣ ಮುದಗೊಳಿಸಲಿದೆ. ಈ ವೃಕ್ಷೋದ್ಯಾನವನ್ನು 2020ರ ಜು.28ರಂದು ಅಂದಿನ ಅರಣ್ಯ ಸಚಿವ ಆನಂದ್ ಸಿಂಗ್ ಉದ್ಘಾಟಿಸಿದ್ದರು. ಸುಂದರ ತಾಣವೂ ಆಗಿರುವ ಈ ಉದ್ಯಾನದಲ್ಲಿ ಸಣ್ಣ ಗುಡ್ಡ ಇದೆ. ಸಾಲಾಗಿ ನೆಟ್ಟಿರುವ ಗಿಡ–ಮರಗಳು ಆಗಸದತ್ತ ಮುಖ ಮಾಡುತ್ತಿವೆ. ವಿವಿಧ ಜಾತಿಯ ಹಣ್ಣಿನ ಮರಗಳು, ವಿವಿಧ ಜಾತಿಯ ಪಕ್ಷಿಗಳನ್ನು ವೀಕ್ಷಣೆ ಮಾಡಬಹುದಾಗಿದೆ. ಪ್ಲಾಸ್ಟಿಕ್ ನಿಷೇಧಿತ ವಲಯವಾಗಿ ಈ ಉದ್ಯಾನ ಘೋಷಿಸಲಾಗಿದ್ದು, ಪ್ರತಿದಿನ ಮುಂಜಾನೆ 5.30ರಿಂದ 9 ಗಂಟೆ, ಸಂಜೆ 4ರಿಂದ 6.30ರವರೆಗೆ ವಾಯುವಿಹಾರಿಗಳ ಪ್ರವೇಶಕ್ಕೆ ಅವಕಾಶ ನೀಡಲಾಗಿದೆ.

ಮಳಲವಾಡಿಯಲ್ಲಿ: ಮೈಸೂರಿನ ಕೆ.ಆರ್.ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಜಯನಗರದ ಮಳಲವಾಡಿಯಲ್ಲಿ ಅರಣ್ಯ ಇಲಾಖೆ ವತಿಯಿಂದ ನಿರ್ಮಿಸಿರುವ 'ಸಾಲಮರದ ತಿಮ್ಮಕ್ಕ ವೃಕ್ಷೋದ್ಯಾನ' ಕೂಡ ವಾಯುವಿಹಾರಿಗಳಿಗೆ ಉತ್ತಮವಾದ ವಾತಾವರಣ ಸೃಷ್ಟಿಸಿದೆ. ಜಯನಗರ, ಕೆ.ಜಿ.ಕೊಪ್ಪಲು, ಅಶೋಕಪುರಂ, ಕುವೆಂಪು ನಗರ, ಅರವಿಂದನಗರ ಸೇರಿದಂತೆ ಸುತ್ತಲೂ ಇನ್ನಿತರ ಬಡಾವಣೆಗಳನ್ನು ಹೊಂದಿರುವ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನ ಸುಂದರವಾಗಿದೆ.

ಲಿಂಗಾಂಬುದಿ ಕೆರೆ: ಲಿಂಗಾಂಬುದಿ ಕೆರೆ ಆವರಣದ ವೃಕ್ಷೋದ್ಯಾನ ಕೆರೆ ಏರಿಯಲ್ಲಿ ಹತ್ತಾರು ಎಕರೆ ಪ್ರದೇಶದಲ್ಲಿ ಹರಡಿಕೊಂಡಿದೆ. ಈ ವೃಕ್ಷೋದ್ಯಾನ ಅರಣ್ಯ ಪ್ರದೇಶದ ಅನುಭವ ನೀಡಲಿದೆ. ಈ ಕೆರೆ ಆವರಣದಲ್ಲೂ ಪ್ರತಿದಿನ ನೂರಾರು ವಾಯುವಿಹಾರಿಗಳು ಆಗಮಿಸಿ ನೈಸರ್ಗಿಕ ವಾತಾವರಣ ಸೊಬಗು ಸವಿಯಲಿದ್ದಾರೆ.

ದೈವಿವನ: ಚಾಮುಂಡಿಬೆಟ್ಟ ತಪ್ಪಲಿನಲ್ಲಿ ಅರಣ್ಯ ಇಲಾಖೆ 40 ಎಕರೆ ಜಾಗದಲ್ಲಿ ನಿರ್ಮಿಸಿರುವ ದೈವಿವನ ತನ್ನದೇ ಆದ ವೈಶಿಷ್ಟ್ಯತೆ ಹೊಂದಿದೆ. ಈ ವನದಲ್ಲಿ ಸ್ಮೃತಿವನ, ರಾಶಿ ವನ, ನಕ್ಷತ್ರವನ, ಅಷ್ಟದಿಕ್ಪಾಲಕರ ವನ ಹಾಗೂ ಅಶೋಕ ವನ ಎಂದು ವಿಭಜಿಸಿ ನಿರ್ಮಿಸಲಾಗಿದೆ. ಅದರಲ್ಲೂ ಪರಿಸರ, ಅರಣ್ಯ ಸಂರಕ್ಷಣೆಯಲ್ಲಿ ಸಾರ್ವಜನಿಕರ ಸಹಭಾಗಿತ್ವದ ಜಾಗೃತಿಗಾಗಿ ಈ ದೈವಿವನದಲ್ಲಿ ಸ್ಮೃತಿವನ ನಿರ್ಮಿಸಿದ್ದು, ಜನ್ಮದಿನ, ವಿವಾಹ ವಾರ್ಷಿಕೋತ್ಸವ ಹಾಗೂ ವಿವಿಧ ಸ್ಮರಣಾರ್ಥ ಸಾರ್ವಜನಿಕರು ಅರಣ್ಯ ಇಲಾಖೆಗೆ ಶುಲ್ಕ ಪಾವತಿಸಿ ಗಿಡವೊಂದನ್ನು ನೆಡಬಹುದಾಗಿದೆ. ಅದನ್ನು ಅರಣ್ಯ ಇಲಾಖೆ ಪೋಷಿಸಲಿದೆ. ಈ ಉದ್ಯಾನದಲ್ಲೂ ವಾಯುವಿಹಾರಿಗಳು ಆಗಮಿಸುತ್ತಿದ್ದು, ಆಹ್ಲಾದಕರ ವಾತಾವರಣವನ್ನು ಆಸ್ವಾದಿಸಿ ಸಂಭ್ರಮಿಸುತ್ತಿದ್ದಾರೆ.

ಮೂರು ಕ್ಷೇತ್ರಗಳಲ್ಲಿ ಸ್ಥಳ ಪರಿಶೀಲನೆ

ಅರಣ್ಯ ಸಚಿವ ಈಶ್ವರ್ ಖಂಡ್ರೆ ಸಭೆ ನಡೆಸಿ ಪ್ರತಿ ಕ್ಷೇತ್ರದಲ್ಲೊಂದು ವೃಕ್ಷೋದ್ಯಾನ ನಿರ್ಮಿಸುವಂತೆ ಸೂಚನೆ ನೀಡಿದ್ದಾರೆ. ಮೈಸೂರಲ್ಲಿ ಈಗಾಗಲೇ ಮೂರು ವೃಕ್ಷೋದ್ಯಾನವಿದೆ. ಬಿದಿರು ವನ, ದೈವಿವನವೂ ಇದೆ. ನಂಜನಗೂಡಲ್ಲಿ ವೃಕ್ಷೋದ್ಯಾನ ನಿರ್ಮಾಣ ಕಾರ್ಯ ಸಾಗುತ್ತಿದ್ದು, ಶೇ.50ರಷ್ಟು ಕಾರ್ಯ ಪೂರ್ಣಗೊಂಡಿದೆ. ವರುಣ ಕ್ಷೇತ್ರ, ತಿ.ನರಸೀಪುರ ಹಾಗೂ ಹೆಚ್.ಡಿ.ಕೋಟೆಯಲ್ಲಿ ವೃಕ್ಷೋದ್ಯಾನ ನಿರ್ಮಾಣಕ್ಕೆ ಜಾಗ ಗುರುತಿಸುವ ಪ್ರಕ್ರಿಯೆ ನಡೆಯುತ್ತಿದ್ದು, ಸ್ಥಳ ಅಂತಿಮಗೊಂಡ ಬಳಿಕ ಡಿಪಿಆರ್ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು. ಮೈಸೂರಿನ ವೃಕ್ಷೋದ್ಯಾನದ ಸೌಲಭ್ಯವನ್ನು ನಾಗರಿಕರು ಪಡೆದುಕೊಳ್ಳಬೇಕು. ಉದ್ಯಾನವನದ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಪ್ಲಾಸ್ಟಿಕ್ ವಸ್ತುಗಳ ನಿಷೇಧಿತ ವಲಯವಾಗಿದ್ದು, ಜನ ಸಹಕಾರ ನೀಡಬೇಕು. -**ಬಸವರಾಜು**, ಡಿಸಿಎಫ್



ಉದ್ಯಾನಕ್ಕೆ ವಿಷ್ಣುವರ್ಧನ್ ಹೆಸರು: ವಿಷ್ಣುಸೇನಾ ಸಮಿತಿ ಅಭಿನಂದನೆ



ಮೈಸೂರು,ಜು.17(ಪಿಎಂ)– ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಪಕ್ಕದ ಉದ್ಯಾನವನಕ್ಕೆ ಸಾಹಸ ಸಿಂಹ ಡಾ.ವಿಷ್ಣುವರ್ಧನ್ ಹೆಸರನ್ನು ಇಡಲು ಮಹಾನಗರ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಒಮ್ಮತದಿಂದ ಅಧಿಕೃತಗೊಳಿಸಿದ್ದು, ಇದಕ್ಕಾಗಿ ಪಾಲಿಕೆಯ ಎಲ್ಲಾ ಸದಸ್ಯರಿಗೂ ಅಭಿನಂದಿಸುವುದಾಗಿ ವಿಷ್ಣುಸೇನಾ ಸಮಿತಿ ಅಧ್ಯಕ್ಷ ಎಂ.ಡಿ.ಪಾರ್ಥಸಾರಥಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಉದ್ಯಾನಕ್ಕೆ ವಿಷ್ಣುವರ್ಧನ್ ಅವರ ಹೆಸರು ನಾಮಕರಣ ಮಾಡಿ, ಹೆಸರು ಅಧಿಕೃತಗೊಳಿಸಲು ಪಾಲಿಕೆಗೆ ಮನವಿ ಮಾಡಿದ್ದೆವು. ವಿಷ್ಣುಸೇನಾ ಸಮಿತಿ ಸೇರಿದಂತೆ ಅಭಿಮಾನಿಗಳ ಹೋರಾಟದ ಫಲವಾಗಿ ಇದೀಗ ವಿಷ್ಣುವರ್ಧನ್ ಅವರ ಹೆಸರು ಅಧಿಕೃತಗೊಂಡಿದೆ ಎಂದರು.

ಒಮ್ಮತದ ನಿರ್ಣಯ ಕೈಗೊಂಡ ಮೇಯರ್ ಶಿವಕುಮಾರ್, ಪಟ್ಟಣ ಯೋಜನೆ ಮತ್ತು ಸುಧಾರಣೆ ಸ್ಥಾಯಿ ಸಮಿತಿ ಅಧ್ಯಕ್ಷೆ ಹೆಚ್.ಎಂ.ಶಾಂತಕುಮಾರಿ ಸೇರಿದಂತೆ ಎಲ್ಲಾ ಪಾಲಿಕೆ ಸದಸ್ಯರು, ಶಾಸಕರು ಹಾಗೂ ಸಂಸದರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಬಿಜೆಪಿ ಸೋಲಿಗೆ ವಿಷ್ಣು ಅಭಿಮಾನಿಗಳೂ ಕಾರಣ: ದಿವಂಗತ ಡಾ.ವಿಷ್ಣುವರ್ಧನ್ ಅವರಿಗೆ ಮೈಸೂರು ಅಂದರೆ ಅತ್ಯಂತ ಪ್ರೀತಿ. 224 ಚಿತ್ರಗಳಲ್ಲಿ ನಟಿಸಿದ ಮೇರು ನಟ ವಿಷ್ಣುವರ್ಧನ್ ಅವರ ಸ್ಮಾರಕ ನಿರ್ಮಾಣಕ್ಕೆ ಹೋರಾಟವನ್ನೇ ಮಾಡಬೇಕಾಯಿತು. ಕೊನೆಗೂ ಹಾಲಾಳು ಬಳಿ ಸ್ಮಾರಕವನ್ನು ಇದೇ ಜನವರಿಯಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಆದರೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಅಭಿಮಾನಿಗಳಿಗೆ ಕುಡಿಯುವ ನೀರು, ಊಟದ ವ್ಯವಸ್ಥೆ ಏನೂ ಮಾಡದೇ ಕಾಟಾಚಾರಕ್ಕೆ ಅಂದಿನ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಿ ಹೋದರು ಎಂದು ದೂರಿದರು.

ಅಂದಿನ ಬಿಜೆಪಿ ರಾಜ್ಯ ಸರ್ಕಾರ ಸ್ಮಾರಕ ಉದ್ಘಾಟನೆ ಬಗ್ಗೆ ನಿರಾಸಕ್ತಿ ತೋರಿತು. ಈ ಕಾರಣದಿಂದಲೂ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲುಂಡಿತು. ರಾಜ್ಯದಲ್ಲಿ ವಿಷ್ಣುವರ್ಧನ್ ಅಭಿಮಾನಿಗಳು ಸುಮಾರು ಮೂರೂವರೆ ಕೋಟಿ ಇದ್ದು, ಬಿಜೆಪಿ ಸೋಲಿಗೆ ವಿಷ್ಣುವರ್ಧನ್ ಅಭಿಮಾನಿಗಳೂ ಕಾರಣ ಎಂದುಕೊಂಡಿದ್ದೇನೆ. ಅರ್ಹರಾಗಿದ್ದರೂ 'ಕರ್ನಾಟಕ ರತ್ನ' ಸೇರಿದಂತೆ ಹಲವು ಪ್ರಶಸ್ತಿಗಳನ್ನು ವಿಷ್ಣುವರ್ಧನ್ ಅವರಿಗೆ ಸರ್ಕಾರ ನೀಡಲಿಲ್ಲ. ಈ ಎಲ್ಲಾ ನೋವಿನ ಸಂಗತಿಗಳು ಅಭಿಮಾನಿಗಳಲ್ಲಿ ಇತ್ತು ಎಂದರು.

ಫಿಲ್ಮ್ ಸಿಟಿಗೆ ವಿಷ್ಣು ಹೆಸರಿಡಿ: ವಿಷ್ಣುವರ್ಧನ್ ಅವರ ಉದ್ಯಾನವನದಲ್ಲಿ ಸೆ.18ರಂದು ವಿಷ್ಣುವರ್ಧನ್ ಅವರ ಜನ್ಮದಿನವನ್ನು ಅದ್ಧೂರಿಯಾಗಿ ಆಚರಿಸಲು ಸಮಿತಿ ತೀರ್ಮಾನಿಸಿದೆ ಉದ್ಯಾನವನದ ಉದ್ಘಾಟನೆ ಸಮಾರಂಭವೂ ನಡೆಯಲಿದೆ. ಇಮ್ಮಾವು ಗ್ರಾಮದ ಬಳಿ ನಿರ್ಮಿಸಲುದ್ದೇಶಿಸಿರುವ ಫಿಲ್ಮ್ ಸಿಟಿಗೆ ಡಾ.ವಿಷ್ಣುವರ್ಧನ್ ಹೆಸರು ನಾಮಕರಣ ಮಾಡಬೇಕು ಎಂದು ಆಗ್ರಹಿಸಿದರು.

ವಿಷ್ಣುಸೇನಾ ಸಮಿತಿ ಪದಾಧಿಕಾರಿಗಳಾದ ನಂಜುಮಳಿಗೆ ಪುಟ್ಟಸ್ವಾಮಿ, ರಾಮಕೃಷ್ಣ, ಹರೀಶ್‌ನಾಯ್ಡು, ಸುರೇಶ್ ಗೋಲ್ಡ್, ಬಸವರಾಜು ಗೋಷ್ಠಿಯಲ್ಲಿದ್ದರು.



ಮೈಸೂರು ನಗರ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜೇ ಅರಸ್ ಅವರು ಕೆ.ಹರೀಶ್‌ಗೌಡ ಅವರನ್ನು ಸನ್ಮಾನಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಸಿಂಡಿಕೇಟ್ ಮಾಜಿ ಸದಸ್ಯ ಸಿ.ಎಸ್.ರಘು, ಉಪಾಧ್ಯಕ್ಷ ಪದ್ಮನಾಭನ್, ಲತಾ ರಂಗನಾಥ್, ಜಗದೀಶ್, ಶ್ರೀನಿವಾಸ್ ಯಾದವ್, ಕೆಂಪರಾಜೇ ಅರಸ್, ಲೋಕೇಶ್, ಮಾದೇಶ್ ಇನ್ನಿತರರಿದ್ದರು.

20 ವರ್ಷದಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿ ಸೆರೆ

ಮೈಸೂರು, ಜು. 17(ಆರ್‌ಕೆ)– ಗಂಧದ ಮರದ ತುಂಡುಗಳನ್ನು ಕಳವು ಮಾಡಿದ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಮೈಸೂರಿನ ಕೆ.ಆರ್. ಠಾಣೆ ಪೊಲೀಸರು ಬಂಧಿಸಿದ್ದಾರೆ.



ಕೆ.ಆರ್.ನಗರ ತಾಲೂಕು ಚುಂಚನಕಟ್ಟೆ ಹೋಬಳಿ, ಶ್ರೀರಾಂಪುರ ಗ್ರಾಮದ ಲೇಟ್ ಸಿಪ್ಪಯ್ಯ ಅವರ ಮಗ ದೊರೆಸ್ವಾಮಿ ಬಂಧಿತ ಆರೋಪಿ. ಜುಲೈ 4ರಂದು ಶ್ರೀರಂಗಪಟ್ಟಣ ತಾಲೂಕು ಕರಿಘಟ್ಟ ಗ್ರಾಮದಲ್ಲಿ ಆತನನ್ನು ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಗಂಧದ ಮರದ ತುಂಡುಗಳನ್ನು ಕಳವು ಮಾಡಿದ್ದ ದೊರೆಸ್ವಾಮಿ ವಿರುದ್ಧ ಮೈಸೂರಿನ ಕೆ.ಆರ್.ಠಾಣೆಯಲ್ಲಿ ಕರ್ನಾಟಕ ಅರಣ್ಯ ಕಾಯ್ದೆ ಕಲಂ 86, 87 ಹಾಗೂ ಐಪಿಸಿ ಸೆಕ್ಷನ್ 379 ರೀತ್ಯಾ 2001ರ ಮಾರ್ಚ್ 27ರಂದು ಪ್ರಕರಣ ದಾಖಲು ಮಾಡಲಾಗಿತ್ತು.

ನಂತರ 2003ರಿಂದ ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಆರೋಪಿ ಪತ್ತೆ ಕಾರ್ಯಕ್ಕೆ ಕೆ.ಆರ್.ಠಾಣೆ ಎಎಸ್‌ಐ ಚಂದ್ರನಾಯಕ ಹಾಗೂ ಹೆಡ್ ಕಾನ್ಸ್‌ಟೇಬಲ್ ಹರೀಶ್‌ರನ್ನು ನೇಮಿಸಲಾಗಿತ್ತು ಶ್ರೀರಾಂಪುರ ಗ್ರಾಮಕ್ಕೆ ತೆರಳಿ ವಿಚಾರಿಸಿದಾಗ ದೊರೆಸ್ವಾಮಿ ಕಳೆದ 20 ವರ್ಷಗಳಿಂದ ನಾಪತ್ತೆಯಾಗಿದ್ದಾನೆಂಬುದು ತಿಳಿಯಿತು.

ಶೋಧ ಕಾರ್ಯಾಚರಣೆ ನಡೆಸಿದ ಪೊಲೀಸರು, ಸುಳಿವಿನ ಜಾಡು ಹಿಡಿದು ಕಡೆಗೂ ಕರಿಘಟ್ಟದಲ್ಲಿ ಜುಲೈ 4ರಂದು ಪತ್ತೆ ಮಾಡಿ ಬಂಧಿಸುವಲ್ಲಿ ಯಶಸ್ವಿಯಾದರು. ಡಿಸಿಪಿ ಎಸ್. ಜಾಹ್ನವಿ ಮಾರ್ಗದರ್ಶನದಂತೆ, ಕೆ.ಆರ್. ವಿಭಾಗದ ಎಸಿಪಿ ಗಂಗಾಧರಸ್ವಾಮಿ ನೇತೃತ್ವದಲ್ಲಿ ಕೆ.ಆರ್. ಠಾಣೆ ಇನ್ಸ್‌ಪೆಕ್ಟರ್ ಮಹೇಶ, ಎಎಸ್‌ಐ ಚಂದ್ರನಾಯಕ, ಹೆಡ್ ಕಾನ್ಸ್‌ಟೇಬಲ್ ಹರೀಶ್ ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಈ ಪತ್ತೆ ಕಾರ್ಯವನ್ನು ಪ್ರಶಂಸಿಸಿದ್ದಾರೆ.

ಜು.23, ಮತಗಟ್ಟೆಗಳ ಸುತ್ತ 144 ಸೆಕ್ಷನ್

ಮೈಸೂರು, ಜು.17– ಜು.23ರಂದು ನಡೆಯುವ ಗ್ರಾಮ ಪಂಚಾಯಿತಿ ಉಪ ಚುನಾವಣೆಯ ಮತದಾನದ ಸಂಬಂಧ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಅಥವಾ ಮತಗಟ್ಟೆಯಲ್ಲಿ ಮತದಾನವು ಮುಕ್ತಾಯಗೊಂಡು ಮತಗಟ್ಟೆ ಸಿಬ್ಬಂದಿ ಮತಗಟ್ಟೆಯಿಂದ ತೆರಳುವವರೆಗೆ ನಂಜನಗೂಡು ತಾಲೂಕಿನ ದೇವನೂರು ಹಾಗೂ ದೇವರಾಯಶೆಟ್ಟಿ, ನರಸೀಪುರ ತಾಲೂಕಿನ ಹೆಮ್ಮಿಗೆ, ಹುಣಸೂರು ತಾಲೂಕಿನ ಜಾಬಗೆರೆ, ತಟ್ಟೆಕೆರೆ, ಕಡೆಮನುಗನಹಳ್ಳಿ, ಕೃಷ್ಣರಾಜನಗರ ತಾಲೂಕಿನ ಹಂಪಾಪುರ, ಹೆಚ್.ಡಿ.ಕೋಟೆ ತಾಲೂಕಿನ ಮಾದಾಪುರ, ಎನ್‌ಬೇಗೂರು ಗ್ರಾಪಂ ವ್ಯಾಪ್ತಿಗಳಲ್ಲಿ ಮತದಾನ ನಡೆಯುವ ಎಲ್ಲಾ ಮತಗಟ್ಟೆಗಳ ಸುತ್ತ 200 ಮೀಟರ್ ವ್ಯಾಪ್ತಿ ಪ್ರದೇಶವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿ, ಷರತ್ತುಗಳನ್ನು ವಿಧಿಸಲಾಗಿದೆ.

ಮದ್ಯ ಮಾರಾಟ ನಿಷೇಧ: ಜು.23ರಂದು ನಡೆಯುವ ಗ್ರಾಮ ಪಂಚಾಯಿತಿ ಉಪ ಚುನಾವಣೆಯ ಮತದಾನದ ಸಂಬಂಧ ಜು.22ರ ಮಧ್ಯರಾತ್ರಿ 12 ಗಂಟೆಯಿಂದ ಜು.23ರ ಮಧ್ಯರಾತ್ರಿ 12ರವರೆಗೆ ಎಲ್ಲಾ ವಿಧದ ಮದ್ಯ ತಯಾರಿಕೆ, ಮಾರಾಟ, ಶೇಖರಣೆ ಹಾಗೂ ಅನಧಿಕೃತ ಸಾಗಾಣಿಕೆಯನ್ನು ನಿಷೇಧಿಸಿ ಡಿಸಿ ಆದೇಶಿಸಿದ್ದಾರೆ.

ಬಹುತೇಕ ಭಾರತೀಯ ಭಾಷೆಗಳಲ್ಲಿ ಇಂಗ್ಲಿಷ್ ಪದಗಳ ಬಳಕೆ ಹೆಚ್ಚಾಗಿದೆ

ಸಿಐಐಎಲ್ ಸಂಸ್ಥಾಪನಾ ದಿನಾಚರಣೆಯಲ್ಲಿ ಭಾರತೀಯ ಭಾಷೆಗಳ ಪ್ರಚಾರದ ಉನ್ನತ ಅಧಿಕಾರ ಸಮಿತಿ ಅಧ್ಯಕ್ಷ ಚಾಮುಕೃಷ್ಣಶಾಸ್ತ್ರಿ ಅಭಿಮತ

ಮೈಸೂರು, ಜು. 17(ಆರ್‌ಕೆ)– ಭಾರತೀಯ ಭಾಷೆಗಳಲ್ಲಿ ಇಂಗ್ಲಿಷ್ ಪದಗಳ ಬಳಕೆ ಹೆಚ್ಚಾಗುತ್ತಿದೆ ಎಂದು ಭಾರತೀಯ ಭಾಷೆಗಳ ಪ್ರಚಾರದ ಉನ್ನತ ಅಧಿಕಾರ ಸಮಿತಿ ಅಧ್ಯಕ್ಷ ಚಾಮು ಕೃಷ್ಣಶಾಸ್ತ್ರಿ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಭಾರತೀಯ ಭಾಷೆಗಳ ಕೇಂದ್ರ ಸ್ಥಾನ (ಸಿಐಐಎಲ್)ದಲ್ಲಿ ಆಯೋಜಿಸಿದ್ದ ಸಂಸ್ಥೆಯ 55ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಇತ್ತೀಚೆಗೆ ಭಾರತೀಯ ಭಾಷೆಗಳಲ್ಲಿ ಆಂಗ್ಲ ಶಬ್ದಗಳ ಬಳಕೆ ಹೆಚ್ಚಾಗತೊಡಗಿದ್ದು, ಅದನ್ನು ಕಡಿಮೆ ಮಾಡಲು ಎಲ್ಲಾ ಭಾರತೀಯ ಭಾಷೆಗಳನ್ನೊಳಗೊಂಡ ಸಮಾನ ಶಬ್ದಕೋಶ ರೂಪಿಸುವುದು ಒಳಿತು ಎಂದರು.

ಇಂಜಿನಿಯರಿಂಗ್, ಮೆಡಿಕಲ್, ಡಿಪ್ಲೊಮಾ ಕೋರ್ಸುಗಳನ್ನೂ ಭಾರತೀಯ ಭಾಷೆಗಳಲ್ಲೇ ನೀಡುವಂತಾಗಬೇಕು. ಸಿಐಐಎಲ್ ಇಂತಹ ಚಟುವಟಿಕೆಗಳ ಮುಂಚೂಣಿಯಲ್ಲಿ ನಿಲ್ಲಬೇಕು. ಬ್ರಿಟಿಷರು ನಮ್ಮನ್ನು ಆಳುವ ಮುಂಚೆ ದೇಶದಲ್ಲಿ ಭಾಷಾ ವಿವಾದವೇ ಇರಲಿಲ್ಲ. ಭಾಷೆ ಎಲ್ಲರನ್ನೂ ಒಗ್ಗೂಡಿಸುವ ಸಾಧನವಾಗಿದೆ ಎಂದು ಅವರು ತಿಳಿಸಿದರು.

ಇದೀಗ ಭಾರತೀಯ ಭಾಷೆಗಳ ನಡುವೆ ಅನುವಾದಗಳೇ ಆಗುತ್ತಿಲ್ಲ. ಮೊದಲು ಇಂಗ್ಲಿಷಿಗೆ ಹೋಗಿ ನಂತರವಷ್ಟೇ ಇನ್ನೊಂದು ಭಾಷೆಗೆ ತರ್ಜುಮೆಯಾಗಬೇಕಿದೆ. ಮುಂದಿನ ಐದತ್ತು ವರ್ಷಗಳ ಅಗತ್ಯತೆಗನುಗುಣವಾಗಿ ಸಿಐಐಎಲ್ ಕಾರ್ಯಕ್ರಮ ರೂಪಿಸುವ ಅಗತ್ಯವಿದೆ ಎಂದ ಚಾಮುಕೃಷ್ಣಶಾಸ್ತ್ರಿ, ಕಳೆದ ಎರಡು ವರ್ಷಗಳಲ್ಲಿ ದೇಶಾದ್ಯಂತ 2.65 ಕೋಟಿ ವಿದ್ಯಾರ್ಥಿಗಳು ಮಾತೃಭಾಷಾ ಶಿಕ್ಷಣದಿಂದ ಇಂಗ್ಲಿಷ್ ಶಿಕ್ಷಣಕ್ಕೆ ಬದಲಾಗಿದ್ದಾರೆ ಎಂದರು.

ತಮಿಳುನಾಡಿನಲ್ಲಿ 2011ರಲ್ಲಿ ಶೇ. 74ರಷ್ಟು ವಿದ್ಯಾರ್ಥಿಗಳು ಮಾತೃ ಭಾಷೆಯಲ್ಲೇ ಶಿಕ್ಷಣ ಪಡೆಯುತ್ತಿದ್ದರು. 2021ಕ್ಕೆ ಆ ಪ್ರಮಾಣ ಶೇ. 54ಕ್ಕೆ ಇಳಿದಿದೆ. ಮುಂದೆ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯಲ್ಲಿ ಮಾತನಾಡಿದರೂ, ಅದನ್ನು ಓದುವ, ಬರೆಯುವ ಸಾಮರ್ಥ್ಯವಿರುವುದಿಲ್ಲ. ದೇಶದ 1 ಕೋಟಿ ಶಿಕ್ಷಕರ ಪೈಕಿ ಶೇ.40ರಷ್ಟು ಭಾಷಾ ಶಿಕ್ಷಕರಿದ್ದಾರೆ. ಅವರು ಮತ್ತೊಂದು ಭಾಷೆ ಕಲಿಕೆಗೂ ಆಸಕ್ತಿ ತೋರುವುದು ಸೂಕ್ತ ಎಂದು ಅವರು ಇದೇ ಸಂದರ್ಭ ನುಡಿದರು.

ಸಿಐಐಎಲ್ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕ ಡಾ. ನಾರಾಯಣಕುಮಾರ್ ಚೌಧರಿ, ಎಲ್‌ಜೆಆರ್‌ಓ ಡಾ. ಸುಜೋಯ್ ಸರ್ಕಾರ ಅವರು ಭಾಗವಹಿಸಿದ್ದರು.

ಮರಟಿಕ್ಯಾತನಹಳ್ಳಿಯಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದ ಉದ್ಘಾಟನೆ



ಮೈಸೂರು, ಜು. 17– ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಎನ್‌ಎಸ್‌ಎಸ್ ಘಟಕಗಳ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನೆ ಬೋಗಾದಿ ಸಮೀಪದ ಮರಟಿಕ್ಯಾತನಹಳ್ಳಿಯಲ್ಲಿ ನೆರವೇರಿತು.

ವಾರ್ಷಿಕ ವಿಶೇಷ ಶಿಬಿರವನ್ನು ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್ ಉದ್ಘಾಟಿಸಿ ಮಾತನಾಡುತ್ತಾ, ಯುವಜನತೆ ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು. ಹಳ್ಳಿಯವರ ಜೀವನ ವಿಧಾನ, ಆಹಾರ ಶೈಲಿ ಮತ್ತು ಅವರ ಬದುಕಿನ ಮೌಲ್ಯಗಳನ್ನು ಅರಿತುಕೊಳ್ಳುವ ಮೂಲಕ ಗ್ರಾಮ ಜೀವನದ ವೈವಿಧ್ಯತೆಯನ್ನು ತಿಳಿದುಕೊಳ್ಳಬಹುದು ಎಂದರು.

ಶಿಬಿರದ ವಿಶೇಷ ಆಹ್ವಾನಿತರಾಗಿ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷೆ ನೇತ್ರಾವತಿ, ವೆಂಕಟೇಶ್, ಅನಿಲ್‌ಕುಮಾರ್, ಮಹದೇವಣ್ಣ, ಶಾಲೆಯ ಹಿರಿಯ ವಿದ್ಯಾರ್ಥಿ ಮಹೇಶ್, ಕೃಷ್ಣ ಮತ್ತಿತರರು ಹಾಜರಿದ್ದರು.

ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಗಳಾದ ಡಾ ಜಿ.ಆರ್.ಲಕ್ಷ್ಮಿ, ಡಾ. ಬಿ.ಸವಿತಾ, ಎಂ.ವಿಶ್ವನಾಥನ್, ಡಾ.ಚಂದ್ರಕುಮಾರ್ ಮತ್ತು ಸಹ ಶಿಬಿರ ಅಧಿಕಾರಿಗಳಾದ ಎಂ.ನಂಜುಂಡಯ್ಯ, ಪಿ.ಎಸ್. ರಘು ಮತ್ತು ಸಂಯೋಜಕರಾದ ಡಾ. ಬಿ.ಪಿ.ಅಶ್ವಿನಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಯೇಸುದಾಸ್ ಹಾಗೂ ಪ್ರೊ ಮಹದೇವಯ್ಯ ಮತ್ತು ಊರಿನ ಯಜಮಾನರುಗಳು, ಯುವ ಮುಖಂಡರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲರು ಮತ್ತು ಶಿಬಿರದ ನಿರ್ದೇಶಕರಾದ ಡಾ. ಬಿ.ವಿ ವಸಂತಕುಮಾರ್ ವಹಿಸಿದ್ದರು.



ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ಆಷಾಢ ಮಾಸದ ಕೊನೆಯ ಶುಕ್ರವಾರದ ಪ್ರಯುಕ್ತ ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವವನ್ನು ಸಂಘದ ಕಚೇರಿಯಲ್ಲಿ ಆಚರಿಸಲಾಯಿತು. ಶ್ರೀ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿ, ನಂತರ ಸಾರ್ವಜನಿಕರಿಗೆ ಪ್ರಸಾದವನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ಸಂಸ್ಥಾಪಕ ಅಧ್ಯಕ್ಷ ಎನ್.ಬೆಟ್ಟೇಗೌಡ, ಉಪಾಧ್ಯಕ್ಷರಾದ ಲಕ್ಷ್ಮಿದೇವಿ ಮತ್ತಿತರರು ಹಾಜರಿದ್ದರು.

ಪಂ.ಪುಟ್ಟರಾಜ ಸಾಹಿತ್ಯ ಪುರಸ್ಕಾರಕ್ಕೆ ಪುಸ್ತಕ ಆಹ್ವಾನ



ಮೈಸೂರು, ಜು. 17–ಡಾ. ಪಂಡಿತ್ ಪುಟ್ಟರಾಜ ಸೇವಾ ಸಮಿತಿಯು 'ತ್ರಿಭಾಷಾ ಕವಿ' ಗುರು ಪುಟ್ಟರಾಜರ ಸಾಹಿತ್ಯ ಸೇವೆಯನ್ನು ಸ್ಮರಿಸಿಕೊಳ್ಳುವ ಉದ್ದೇಶದಿಂದ, ಕಳೆದ 23 ವರ್ಷಗಳಿಂದಲೂ ಪಂ.ಪುಟ್ಟರಾಜ ಸಾಹಿತ್ಯ ಪುರಸ್ಕಾರ ರಾಜ್ಯ ಪ್ರಶಸ್ತಿ ನೀಡುತ್ತಾ ಬಂದಿದೆ.

ಅದರಂತೆ ಈ ವರ್ಷವೂ ಪ್ರಶಸ್ತಿಗಾಗಿ 2021–22 ಮತ್ತು 2022–23ನೇ ಸಾಲಿನಲ್ಲಿ ಪ್ರಕಟವಾದ, ಕನ್ನಡ, ಹಿಂದಿ ಮತ್ತು ಸಂಸ್ಕೃತ ಭಾಷೆಯ ಸಾಹಿತ್ಯದ ಎಲ್ಲಾ ಪ್ರಕಾರಗಳ ಕೃತಿಗಳನ್ನು ಆಹ್ವಾನಿಸಲಾಗಿದೆ. ಆದರೆ, ಈ ಪ್ರಶಸ್ತಿಗೆ ಕನ್ನಡದ ಕೃತಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು. ಹಿಂದಿ ಮತ್ತು ಸಂಸ್ಕೃತ ಕೃತಿಗಳಲ್ಲಿ ಉತ್ತಮ ಕೃತಿ ಆಯ್ಕೆ ಮಾಡಿ ಉತ್ತಮ ಕೃತಿ ಕರ್ತರಿಗೆ ಪುಟ್ಟರಾಜ ಸಾಹಿತ್ಯ ಸಮ್ಮಾನ ನೀಡಲಾಗುವುದು.

ಪಂ. ಪುಟ್ಟರಾಜ ಸಾಹಿತ್ಯ ಪುರಸ್ಕಾರ ರಾಜ್ಯ ಪ್ರಶಸ್ತಿಯು 5,000 ರೂ. ನಗದು, ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಪ್ರಶಸ್ತಿಗೆ ಆಯ್ಕೆಯಾದ ಕೃತಿಕರ್ತರಿಗೆ ಅ.1ರಂದು ಬೆಳಗಾವಿಯಲ್ಲಿ ನಡೆಯುವ ಡಾ.ಪಂ.ಪುಟ್ಟರಾಜ ಸಾಹಿತ್ಯೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸೇವಾ ಸಮಿತಿಯ ರಾಜ್ಯ ಕಾರ್ಯದರ್ಶಿ ಪ್ರೊ.ಮಂಜುಶ್ರೀ ಬ. ಹಾವಣ್ಣವರ ಬೆಳಗಾವಿ ಇವರು ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಪ್ರಶಸ್ತಿಗೆ ಸಮೀಪದ ಪ್ರತಿಸ್ಪರ್ಧಿಯಾದ ವಿವಿಧ ಪ್ರಕಾರದ 10 ಕೃತಿಗಳನ್ನು ಗುರುತಿಸಿ ವರ್ಷದ ಶ್ರೇಷ್ಠ ಕೃತಿ ಸಮ್ಮಾನ ನೀಡಿ ಗೌರವಿಸಲಾಗುವುದು.

ಆಸಕ್ತ ಲೇಖಕರು ತಮ್ಮ 3 ಕೃತಿಗಳೊಂದಿಗೆ ಪರಿಚಯ ಪತ್ರ, ಒಂದು ಭಾವಚಿತ್ರ ಮರು ಉತ್ತರಕ್ಕಾಗಿ ಅಗತ್ಯ ಅಂಚೆ ಚೀಟಿ ಅಂಟಿಸಿದ ಲಕೋಟೆ ಸಹಿತ ಆಗಸ್ಟ್ 15 ರ ಒಳಗಾಗಿ ತಲುಪುವಂತೆ ಕಳುಹಿಸಿಕೊಡಲು ಕೋರಲಾಗಿದೆ. ಪುಸ್ತಕಗಳನ್ನು ಕಳುಹಿಸಿಕೊಡುವ ವಿಳಾಸ: ಅಧ್ಯಕ್ಷರು ಪಂ. ಪುಟ್ಟರಾಜ ಸಾಹಿತ್ಯ ಪುರಸ್ಕಾರ ಪ್ರಶಸ್ತಿ ಆಯ್ಕೆ ಸಮಿತಿ , ಡಾ. ಪಂ. ಪುಟ್ಟರಾಜ ಸೇವಾ ಸಮಿತಿ (ರಿ) 'ಗಿರಿಜಾ ನಿವಾಸ' ಪಂಚಾಕ್ಷರಿ ನಗರ 3ನೇ ಅಡ್ಡ ರಸ್ತೆ ಗದಗ–582101.

ವಿಷ್ಣು ಸಹಸ್ರನಾಮ ಮಹತ್ವ ಕುರಿತ ಪುಸ್ತಕ ಲೋಕಾರ್ಪಣೆ



ಮೈಸೂರು, ಜು. 17–ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಷನ್ ಹಾಗೂ ಶ್ರೀ ಶಂಕರ ಮಠ ಸಂಯುಕ್ತಾಶ್ರಯದಲ್ಲಿ ಅಗ್ರಹಾರದಲ್ಲಿರುವ ವಿದ್ಯಾಭಾರತಿ ಕಲ್ಯಾಣ ಮಂಟಪ ಸಭಾಂಗಣದಲ್ಲಿ ವಿದ್ಯಾವಾಚಸ್ಪತಿ ಡಾ. ಅರಳುಮಲ್ಲಿಗೆ ಪಾರ್ಥಸಾರಥಿಯವರ ಭಾಗವತ ಗ್ರಂಥ ಮತ್ತು ರಮಾಕಾಂತ ಶೆಣೈಯವರ ವಿಷ್ಣುಸಹಸ್ರ ನಾಮ ಮಹತ್ವ (ನಾಲ್ಕನೇ ಪರಿಷ್ಕೃತ ಆವೃತ್ತಿ) ಪುಸ್ತಕವನ್ನು ವಿದ್ಯಾವಾಚಸ್ಪತಿ ಡಾ.ಅರಳುಮಲ್ಲಿಗೆ ಪಾರ್ಥಸಾರಥಿ ಬಿಡುಗಡೆಗೊಳಿಸಿದರು

ಇದೇ ಸಂದರ್ಭದಲ್ಲಿ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ ಹಾಗೂ ಸತ್ಸಂಗ ಕಾರ್ಯಕ್ರಮ ನಡೆಯಿತು. ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಅ.ವಿ. ಹೆಗಡೆ, ಡಾ॥ ದೀಪಿಕಾ ಪಾಂಡುರಂಗಿ, ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಷನ್ ಅಧ್ಯಕ್ಷ ಕ್ಯಾಪ್ಟನ್ ಮಣಿ, ಮಂಗಳಾ ಭಾಸ್ಕರ್, ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಷನ್, ಮೈಸೂರು ವಿಭಾಗ ಅಧ್ಯಕ್ಷ ರಮಾಕಾಂತ ಶೆಣೈ, ಯಶು ಪ್ರಸಾದ್, ಹರೀಶ್, ಸುಚೀಂದ್ರ, ಚಕ್ರಪಾಣಿ, ಲತಾ ಬಾಲಕೃಷ್ಣ ಹಾಗೂ ಪದಾಧಿಕಾರಿಗಳು ಹಾಜರಿದ್ದರು.



ಕೃಷ್ಣರಾಜಪೇಟೆ ತಾಲೂಕಿನ ಬಲ್ಲೇನಹಳ್ಳಿಯ ವಿದ್ಯುತ್ ಗುತ್ತಿಗೆದಾರ ಬಿ.ಎಸ್. ರಾಮು ಅವರು ತಮ್ಮ ಹುಟ್ಟುಹಬ್ಬವನ್ನು ಬಲ್ಲೇನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಸಮವಸ್ತ್ರ ಮತ್ತು ಶುಲ್ಕ ನೀಡುವ ಮೂಲಕ ವಿನೂತನ ರೀತಿಯಲ್ಲಿ ಆಚರಿಸಿಕೊಂಡರು. ಈ ವೇಳೆ ಕಾಲೇಜಿನ ಪ್ರಾಂಶುಪಾಲ ಲಯನ್ ಸಿ.ಆರ್.ದಿನೇಶ್, ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಬಿ.ಎಂ. ಕುಮಾರ್, ಡಿ.ಆರ್ ರಮೇಶ್, ಉಪನ್ಯಾಸಕರಾದ ಹೆಚ್.ಎನ್.ರಂಗರಾಜು, ಜೆ.ಜಿ.ರಾಜೇಗೌಡ, ಬೃಂದ , ಆರ್.ವೀಣಾ, ಶ್ರುತಿ, ಶ್ರೀಕಾಂತ ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ: ಹರಕೆ ತೀರಿಸಿದ ಅನಿವಾಸಿ ಅಭಿಮಾನಿ

ಸಿದ್ದರಾಮಯ್ಯನಹುಂಡಿ ಸಿದ್ದರಾಮೇಶ್ವರನಿಗೆ ಚಿನ್ನಲೇಪಿತ ಬೆಳ್ಳಿ ನಾಗಾಭರಣ ಸಮರ್ಪಣೆ



ಮೈಸೂರು, ಜು.17(ಎಸ್‌ಬಿಡಿ)– ಸಿದ್ದರಾಮಯ್ಯನವರು ಮತ್ತೆ ಮುಖ್ಯಮಂತ್ರಿಯಾಗಲೆಂದು ಮನೆ ದೇವರಲ್ಲಿ ಸಂಕಲ್ಪ ಮಾಡಿಕೊಂಡಿದ್ದ ಅನಿವಾಸಿ ಭಾರತೀಯ ಅಭಿಮಾನಿಯೊಬ್ಬರು, ತಮ್ಮ ಕೋರಿಕೆ ಈಡೇರಿದ ಹಿನ್ನೆಲೆಯಲ್ಲಿ ದೇವರಿಗೆ ಹರಕೆ ತೀರಿಸಿದ್ದಾರೆ.

ಮೈಸೂರು ತಾಲೂಕಿನ ದೇವೇಗೌಡನಹುಂಡಿ ನಿವಾಸಿ ಮಹಾದೇವ ಅವರ ಪುತ್ರ ರವಿ, ಸಿದ್ದರಾಮನಹುಂಡಿ ಗ್ರಾಮದ ಸಿದ್ದರಾಮೇಶ್ವರ ದೇವಾಲಯಕ್ಕೆ ಚಿನ್ನಲೇಪಿತ ಬೆಳ್ಳಿಯ ನಾಗಾಭರಣವನ್ನು ಸಮರ್ಪಿಸಿದರು. ಚುನಾವಣೆ ಸಂದರ್ಭದಲ್ಲಿ ಸಿದ್ದರಾಮಯ್ಯನವರು ಗೆಲುವು ಸಾಧಿಸಿ, ಮತ್ತೆ ಮುಖ್ಯಮಂತ್ರಿಯಾಗಲೆಂದು ತಮ್ಮ ಮನೆ ದೇವರು ಸಿದ್ದರಾಮೇಶ್ವರ ದೇವರಲ್ಲಿ ಹರಕೆ ಹೊತ್ತಿದ್ದರು. ತಮ್ಮ ಸಂಕಲ್ಪ ಈಡೇರಿರುವ ಹಿನ್ನೆಲೆಯಲ್ಲಿ ಕುಟುಂಬ ಸಮೇತ ಸೌದಿ ಅರೇಬಿಯಾದಿಂದ ಆಗಮಿಸಿರುವ ರವಿ ಅವರು ಸೋಮವಾರ ಬೆಳಗ್ಗೆ ಸಿದ್ದರಾಮೇಶ್ವರ ದೇವರಿಗೆ ಅಭಿಷೇಕ ಸಹಿತ ವಿಶೇಷ ಪೂಜೆ ಸಲ್ಲಿಸಿ, ನಾಗಾಭರಣ ಸಮರ್ಪಿಸಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಹೋದರ ಸಿದ್ದೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯನವರ ಅಭಿಮಾನಿಯಾಗಿರುವ ರವಿ, ಸೌದಿ ಅರೇಬಿಯಾದಲ್ಲಿ ಆಯಿಲ್ ಅಂಡ್ ಗ್ಯಾಸ್ ಏಜೆನ್ಸಿ ಕಂಪನಿಯಲ್ಲಿ ರಿಗ್ ಮೆಡಿಕ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. 'ಸಾಗರೋತ್ತರ ಕನ್ನಡಿಗರು' ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿಯಾಗಿದ್ದು, ಅನಿವಾಸಿ ಭಾರತೀಯರಿಗೆ ಚುನಾವಣೆಗಳಲ್ಲಿ ಪೋಸ್ಟಲ್ ಬ್ಯಾಲೆಟ್ ವ್ಯವಸ್ಥೆ ಕಲ್ಪಿಸಬೇಕೆಂದು ಕರ್ನಾಟಕ ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಸಿ, ಚುನಾವಣಾ ಆಯೋಗಕ್ಕೂ ಮನವಿ ಮಾಡಿದ್ದರು.

'ನಾನು ಸಿದ್ದರಾಮಯ್ಯನವರ ಅಭಿಮಾನಿ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮೂರು ವಾರ ರಜೆ ಹಾಕಿ ಬಂದು ವರುಣ ಕ್ಷೇತ್ರದಲ್ಲಿ ಪ್ರಚಾರದಲ್ಲಿ ಭಾಗಿಯಾಗಿದ್ದೆ. 5 ದಿನ ರಜೆ ವಿಸ್ತರಣೆ ಮಾಡಿಕೊಂಡು ಮತ ಚಲಾಯಿಸಿ, ಸೌದಿ ಅರೇಬಿಯಾಗೆ ವಾಪಸ್ಸಾಗಿದ್ದೆ. ಆ ವೇಳೆ ಸಿದ್ದರಾಮಯ್ಯನವರು ಗೆಲುವು ಸಾಧಿಸಿ, ಮತ್ತೆ ಮುಖ್ಯಮಂತ್ರಿಯಾಗಲೆಂದು ದೇವರಲ್ಲಿ ಹರಕೆ ಮಾಡಿಕೊಂಡಿದ್ದೆ. ಅದರಂತೆ ಪತ್ನಿ ಶಿಲ್ಪಾ ಹಾಗೂ ಮೈಸೂರಿನ ಸ್ನೇಹಿತರು, ಸಿದ್ದರಾಮನಹುಂಡಿ ಗ್ರಾಮಸ್ಥರೊಂದಿಗೆ ಸಿದ್ದರಾಮೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿ, ನಾಗಾಭರಣ ಅರ್ಪಿಸಿದೆವು ಎಂದು ರವಿ, 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ತುಮಕೂರಿನಲ್ಲೂ ಐಫೋನ್ ಘಟಕ ಸ್ಥಾಪನೆ ಪ್ರಸ್ತಾಪ

ಮುಖ್ಯಮಂತ್ರಿ ಸಿದ್ದರಾಮಯ್ಯರೊಂದಿಗೆ ಫಾಕ್ಸ್ ಕಾನ್ ಕಂಪನಿ ಸಿಇಓ ಬ್ರ್ಯಾಂಡ್ ಚೆಂಗ್ ಸಭೆ



ಬೆಂಗಳೂರು, ಜು.17 (ಕೆಎಂಶಿ)– ದೇವನಹಳ್ಳಿಯ ಐಟಿಐಆರ್ ವಲಯದಲ್ಲಿ ಫಾಕ್ಸ್ ಕಾನ್ ಕಂಪನಿಯು ಸ್ಥಾಪಿಸಲು ಉದ್ದೇಶಿಸಿರುವ ಐಫೋನ್ ತಯಾರಿಕಾ ಘಟಕಕ್ಕೆ ಪೂರಕವಾಗಿ ತುಮಕೂರಿನಲ್ಲಿ ಮತ್ತೊಂದು ಘಟಕ ಸ್ಥಾಪಿಸುವ ಪ್ರಸ್ತಾವನೆ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಕಂಪನಿಯ ಸಿಇಓ ಬ್ರ್ಯಾಂಡ್ ಚೆಂಗ್ ನೇತೃತ್ವದ ಎಫ್‌ಐಐ ನಿಯೋಗದ ಜೊತೆ ಉನ್ನತ ಮಟ್ಟದ ಸಭೆ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕರ್ನಾಟಕದಲ್ಲಿ ಕೈಗಾರಿಕಾ ಬೆಳವಣಿಗೆಗೆ ಅನುಕೂಲವಾಗುವಂತಹ ಉತ್ತಮ ಪರಿಸರ ಇದೆ. ಶೈಕ್ಷಣಿಕ ಹಾಗೂ ಉದ್ಯಮ ವಲಯದ ನಡುವೆ ನಿರಂತರ ಸಂಪರ್ಕ ಮತ್ತು ಸಮನ್ವಯತೆ ಇದೆ. ಜೊತೆಗೆ ಕೌಶಲ್ಯಯುಕ್ತ ಸಿಬ್ಬಂದಿಯೂ ಲಭ್ಯವಿದ್ದಾರೆ ಎಂದು ವಿವರಿಸಿದರು. ಫಾಕ್ಸ್ ಕಾನ್ ಸಂಸ್ಥೆಯು ತನ್ನ ಉದ್ಯಮ ಸ್ಥಾಪಿಸಲು ರಾಜ್ಯ ಸರ್ಕಾರವು ಎಲ್ಲ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಫಾಕ್ಸ್ ಕಾನ್ ಕಂಪನಿಯ ಅಂಗಸಂಸ್ಥೆ ಫಾಕ್ಸ್ ಕಾನ್ ಇಂಡಸ್ಟ್ರಿಯಲ್ ಇಂಟರ್ನೆಟ್ (ಎಫ್‌ಐಟಿ) ಇದಕ್ಕಾಗಿ 8,800 ಕೋಟಿ ರೂ. ಹೂಡಿಕೆ ಮಾಡುವ ಯೋಜನೆ ಹೊಂದಿದೆ.

ಇದು 14,000 ಉದ್ಯೋಗ ಸೃಷ್ಟಿಸಲಿದ್ದು ಘಟಕ ಸ್ಥಾಪನೆಗೆ 100 ಎಕರೆ ಜಾಗ ಬೇಕಾಗುತ್ತದೆ. ತುಮಕೂರಿನ ಜಪಾನ್ ಇಂಡಸ್ಟ್ರಿಯಲ್ ಟೌನ್‌ಷಿಪ್‌ನಲ್ಲಿ ನಿಯೋಗದ ಸದಸ್ಯರು ಲಭ್ಯ ಭೂಮಿಯನ್ನು ವೀಕ್ಷಿಸಲಿದ್ದಾರೆ. ಫೋನ್ ಪರದೆ, ಹೊರ ಕವಚ ಹಾಗೂ ಇತರ ಯಾಂತ್ರೀಕೃತ ಬಿಡಿ ಭಾಗಗಳನ್ನು ಎಫ್‌ಐಐ ಘಟಕ ತಯಾರಿಸಲಿದೆ. ದೇವನಹಳ್ಳಿ ಬಳಿಯ ಉದ್ದೇಶಿತ ಐಫೋನ್ ತಯಾರಿಕಾ ಘಟಕವು 'ಎಂಡ್ ಅಸೆಂಬ್ಲಿ' ಘಟಕವಾಗಿದ್ದರೆ, ಎಫ್‌ಐಐ ಘಟಕವು ಅದಕ್ಕೆ ಪೂರಕ ಘಟಕವಾಗಿರಲಿದೆ. ಈ ಸಂದರ್ಭದಲ್ಲಿ ಭಾರಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾತನಾಡಿ, ನಮ್ಮ ರಾಜ್ಯದಲ್ಲಿ ಫಾಕ್ಸ್ ಕಾನ್ ಕಂಪನಿಯು ಸೆಮಿ ಕಂಡಕ್ಟರ್ ಸೇರಿದಂತೆ ಬೇರೆ ಯಾವುದೇ ಉದ್ದಿಮೆಯನ್ನು ಸ್ಥಾಪಿಸಲು ಬಯಸಿದರೆ ಅಗತ್ಯ ಎಲ್ಲಾ ನೆರವನ್ನೂ ಒದಗಿಸುವ ಭರವಸೆ ನೀಡಿದರು. ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಉಪಸ್ಥಿತಿಯಲ್ಲಿ ಸಭೆ ನಡೆಯಿತು.

ಬದುಕಿನ ವಾಸ್ತವತೆ ಅರಿತು ಭವಿಷ್ಯ ರೂಪಿಸಿಕೊಳ್ಳಿ

ಸಾಹಿತಿ ಮತ್ತು ಸಂಸ್ಕೃತಿ ಚಿಂತಕಿ ಪ್ರೊ.ಭುವನೇಶ್ವರಿ ಹೆಗ್ಗಡೆ ಕರೆ

ಮೈಸೂರು, ಜು. 17–ಬದುಕಿನ ವಾಸ್ತವತೆಯನ್ನು ಇಂದಿನ ಯುವ ಜನಾಂಗ ಅರಿತು ಭವಿಷ್ಯವನ್ನು ರೂಪಿಸಿಕೊಂಡು ಸಮಾಜದ ಶಕ್ತಿಯಾಗಿ ದೇಶದ ಅಭಿವೃದ್ಧಿಗೆ ಪಣ ತೊಡಬೇಕೆಂದು ಸಾಹಿತಿ ಮತ್ತು ಸಂಸ್ಕೃತಿ ಚಿಂತಕಿ ಪ್ರೊ.ಭುವನೇಶ್ವರಿ ಹೆಗ್ಗಡೆ ಕರೆ ನೀಡಿದರು.



ಮೈಸೂರಿನ ಕಲಾಮಂದಿರದಲ್ಲಿ ಎಂ.ಎಂ.ಕೆ. ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾ ವಿದ್ಯಾಲಯವು ಆಯೋಜಿಸಿದ್ದ 2022–2023ನೇ ಶೈಕ್ಷಣಿಕ ಸಾಲಿನ ಕಾಲೇಜು ವಾರ್ಷಿಕೋತ್ಸವ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ಇಂದಿನ ಯಾಂತ್ರಿಕ, ತಾಂತ್ರಿಕ ಜಗತ್ತು ನಿತ್ಯವೂ ಬದಲಾಗುತ್ತಿದೆ. ಆಧುನಿಕತೆಯ ಭರಾಟೆಯಲ್ಲಿ ಸಂಸ್ಕೃತಿಯ ಚಿಂತನೆ ಸಾಹಿತ್ಯ ಕ್ರೀಡೆ ಮೊದಲಾದ ಆಸಕ್ತಿಯನ್ನು ಎಲ್ಲರೂ ಬೆಳೆಸಿಕೊಂಡು ಪಠ್ಯದ ಜೊತೆಗೆ ಸಹಪಠ್ಯ ಚಟುವಟಿಕೆಗಳಿಗೆ ಮಹತ್ವ ನೀಡಬೇಕು. ಪೋಷಕರು ಮತ್ತು ಶಿಕ್ಷಕರು ತಮ್ಮ ಮಕ್ಕಳಿಗೆ ಸಂಸ್ಕಾರಯುತವಾದ ಬದುಕಿನ ಅಗತ್ಯತೆಯನ್ನು ತಿಳಿಸಿ ಅವರ ಭವಿಷ್ಯವನ್ನು ಉಜ್ವಲಗೊಳಿಸಲು ಸದಾ ಕಾಲವೂ ಪ್ರಯತ್ನಿಸಬೇಕು. ಅವುಗಳನ್ನು ವಿದ್ಯಾರ್ಥಿಗಳು ಮನನ ಮಾಡಿಕೊಳ್ಳಬೇಕು ಎಂದರು.

ನಾನು ಸಾಹಿತಿಯಾಗಬೇಕೆಂಬ ಆಸೆಗೆ ಭಾಷೆಯ ಮೇಲೆ ಪ್ರೀತಿ ಮತ್ತು ಪ್ರಕೃತಿಯ ಎಲ್ಲಾ ಸಂವೇದನೆಗಳನ್ನು ಅರ್ಥೈಸಿಕೊಂಡೆ. ಹಾಸ್ಯವು ಜೀವನದ ಅತ್ಯಗತ್ಯ ಭಾಗವಾಗಿದೆ. ಇದು ನಮ್ಮ ಜೀವನದ ಗುಣಮಟ್ಟವನ್ನು ಹೆಚ್ಚು ಸುಧಾರಿಸುತ್ತದೆ ಮತ್ತು ಸಕಾರಾತ್ಮಕ ಮನೋಭಾವವನ್ನು ಸಾಧಿಸಲು ಸಹಾಯ ಮಾಡುತ್ತದೆ. ಹಾಸ್ಯವು ನಮ್ಮ ಜೀವನದ ಪ್ರತಿಯೊಂದು ಅಂಶದಲ್ಲೂ ಇರುತ್ತದೆ ಎಂದು ಅಭಿಪ್ರಾಯಪಟ್ಟರು.

ಎಸ್‌ಡಿಎಂ ಸಂಸ್ಥೆಗಳು ಮತ್ತು ಡಾ ವೀರೇಂದ್ರ ಹೆಗ್ಡೆ ಅವರು ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಕರ್ನಾಟಕ ಸಾಂಸ್ಕೃತಿಕ ಲೋಕದ ಅಸ್ಮಿತೆಯಾಗಿ ನಾಡಿನ ಸಾಕ್ಷಿ ಪ್ರಜ್ಞೆಯಾಗಿ ವಿಶ್ವಕ್ಕೆ ನಿಜವಾದ ಶಿಕ್ಷಣ ತಜ್ಞರಾಗಿದ್ದಾರೆ ಮತ್ತು ಲಕ್ಷಾಂತರ ಮಂದಿಯ ಪ್ರೇರಣ ಶಕ್ತಿಯಾಗಿ ತಮ್ಮ ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತಾರೆ ಎಂದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು ಸಮಾರಂಭದ ಅಧ್ಯಕ್ಷತೆ ವಹಿಸಿ ಕಾಲೇಜಿನ ವಾರ್ಷಿಕ ಚಟುವಟಿಕೆ ವರದಿ ಮತ್ತು ಅಧ್ಯಾಪಕರು ವಿದ್ಯಾರ್ಥಿಗಳ ವಿವಿಧ ಕ್ಷೇತ್ರಗಳಲ್ಲಿ ಸಾಧನೆಯ ವರದಿಯನ್ನು ಮಂಡಿಸಿದರು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ನಯನಕುಮಾರಿ, ಉಪ ಪ್ರಾಂಶುಪಾಲರಾದ ಪ್ರೊ.ಎನ್.ಭಾರತಿ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ರಜಿತಾ, ವಿದ್ಯಾರ್ಥಿ ಸಂಘದ ಎಲ್ಲಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಮನೆ ಗೋಡೆ ಕೊರೆದು ಚಿನ್ನಾಭರಣ ಕಳವು

ಸರಗೂರು, ಜು.17–ಮನೆಯ ಗೋಡೆ ಕೊರೆದು ಚಿನ್ನಾಭರಣ ಕಳವು ಮಾಡಿರುವ ಘಟನೆ ಸರಗೂರು ಗ್ರಾಮದಲ್ಲಿ ನಡೆದಿದೆ. ರಾಮನಗರದ ಟೊಯೊಟಾ ಕಿರ್ಲೋಸ್ಕರ್ ಕಂಪನಿಯ ನೌಕರ ಶಿವಕುಮಾರ್ (35) ಚಿನ್ನಾಭರಣ ಕಳೆದುಕೊಂಡವರು. ಇವರು ಮೂಲತಃ ಸರಗೂರಿನವರಾಗಿದ್ದು, ಅಲ್ಲಿನ ಮನೆಯಲ್ಲಿ ತಂದೆ–ತಾಯಿ ವಾಸಿಸುತ್ತಿದ್ದಾರೆ. ಜೂನ್ 15ರಂದು ಮಧ್ಯಾಹ್ನ 12.30ರ ಸುಮಾರಿನಲ್ಲಿ ಇವರ ತಂದೆ–ತಾಯಿ ಜಮೀನಿಗೆ ಹೋಗಿ ಸಂಜೆ ವಾಪಸ್ಸಾಗಿದ್ದಾರೆ. ಈ ವೇಳೆ ಪಶುಪತಿ ಕೊಪ್ಪಲು ಗ್ರಾಮದ ಸುರೇಶ್ ಎಂಬುವರು ಹೊಗೆಸೊಪ್ಪಿನ ಔಷಧಿ ಬೇಕೆಂದು ಕೇಳಿದಾಗ ಶಿವಕುಮಾರ್ ತಂದೆ ಔಷಧಿ ತೆಗೆದುಕೊಡಲು ಅಟ್ಟದ ಮೇಲೆ ಹತ್ತಿದಾಗ ಅಲ್ಲಿ ಗೋಡೆ ಕೊರೆದಿರುವುದು ಕಂಡುಬಂದಿದೆ. ಅಟ್ಟದಲ್ಲಿದ್ದ ಪೆಟ್ಟಿಗೆಯನ್ನು ಪರಿಶೀಲಿಸಿದಾಗ ಅದರಲ್ಲಿದ್ದ 120 ಗ್ರಾಂ ತೂಕದ ಚಿನ್ನಾಭರಣವನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಸಾಲಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ಕ್ ಫ್ರಂ ಹೋಂ ಆಸೆ ತೋರಿಸಿ ಮಹಿಳೆಗೆ 5.88 ಲಕ್ಷ ವಂಚನೆ

ಮೈಸೂರು, ಜು. 17– ವರ್ಕ್ ಫ್ರಮ್ ಹೋಂ ಹೆಸರಿನಲ್ಲಿ ಮಹಿಳೆಗೆ 5.88 ಲಕ್ಷ ರೂ. ವಂಚಿಸಲಾಗಿದೆ. ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿ ಎಸ್. ಮೀರಾ(53) ವಂಚನೆಗೊಳಗಾದವರಾಗಿದ್ದು, ಇವರಿಗೆ ಟೆಲಿಗ್ರಾಂ ಆಪ್ ಮೂಲಕ ವರ್ಕ್ ಫ್ರಮ್ ಹೋಂಗೆ ಸಂಬಂಧಿಸಿದ ಲಿಂಕ್ ರವಾನಿಸಲಾಗಿದೆ. ಅದನ್ನು ಅವರು ಕ್ಲಿಕ್ ಮಾಡಿದಾಗ ಹೋಂ ಸ್ಟೇ ಎಂಬ ವೆಬ್ ಪೇಜ್ ಓಪನ್ ಆಗಿದೆ. ಅದರಲ್ಲಿ ರಿವ್ಯೂಸ್‌ಗೆ 5 ಸ್ಟಾರ್‌ಗಳನ್ನು ನೀಡುವಂತೆ ತಿಳಿಸಿದ್ದಾರೆ. ನಂತರ ಪ್ರೀಪೇಯ್ಡ್ ಟಾಸ್ಕ್‌ನ್ನು ಹಣ ವರ್ಗಾಯಿಸಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂದು ನಂಬಿಸಿ 5,88,413 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೃದ್ಧ ರೈತನಿಂದ ಮೊಬೈಲ್ ಕಳವು

ಮೈಸೂರು, ಜು. 17– ವೃದ್ಧ ರೈತನಿಂದ ಮೊಬೈಲ್ ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದಿದೆ. ನಂಜನಗೂಡು ತಾಲೂಕು ಮರಳೂರು ಗ್ರಾಮದ ರೈತ ಎಂ.ಬೀರೇಗೌಡ(70) ಅವರು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಸಿ.ಜಿ. ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಎದುರಿಗೆ ಬಂದ ವ್ಯಕ್ತಿ ಅವರ ಜೇಬಿನಲ್ಲಿದ್ದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾನೆ. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಹಮ್–2023' ರಾಷ್ಟ್ರೀಯ ಫೆಸ್ಟ್



ಮೈಸೂರಿನ ಪ್ರತಿಷ್ಠಿತ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಿದ್ದ 'ಮಹಮ್–2023' ರಾಷ್ಟ್ರೀಯ ಫೆಸ್ಟ್ ಸಮಾರಂಭದ ಉದ್ಘಾಟನೆಯನ್ನು ಮೈಸೂರಿನ ಖ್ಯಾತ ಉದ್ಯಮಿ, CII ನಿರ್ದೇಶಕ ಸ್ಯಾಮ್ ಚೆರಿಯನ್ ಜ್ಯೋತಿ ಬೆಳಗುವುದರ ಮೂಲಕ ನೆರವೇರಿಸಿದರು. ಮಹಾಜನ ವಿದ್ಯಾಸಂಸ್ಥೆಯ ಟಿ. ಮುರಳೀಧರ್ ಭಾಗವತ್, ಮಹಾಜನ ವಿದ್ಯಾಸಂಸ್ಥೆಯ ಗೌ.ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪ್ರಾಚಾರ್ಯರಾದ ಶ್ರೀಮತಿ ಬಿ.ಆರ್. ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್.ರಮೇಶ್, ಫೆಸ್ಟ್‌ನ ಕಾರ್ಯಕ್ರಮ ಸಂಯೋಜನಾಧಿಕಾರಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ವಿದ್ಯಾರ್ಥಿ ಸಂಯೋಜಕ ರಿಷಬ್ ಎಸ್, ದೀಕ್ಷಿತ್ ಎನ್.ಸಿ, ಭೂಮಿಕಾ ಕೆ.ಆರ್. ಜೋಯಿಸ್ ಮತ್ತು ಸೃಷ್ಟಿ ಆರ್.ಜೋಯಿಸ್ ಉಪಸ್ಥಿತರಿದ್ದರು.

ಉತ್ತಮ ವೈದ್ಯಕೀಯ ಆಸ್ಪತ್ರೆಗಳಿದ್ದರೆ ಹೊಸ ವೈದ್ಯಕೀಯ ಕಾಲೇಜುಗಳ ಅವಶ್ಯವಿಲ್ಲ: ಡಾ.ಸಿ.ಎನ್.ಮಂಜುನಾಥ್ ಅಭಿಮತ

ಮೈಸೂರು, ಜು.17(ಸಿಎನ್)– ಉತ್ತಮ ವೈದ್ಯಕೀಯ ವ್ಯವಸ್ಥೆಗಳುಳ್ಳ ಆಸ್ಪತ್ರೆಗಳು ಇದ್ದಲ್ಲಿ, ರಾಜ್ಯಕ್ಕೆ ನೂತನ ವೈದ್ಯಕೀಯ ಕಾಲೇಜುಗಳ ಅಗತ್ಯವಿಲ್ಲ ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ಅಭಿಪ್ರಾಯಿಸಿದರು.



ಕುವೆಂಪುನಗರದ ಗಾನಭಾರತಿ ವೀಣೆ ಶೇಷಣ್ಣ ಭವನದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆ ಹಾಗೂ ಸಾಧಕ ವೈದ್ಯರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ರಾಜ್ಯದಲ್ಲಿ ಶೇ.60 ರಷ್ಟು ವೈದ್ಯರ ಲಭ್ಯವಿದ್ದು, 65 ವೈದ್ಯಕೀಯ ಕಾಲೇಜುಗಳಿವೆ. ವೈದ್ಯಕೀಯ ಕಾಲೇಜುಗಳು ಹೆಚ್ಚುತ್ತಾ ಹೋದಷ್ಟು ಮುಂದಿನ ದಿನಗಳಲ್ಲಿ ಕೆಲವು ಮುಚ್ಚಿ ಹೋಗಲಿವೆ. ನಮ್ಮಲ್ಲಿ ಉತ್ತಮ ಗುಣಮಟ್ಟದ ಚಿಕಿತ್ಸೆ ನೀಡುವ ವೈದ್ಯರು ಹಾಗೂ ಆಸ್ಪತ್ರೆಗಳಿದ್ದು, ಅವುಗಳ ಸಂಖ್ಯೆ ಹೆಚ್ಚಿಸಬೇಕಿದೆ ಎಂದರು. ಜನರು ಅಹಂಕಾರ, ಅನುಮಾನ, ಅಸೂಯೆಯಿಂದ ವರ್ತಿಸುತ್ತಿದ್ದಾರೆ. ತಮ್ಮ ಕಾಯಿಲೆಗಳಿಗೆ ತಾವುಗಳೇ ವೈದ್ಯರಾಗುತ್ತಿದ್ದು, ಇದು ನಮ್ಮಲ್ಲಿ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಅಲ್ಲದೇ ಸಾಮಾಜಿಕ ಜಾಲತಾಣವೂ ಆರೋಗ್ಯ ಕುರಿತು ತಪ್ಪು ಮಾಹಿತಿ ಹರಡುತ್ತಿದ್ದು, ಗುಣಮಟ್ಟದ ವೈದ್ಯಕೀಯ ಆಸ್ಪತ್ರೆಗಳ ಕೊರತೆಯೂ ಇದಕ್ಕೆ ಕಾರಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವೈದ್ಯರಲ್ಲಿ ಉತ್ತಮ ಹಾಗೂ ಸಾಮಾನ್ಯ ವೈದ್ಯರೆಂಬ ಎರಡು ಬಗೆಯಿವೆ. ಸಾಮಾನ್ಯ ವೈದ್ಯರು ಕಾಯಿಲೆ ಗುಣಪಡಿಸುತ್ತಾರೆ. ಆದರೆ ಉತ್ತಮ ವೈದ್ಯರು ರೋಗಿಯನ್ನು ಗುಣಪಡಿಸುತ್ತಾರೆ. ಖಾಯಿಲೆಗಳಿಂದ ಬಳಲಿ ಬಂದ ರೋಗಿಗಳಿಗೆ ಸ್ಪಂದಿಸುವುದು ಮುಖ್ಯವಾಗುತ್ತದೆ ಅದರ ಜೊತೆಗೆ ಸ್ಪರ್ಶದ ಮೂಲಕ ಮಾತನಾಡಿಸುವ ಸಹನೆಯಿಂದಲೇ ಬಹುಪಾಲು ಖಾಯಿಲೆಗಳು ಗುಣವಾಗುತ್ತವೆ. ಈ ನಿಟ್ಟಿನಲ್ಲಿ ವೈದ್ಯರು ಕಾರ್ಯ ಪ್ರವೃತ್ತರಾಗಬೇಕು ಎಂದು ಸಲಹೆ ನೀಡಿದರು.

ಬಳಿಕ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಮಾತನಾಡಿ, ಆರೋಗ್ಯವಂತನಾಗಿದ್ದರೆ ಮಾತ್ರ ಸಿರಿ–ಸಂಪತ್ತುಗಳನ್ನು ಅನುಭವಿಸಲು ಸಾಧ್ಯ. ಇಲ್ಲವೆಂದರೆ ಎಲ್ಲಾ ಭಾಗ್ಯಗಳು ಶೂನ್ಯವಾಗುತ್ತದೆ. ಸಮಾಜದಲ್ಲಿ ವೈದ್ಯರಿಗೆ ವಿಶೇಷವಾದ ಸ್ಥಾನಮಾನವಿದೆ. ಹಾಗಾಗಿ 'ವೈದ್ಯೋ ನಾರಾಯಣ ಹರಿಃ' ಎಂದು ಕರೆಯುತ್ತೇವೆ. ನಮ್ಮ ಆರೋಗ್ಯ ಕಾಪಾಡುವ ವೈದ್ಯರು ನಿಜಕ್ಕೂ ನಾರಾಯಣ ಸ್ವರೂಪಿಗಳು ಎಂದರು.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ವ್ಯಕ್ತಿಯು ಕೇವಲ ಖಾಯಿಲೆಗಳಿಂದ ಮುಕ್ತನಾಗಿದ್ದರೆ ಆತನನ್ನು ಆರೋಗ್ಯವಂತನೆನ್ನಲು ಸಾಧ್ಯವಿಲ್ಲ. ದೈಹಿಕ, ಮಾನಸಿಕ ಮತ್ತು ಸಾಮಾಜಿಕವಾಗಿ ಸದೃಢವಾಗಿದ್ದರೆ ಮಾತ್ರ ಅವನನ್ನು ಆರೋಗ್ಯವಂತ ಎನ್ನಬಹುದು ಎಂದರು.

ಈ ವೇಳೆ ಸಾಧಕ ವೈದ್ಯರುಗಳಾದ ಮಂಡ್ಯದ ಆದಿಚುಂಚನಗಿರಿ ವಿವಿ ಉಪ ಕುಲಪತಿ ಡಾ. ಎಂ.ಎ.ಶೇಖರ್, ಮೈಸೂರು ಮೆಡಿಕಲ್ ಕಾಲೇಜು ನಿರ್ದೇಶಕಿ ಡಾ. ಕೆ.ಆರ್.ದಾಕ್ಷಾಯಿಣಿ, ಉದರ ರೋಗ ತಜ್ಞ ಡಾ.ರಾಮಕೃಷ್ಣ, ಹೆಚ್ ಡಿ ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಡಾ.ಹೆಚ್.ಎಂ ಚಂದ್ರಕಲಾ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಸಹಾಯಕ ನಿರ್ದೇಶಕ ಬಿ.ಲಕ್ಷ್ಮಿನಾರಾಯಣ ಶೆಣೈ, ಜಯದೇವ ಹೃದ್ರೋಗ ಸಂಸ್ಥೆ ಸಹಾಯಕ ಪ್ರಾಧ್ಯಾಪಕಿ ಡಾ. ಅರ್ಪಿತ ಅರಸ್ ಇವರುಗಳಿಗೆ 'ವೈದ್ಯಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜಯದೇವ ಹೃದ್ರೋಗ ಸಂಸ್ಥೆ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಕೆ.ಎಸ್.ಸದಾನಂದ, ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಹೇಮಂತಕುಮಾರ್, ಟ್ರಸ್ಟ್ ಅಧ್ಯಕ್ಷ ಡಾ.ಎಂ.ಜಿ.ಆರ್.ಅರಸ್, ಉಪಾಧ್ಯಕ್ಷ ಎಚ್.ಎಂ.ಟಿ.ಲಿಂಗರಾಜೇ ಅರಸ್, ಸ್ಥಾಪಕ ಅಧ್ಯಕ್ಷ ಅಮರನಾಥರಾಜೇ ಅರಸ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಇದ್ದರು.

ಭೀಮನ ಅಮಾವಾಸ್ಯೆ ಹಿನ್ನೆಲೆ

ಭೀಮನಕೊಲ್ಲಿ ಶ್ರೀ ಮಹದೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ





ಹೆಚ್.ಡಿ.ಕೋಟೆ, ಜು.17– ಭೀಮನ ಅಮಾವಾಸ್ಯೆ ಅಂಗವಾಗಿ ತಾಲೂಕಿನ ಭೀಮನ ಕೊಲ್ಲಿ ಶ್ರೀಮಹದೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯಿತು.

ಮುಂಜಾನೆಯಿಂದಲೇ ಮಹದೇಶ್ವರ ಸ್ವಾಮಿಗೆ ವಿಶೇಷವಾಗಿ ವಿವಿಧ ಅಭಿಷೇಕಗಳ ಮೂಲಕ ರುದ್ರಾಭಿಷೇಕ, ಬಿಲ್ವಾರ್ಚನೆ ಮಾಡಿ ಬಗೆ ಬಗೆಯ ಹೂಗಳಿಂದ ದೇವರನ್ನು ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಹುಲಿವಾಹನವನ್ನು ವಿವಿಧ ಹೂಗಳಿಂದ ವಿಶೇಷವಾಗಿ ಅಲಂಕರಿಸಿ ವೀರಗಾಸೆ, ನಂದಿ ಕಂಬ, ಕಂಸಾಳೆ, ಮಂಗಳ ವಾದ್ಯಗಳೊಂದಿಗೆ ನೆರೆದಿದ್ದ ಸಾವಿರಾರು ಭಕ್ತರ ಸಮ್ಮುಖದಲ್ಲಿ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು. ಭೀಮನ ಅಮಾವಾಸ್ಯೆ ಅಂಗವಾಗಿ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಮಹದೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ದೇವರ ದರ್ಶನ ಪಡೆದು ಪುನೀತರಾದರು.

ಹೆಬ್ಬಲಗುಪ್ಪೆ ಗ್ರಾಮದ 24 ಮನೆ ತೆಲುಗು ಶೆಟ್ಟರು ಜನಾಂಗ, ನಂಜನಗೂಡು ತಾಲೂಕಿನ ಕಳಲೆ ಗ್ರಾಮಸ್ಥರು ಹಾಗೂ ಭೀಮನ ಕೊಲ್ಲಿ ದೇವಸ್ಥಾನ ಕಮಿಟಿ ವತಿಯಿಂದ ಸನ್ನಿಧಿಗೆ ಆಗಮಿಸಿದ ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ಆಯೋಜಿಸಲಾಗಿತ್ತು.

ಈ ವೇಳೆ ಭೀಮನಕೊಲ್ಲಿ ಮಹದೇಶ್ವರ ಸ್ವಾಮಿ ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷ ಎಂ.ಪಿ.ಎಸ್.ಮೂರ್ತಿ, ಉಪಾಧ್ಯಕ್ಷ ಗುರುಮಲ್ಲಪ್ಪ, ಕಾರ್ಯದರ್ಶಿ ಎಂ.ಎನ್. ಜಗದೀಶ್, ಕಾರ್ಯಕಾರಿ ಮಂಡಳಿ ಸದಸ್ಯರಾದ ಗುರುಮಲ್ಲಪ್ಪ ಗುರುಮೂರ್ತಿ, ಬಿ.ಎಸ್. ನಂಜಪ್ಪ, ಎಂ.ಎನ್.ಭೀಮರಾಜ್, ಬಿ.ಟಿ. ನರಸಿಂಹಮೂರ್ತಿ, ಎಚ್.ಎಮ್.ಮಲ್ಲಿಕಾರ್ಜುನ, ಸುಬ್ಬಣ್ಣ ಬಸವರಾಜು, ಕೆ.ಎಸ್. ಗುರುಲಿಂಗಪ್ಪ, ದಯಾನಂದ್ ಹಾಜರಿದ್ದರು.

ಚಿಕ್ಕದೇವಮ್ಮನ ಬೆಟ್ಟದಲ್ಲೂ ವಿಶೇಷ ಪೂಜೆ



ಸರಗೂರು, ಜು.17– ಭೀಮನ ಅಮಾವಾಸ್ಯೆ ಅಂಗವಾಗಿ ಸೋಮವಾರ ತಾಲೂಕಿನ ಅಧಿದೇವತೆ ಚಿಕ್ಕದೇವಮ್ಮನ ಬೆಟ್ಟದಲ್ಲೂ ವಿಶೇಷ ಪೂಜಾ ಕೈಂಕರ್ಯ ವಿಜೃಂಭಣೆಯಿಂದ ನೆರವೇರಿತು.

ಮುಂಜಾನೆಯಿಂದಲೇ ದೇವಿಗೆ ಪಂಚಾಮೃತಾಭಿಷೇಕ, ಹೋಮ–ಹವನ ನಡೆಸಿ ಚಿಕ್ಕದೇವಮ್ಮ ದೇವಿಯನ್ನು ಮುತ್ತು, ವಿವಿಧ ಹೂಗಳಿಂದ ಅಲಂಕರಿಸಲಾಗಿತ್ತು. ಬಳಿಕ ಮಹಾಮಂಗಳಾರತಿ ಮಾಡಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ಈ ವೇಳೆ ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾದರು. ನವ ವಧುವರರು ಬೆಟ್ಟಕ್ಕೆ ಆಗಮಿಸಿ ಒಳ್ಳೆಯದಾಗಲೆಂದು ಪ್ರಾರ್ಥಿಸಿ ದೇವಿಗೆ ವಿಶೇಷ ಪೂಜೆ ನೆರವೇರಿಸಿದರು.

ಇದಕ್ಕೂ ಮುನ್ನ ದೇವರ ಉತ್ಸವ ಮೂರ್ತಿಯನ್ನು ಪ್ರಕಾರೋತ್ಸವ ಮಾಡಿ ಕುಂಕುಮಾರ್ಚನೆ ನೆರವೇರಿಸಲಾಯಿತು. ನಂತರ ರಾಜೋಪಚಾರ ಪೂಜೆ ಬಳಿಕ ಭಕ್ತರಿಗೆ ಸಿಹಿ ವಿತರಿಸಲಾಯಿತು. ಅಲ್ಲದೇ ದೇವಾಲಯದಲ್ಲಿರುವ ಶ್ರೀಕಾಲಭೈರವೇಶ್ವರ ಸ್ವಾಮಿ, ಭೀಮೇಶ್ವರ ಸ್ವಾಮಿಯನ್ನು ವಿಶೇಷವಾಗಿ ಅಲಂಕರಿಸಿ ಪೂಜೆ ನೆರವೇರಿಸಲಾಯಿತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಸಿಪಿಐ ಲಕ್ಷ್ಮಿಕಾಂತ್ ಮಾರ್ಗದರ್ಶನದಲ್ಲಿ ಸರಗೂರು ಠಾಣೆ ಎಸ್‌ಐ ನಂದೀಶ್ ಕುಮಾರ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಈ ವೇಳೆ ದೇವಸ್ಥಾನದ ಇಓ ರಘು, ಪಾರುಪತ್ತೇದಾರ ಮಹದೇವಸ್ವಾಮಿ, ಅರ್ಚಕರಾದ ಲಿಂಗಪ್ಪ, ಮಣಿ, ಮನು, ನಿಂಗರಾಜು, ಸಂತೋಷ್, ಮಹದೇವಸ್ವಾಮಿ, ಪ್ರಸನ್ನ, ದೇವಣ್ಣ, ಪ್ರಸನ್ನಕುಮಾರ್, ಶಿವಕುಮಾರ್, ಚಿಕ್ಕದೇವಣ್ಣ, ವೀರಣ್ಣ ಹಾಜರಿದ್ದರು.

ಜೆಎಸ್‌ಎಸ್ ಶಾಲಾ ವಿದ್ಯಾರ್ಥಿ ಸಂಘ ಉದ್ಘಾಟನೆ



ನಂಜನಗೂಡು, ಜು.17– ತಾಲೂಕಿನ ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯಲ್ಲಿ ವಿದ್ಯಾರ್ಥಿ ಸಂಘಕ್ಕೆ ಚಾಲನೆ ನೀಡಲಾಯಿತು.

ವಿದ್ಯಾರ್ಥಿ ಸಂಘ ಉದ್ಘಾಟಿಸಿ ಮಾತನಾಡಿದ ಮೈಸೂರು ತಾಲೂಕು ತಹಸೀಲ್ದಾರ್ ಬಿ.ಎನ್.ಗಿರೀಶ್, ವಿದ್ಯಾರ್ಥಿಗಳು ಜೀವನದಲ್ಲಿ ಮಾನವೀಯತೆ ಬೆಳೆಸಿಕೊಳ್ಳಬೇಕು. ಗುರಿ, ಉದ್ದೇಶ ಸ್ಪಷ್ಟವಾಗಿದ್ದರೆ ಉತ್ತಮ ಸ್ಥಾನ ಅಲಂಕರಿಸಬಹುದು. ಹಳ್ಳಿ ವಿದ್ಯಾರ್ಥಿಗಳು ಬುದ್ಧಿವಂತರು ಹಾಗೂ ಸೃಜನಶೀಲರಾಗಿರುತ್ತಾರೆ. ನಾವು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗದೆ ಭಾರತೀಯ ಸಂಸ್ಕೃತಿ ಉಳಿಸಿ ಬೆಳೆಸಬೇಕು. ಹಳ್ಳಿಯ ಜನಪದ ಸೊಗಡನ್ನು ಮರೆಯದೇ ಜೀವಂತವಾಗಿರಿಸಬೇಕು. ನಾನು ಸಹ ಜೆಎಸ್‌ಎಸ್ ಸಂಸ್ಥೆಯಲ್ಲಿ ಓದಿ ತಹಶೀಲ್ದಾರ್ ಆಗಿದ್ದೇನೆ. ಹಾಗೆಯೇ ನೀವು ಜಿಲ್ಲಾಧಿಕಾರಿ ಹಾಗೂ ಮತ್ತಿತರ ಉನ್ನತ ಹುದ್ದೆ ಗಳಿಸುವ ಮೂಲಕ ಸಮಾಜ ಸೇವೆ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಬಯೋಟೆಕ್ನಾಲಜಿ ವಿಭಾಗದ ಪ್ರಾಧ್ಯಾಪಕ ಪ್ರೊ.ಎಸ್. ನಂಜುಂಡಸ್ವಾಮಿ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ವಿದ್ಯಾರ್ಥಿ ಸಂಘಗಳು ಪ್ರಮುಖ ಪಾತ್ರವಹಿಸುತ್ತವೆ. ಸರ್ವಜ್ಞ ತಿಳಿಸಿದಂತೆ ಸರ್ವರಿಂದಲೂ ವಿದ್ಯೆ ಕಲಿತು ಸರ್ವಜ್ಞನಾಗಿದ್ದಾನೆ. ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಶಿಕ್ಷಣ ಅವಶ್ಯಕ. ಶಿಕ್ಷಣ ವಿದ್ಯಾರ್ಥಿಗಳ ಜೀವನಕ್ಕೆ ಭದ್ರ ಬುನಾದಿ ಹಾಕುವ ಜೊತೆಗೆ ಅವರಲ್ಲಿ ಆತ್ಮವಿಶ್ವಾಸ ಮೂಡಿಸುವಂತಿರಬೇಕು. ವಿದ್ಯಾರ್ಥಿಗಳು ಹಗಲಿರುಳು ಶ್ರಮಿಸಿ ಯಶಸ್ಸಿನ ಮೆಟ್ಟಿಲೇರಬೇಕು. ವಿದ್ಯೆ ಯಾರ ಸ್ವತ್ತಲ್ಲ. ಶ್ರಮ, ಶ್ರದ್ಧೆ ಹಾಗೂ ಛಲವಿದ್ದರೆ ಏನು ಬೇಕಾದರೂ ಸಾಧಿಸಬಹುದು ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಾದ ಶಿವರಾಜ್ ಹಿರೇಮಠ ಹಾಗೂ ಪೂರ್ವಶ್ರೀಗೆ ಚಾಮರಾಜನಗರದ ದೀನಬಂಧು ಸಂಸ್ಥೆ ಪ್ರೊ.ಜಿ.ಎಸ್. ಜಯದೇವ್, ಜೆಎಸ್‌ಎಸ್ ಕೆವಿಕೆಯ ನಿವೃತ್ತ ವಿಜ್ಞಾನಿ ಜಮುನಾ ಅರಸ್ ಹಾಗೂ ಮುಖ್ಯೋಪಾಧ್ಯಾಯ ಜಿ.ಶಿವಮಲ್ಲು ನಗದು ಪುರಸ್ಕಾರ ವಿತರಿಸಲಾಯಿತು.

ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಪಿ.ಉದಯಶಂಕರ್ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ಮುಖ್ಯಸ್ಥರಾದ ಜಿ.ಎಲ್. ತ್ರಿಪುರಾಂತಕ, ಸಂಪತ್ತು ಇತರರಿದ್ದರು.

ವಿದ್ಯಾರ್ಥಿಗಳಿಗೆ ಸಂವಹನ ಕೌಶಲ್ಯ, ಇಂಗ್ಲಿಷ್ ತರಬೇತಿಗೆ ಕ್ರಮ: ಜಿಡಿಹೆಚ್

ಹುಣಸೂರು, ಜು.17– ನಗರದ ಡಿ.ಡಿ. ಅರಸು ಸರ್ಕಾರಿ ಪದವಿ ಕಾಲೇಜಿನ ಶೈಕ್ಷಣಿಕ ಅಭಿವೃದ್ಧಿ, ಮೂಲಸೌಕರ್ಯಕ್ಕೆ ಎಂಎನ್‌ಸಿ ಕಂಪನಿಗಳೊಂದಿಗೆ ಚರ್ಚಿಸಲಾಗಿದ್ದು, ಮೈಸೂರು ವಿವಿ ವ್ಯಾಪ್ತಿಯಲ್ಲಿ ಮಾದರಿ ಕಾಲೇಜನ್ನಾಗಿಸುವ ಸಂಕಲ್ಪ ತೊಟ್ಟಿದ್ದೇನೆ ಎಂದು ಶಾಸಕ ಜಿ.ಡಿ. ಹರೀಶ್‌ಗೌಡ ತಿಳಿಸಿದರು.

ನಗರದ ಡಿ.ಡಿ.ಅರಸು ಕಾಲೇಜಿನಲ್ಲಿ ಎನ್‌ಎಸ್‌ಎಸ್ ಸೇರಿದಂತೆ ವಿವಿಧ ಚಟುವಟಿಕೆಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕಾಲೇಜು ಸಾಕಷ್ಟು ಅಭಿವೃದ್ಧಿಗೊಂಡಿದೆ. ಪಿಹೆಚ್.ಡಿ ಮಾಡಲು ಅವಕಾಶವಿದೆ. ಗ್ರಾಮೀಣ ವಿದ್ಯಾರ್ಥಿಗಳು ಕೌಶಲ್ಯ ಕೊರತೆಯಿಂದ ಅನೇಕ ಉದ್ಯೋಗಾವಕಾಶಗಳನ್ನು ಕಳೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಪ್ರತಿ ಕಾಲೇಜು ವಿದ್ಯಾರ್ಥಿಗಳಿಗೂ ಅವಶ್ಯವಾದ ಸಂವಹನ ಕೌಶಲ್ಯ, ಇಂಗ್ಲಿಷ್‌ನಲ್ಲಿ ತರಬೇತಿ ಕೊಡಿಸಲಾಗುವುದು. ಅಲ್ಲದೇ ಕಾಲೇಜಿನ ಮೂಲಸೌಕರ್ಯಕ್ಕೆ ಈಗಾಗಲೇ ಎಂಎನ್‌ಸಿ ಕಂಪನಿಗಳೊಂದಿಗೆ ಚರ್ಚಿಸಿದ್ದೇನೆ ಎಂದು ತಿಳಿಸಿದರು.

ಹುಣಸೂರಿನ ಕಾಲೇಜು ವಿದ್ಯಾರ್ಥಿಗಳು ಹೆಚ್ಚು ದುಶ್ಚಟಗಳಿಗೆ ಒಳಗಾಗಿರುವ ಬಗ್ಗೆ ಪೊಲೀಸರು ಮಾಹಿತಿ ನೀಡಿದ್ದು, ಇದರಿಂದ ಪೋಷಕರು ತಲೆತಗ್ಗಿಸುವಂತಾಗಿದೆ. ವಿದ್ಯಾರ್ಥಿಗಳು ಇದರಿಂದ ಹೊರಬಂದು ಕಾಲೇಜಿನ,



ತಾಲೂಕಿನ ಗೌರವ ಉಳಿಸಬೇಕು ಎಂದರು.

ಕಾಲೇಜಿಗೆ 52 ವರ್ಷ ತುಂಬಿದ ಹಿನ್ನೆಲೆಯಲ್ಲಿ ಸುವರ್ಣ ಮಹೋತ್ಸವ ಆಚರಿಸುವ ಕುರಿತು ವಿದ್ಯಾರ್ಥಿಗಳ ಬೇಡಿಕೆಗೆ ಸ್ಪಂದಿಸಿದ ಶಾಸಕ ಹರೀಶ್‌ಗೌಡರು, ರಾಜ್ಯಮಟ್ಟದ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಸಂಭ್ರಮದೊಂದಿಗೆ ವಿಜೃಂಭಣೆಯಿಂದ ಆಚರಿಸಲು ಸಂಪೂರ್ಣ ಸಹಕಾರ ನೀಡುವೆ ಎಂದು ಸಭೆಯಲ್ಲಿ ಪ್ರಕಟಿಸಿದರು.

ಸಿಡಿಸಿ ಉಪಾಧ್ಯಕ್ಷ ನಾರಾಯಣ್ ಮಾತನಾಡಿ, ಅರಸು ಕಾಲೇಜನ್ನು ಪ್ರಾಯೋಗಿಕವಾಗಿ ಮಾದರಿ ಕಾಲೇಜನ್ನಾಗಿಸಲು ಶಾಸಕರು ಮುಂದಾಗಿದ್ದು, ಈಗಾಗಲೇ ಕ್ರಿಯಾಯೋಜನೆ ರೂಪಿಸಲಾಗುತ್ತಿದೆ. ಬಹುತೇಕ ಪಿಎಚ್.ಡಿ ಮಾಡಿರುವ ಅಧ್ಯಾಪಕರು ಇಲ್ಲಿದ್ದಾರೆ. ಉತ್ತಮ ಫಲಿತಾಂಶ ಬರುತ್ತಿದೆ. ಶಾಸಕರು ಕಾಲೇಜನ್ನು ಮಿನಿ ವಿವಿ ಆಗಿಸಲು ಮುಂದಾಗಿರುವುದು ಸಂತಸವೆಂದರು.

ನಿವೃತ್ತ ಪ್ರಾಧ್ಯಾಪಕ ಡಾ.ಸತೀಶ್‌ಚಂದ್ರ ಪ್ರಧಾನ ಭಾಷಣ ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ವೆಂಕಟೇಶಯ್ಯ, ಸಾಂಸ್ಕೃತಿಕ ಸಮಿತಿ ಸಂಚಾಲಕ ಡಾ.ಕೆ.ಎನ್. ಮೋಹನ್, ಕ್ರೀಡಾ ಸಂಚಾಲಕ ಕುಮಾರ್, ರೆಡ್‌ಕ್ರಾಸ್ ಸಂಚಾಲಕ ಸೈಯದ್ ರಿಯಾಜ್ ಪಾಷಾ, ಎನ್‌ಎಸ್‌ಎಸ್ ಸಂಚಾಲಕರಾದ ಡಾ.ಕಿರಣ್‌ಕುಮಾರ್, ಗುಣಶ್ರೀ, ಸ್ಕೌಟ್ ಅಂಡ್ ಗೈಡ್ಸ್‌ನ ಸಂಚಾಲಕರಾದ ಎಸ್.ರೂಪ, ಮಾದಪ್ಪ, ಮಂಜುನಾಥ್ ಆರ್.ಎ.ಕಟ್ಟೆ ತಮ್ಮ ಸಮಿತಿ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ವಿದ್ಯಾರ್ಥಿ ಪದಾಧಿಕಾರಿಗಳಾದ ಕೆ.ಅಮೃತ, ಅಂಕಿತ, ಚಂದ್ರಶೇಖರ್, ಮಧು ಮಾತನಾಡಿದರು.

ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಸಿಡಿಸಿ ಸದಸ್ಯರಾದ ಶ್ರೀಧರ್, ಸತೀಶ್ ಪಾಪಣ್ಣ, ಲಕ್ಷ್ಮಿಕಾಂತ್, ವರದರಾಜು, ಜೆಡಿಎಸ್ ಮುಖಂಡ ಕೆಂಪೇಗೌಡ ಮತ್ತಿತರರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಜಯಮ್ಮ ಚಂದ್ರಶೇಖರ್ ಕಲ್ಯಾಣ ಮಂಟಪದಲ್ಲಿ ಬೆಟ್ಟದಪುರ ಪೊಲೀಸ್ ಠಾಣೆಯಿಂದ ವರ್ಗಾವಣೆಗೊಂಡ ಕ್ರೈಂ ವಿಭಾಗದ ಎಸ್‌ಐ ಸರ್ದಾರ್ ಪಾಷ, ಸಿಬ್ಬಂದಿಗಳಾದ ರವಿಕುಮಾರ್, ಪರಶುರಾಮೇಗೌಡ, ಸತೀಶ್, ರಾಜೇಶ್ ಕುಮಾರ್, ರವಿ, ಶ್ರೀಮತಿ, ಅರುಣ್, ಗಣೇಶ್, ವಿದ್ಯಾಶ್ರೀ ಅವರನ್ನು ಸನ್ಮಾನಿಸಿ, ಬೀಳ್ಕೊಡಲಾಯಿತು. ಈ ವೇಳೆ ಡಿವೈಎಸ್ಪಿ ಮಹೇಶ್, ಬೆಟ್ಟದಪುರ ಎಸ್‌ಐ ಪ್ರಕಾಶ್ ಎಂ.ಎತ್ತಿನಮನಿ, ಸಿಪಿಐ ಶ್ರೀಧರ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕ್ರೀಡೆಯಿಂದ ಉತ್ತಮ ಆರೋಗ್ಯ

ಮಲ್ಕುಂಡಿ, ಜು.17– ಕ್ರೀಡೆಯಿಂದ ಉತ್ತಮ ಆರೋಗ್ಯ ದೊರೆಯಲಿದೆ ಎಂದು ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ ತಿಳಿಸಿದರು.

ಇಲ್ಲಿಗೆ ಸಮೀಪದ ಹಲ್ಲರೆಯಲ್ಲಿ ಕಿಚ್ಚ ಸುದೀಪ್ ಅಭಿಮಾನಿ ಬಳಗದಿಂದ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು ಮತ್ತು ಗ್ರಾಮೀಣ ಭಾಗದಲ್ಲಿ ಇಂತಹ ಪಂದ್ಯಾವಳಿಗಳು ಹೆಚ್ಚಾಗಿ ನಡೆಯಲಿ ಎಂದು ತಿಳಿಸಿದರು.

ಕ್ರಿಕೆಟ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಧನಗಳ್ಳಿ ಪಡೆದರೆ, ಹಗಿನವಾಳು ದ್ವಿತೀಯ ಸ್ಥಾನ ಪಡೆಯಿತು. ಈ ವೇಳೆ ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಸದಸ್ಯ ಕೃಷ್ಣನಾಯಕ, ರೆಹಮತ್ ಉಲ್ಲಾ, ಮುಖಂಡರಾದ ನಾಗುರಯ್ಯ, ಶಿವಮೂರ್ತಿ, ಸ್ವಾಮಿ, ಮಹದೇವಯ್ಯ, ಸೇರಿದಂತೆ ಪ್ರಮುಖರಿದ್ದರು.



ಮೂರು ಲಕ್ಷ ಪಾವತಿಸಿ ಆನೆ ದತ್ತು

ಮೈಸೂರು, ಜು.17(ಎಂಕೆ)– ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ 3 ಲಕ್ಷ ರೂ. ಪಾವತಿಸಿ ಒಂದು ವರ್ಷದ ಅವಧಿಗೆ ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನ ಹೊನ್ನೇನಹಳ್ಳಿಯ ಕೆ.ವಿ.ಪೌನಿತಾ ಹಾಗೂ ಅಮಿತ್‌ಗೌಡ 'ಆನೆ' ದತ್ತು ಪಡೆದಿದ್ದಾರೆ. ಪ್ರಾಣಿ ಸಂರಕ್ಷಣೆಯ ಕಾರ್ಯದಲ್ಲಿ ಕೈಜೋಡಿಸುವ ಮೂಲಕ ಕೊಡುಗೆ ನೀಡಿದ ಹಿನ್ನೆಲೆಯಲ್ಲಿ ಚಾಮರಾಜೇಂದ್ರ ಮೃಗಾಲಯವು ದಾನಿಗಳನ್ನು ಅಭಿನಂದಿಸಿದೆ.

ಹಡಪದ ಅಪ್ಪಣ್ಣ, ಫ.ಗು.ಹಳಕಟ್ಟಿ ಜಯಂತಿ



ತಿ.ನರಸೀಪುರ, ಜು.17– ಪಟ್ಟಣದ ವಿದ್ಯೋದಯ ಕಾಲೇಜು ಆವರಣದಲ್ಲಿ ಹಡಪದ ಅಪ್ಪಣ್ಣ ಮತ್ತು ವಚನ ಪಿತಾಮಹ ಫ.ಗು.ಹಳಕಟ್ಟಿ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಈ ವೇಳೆ ಕಸಾಪ ಮಾಜಿ ಅಧ್ಯಕ್ಷ ಕೆ.ಆರ್. ಷಣ್ಮುಖಸ್ವಾಮಿ, ನಯನಜ ಕ್ಷತ್ರಿಯ ಸಮಾಜದ ಅಧ್ಯಕ್ಷ ನಾಗೇಂದ್ರ, ಕಾರ್ಯದರ್ಶಿ ಈ. ರಾಜು, ಎಂ.ನಾಗರಾಜು, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೊಸೂರುಹುಂಡಿ ತೋಂಟೇಶ, ತಾಲೂಕು ಮಡಿವಾಳರ ಸಂಘದ ಅಧ್ಯಕ್ಷ ಆಲಗೂಡು ಬಸವರಾಜು, ಗ್ರಾಪಂ ಮಾಜಿ ಉಪಾಧ್ಯಕ್ಷ ಪ್ರಭು, ಗೌಡರ ಜಯಸ್ವಾಮಿ, ಸಾಹಿತಿ ಜವರಾಜು, ನಿವೃತ್ತ ಅಂಚೆ ನೌಕರ ಲಿಂಗರಾಜು, ವಕೀಲರಾದ ಜ್ಞಾನೇಂದ್ರ ಮೂರ್ತಿ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ದುಂಡು ಮಾದಯ್ಯ ಇನ್ನಿತರರಿದ್ದರು.



ಭೀಮನ ಅಮಾವಾಸ್ಯೆ ಅಂಗವಾಗಿ ತಿ.ನರಸೀಪುರ ತಾಲೂಕಿನ ಗವಿಮಠದ ಶ್ರೀ ಷಡಕ್ಷರಿ ಶಿವಯೋಗಿ ಗದ್ದುಗೆಗೆ ಮಹಾ ರುದ್ರಾಭಿಷೇಕ ಹಾಗೂ ಮಹಾಮಂಗಳಾರತಿ ನೆರವೇರಿಸಲಾಯಿತು. ಇದೇ ವೇಳೆ ಪೀಠಾಧ್ಯಕ್ಷ ಮಲ್ಲಿಕಾರ್ಜುನ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ತಾಯೂರು ಪ್ರಕಾಶ್, ಶ್ರೀಕಂಠ, ನವೀನ, ಸಿದ್ದಪ್ಪ, ವೀರಭದ್ರಸ್ವಾಮಿ, ಮಹೇಶ್, ರಾಜೇಂದ್ರ, ಶಿವಪ್ಪ, ನಂಜುಂಡೇಗೌಡ ಇನ್ನಿತರರಿದ್ದರು.

ವಿಜ್ಞಾನಿಗಳಾಗಲು ವಿದ್ಯಾರ್ಥಿನಿಯರು ಮುಂದಾಗಬೇಕು

ಶಾಸಕ ಜಿ.ಡಿ.ಹರೀಶ್‌ಗೌಡ ಕಿವಿಮಾತು



ಹುಣಸೂರು, ಜು.17– ಚಂದ್ರಯಾನ–3 ಉಡಾವಣೆ ಇಡೀ ವಿಶ್ವವೇ ನಮ್ಮ ಕಡೆ ನೋಡುವ ಸಾಧನೆಯಾಗಿದ್ದು, ಇದಕ್ಕೆ ಶ್ರಮಿಸಿದ ದೇಶದ ವಿಜ್ಞಾನಿಗಳಿಗೆ ನಾವು ಆಭಾರಿಯಾಗಬೇಕಾಗಿದೆ. ಅಂತಹ ಸಾಧನೆಯ ಹಾದಿಯಲ್ಲಿ ನೀವುಗಳು ಮುನ್ನುಗ್ಗಬೇಕಿದೆ ಎಂದು ವಿದ್ಯಾರ್ಥಿನಿಯರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಕಿವಿಮಾತು ಹೇಳಿದರು.

ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭಕ್ಕೆ ಡೋಲು ಬಾರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಕೇವಲ ಡಾಕ್ಟರ್, ಇಂಜಿನಿಯರ್‌ಗಳಾಗಬೇಕೆಂಬ ಉದ್ದೇಶದಿಂದ ಓದಿ ಮುಂದೆ ಬರುವ ಜೊತೆಗೆ ವಿಜ್ಞಾನಿಗಳಾಗಿ ಏನಾದರೂ ಸಾಧನೆ ಮಾಡಿ ನೀವು ದೇಶಕ್ಕೆ ಕೊಡುಗೆಗಳನ್ನು ನೀಡುವ ಮೂಲಕ ವಿಶ್ವವೇ ಮೆಚ್ಚುವಂತರಾಗಿ ಎಂದು ಶುಭ ಹಾರೈಸಿದರು.

ಪ್ರೌಢ ಶಿಕ್ಷಣ ಮುಗಿಸಿ ಕಾಲೇಜು ಶಿಕ್ಷಣಕ್ಕೆ ಬಂದಿದ್ದೀರಿ. ಇಲ್ಲಿಂದ ನಿಮ್ಮ ಭವಿಷ್ಯತ್ತಿನ ಮೌಲ್ಯಯುತ ಬದುಕಿಗೆ ಭದ್ರ ತಳಹದಿ ಹಾಕಿ ಸಾಧನೆಗಳನ್ನು ಮಾಡಬೇಕಾಗುತ್ತದೆ. ಇದಕ್ಕಾಗಿ ಶಿಕ್ಷಣದ ಜೊತೆಗೆ ಕೌಶಲ್ಯ ತರಬೇತಿಗಳು ಸಹ ಆಗಬೇಕಾಗಿದೆ. ಇದರಿಂದ ನೀಟ್ ಮತ್ತು ಸಿಇಟಿಗಳಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸಹಕಾರಿಯಾಗಲಿದೆ. ಮುಂದಿನ ದಿನಗಳಲ್ಲಿ ಕಾಲೇಜಿನಲ್ಲಿ ಸಂಪನ್ಮೂಲ ವ್ಯಕ್ತಿಗಳಿಂದ ನೀಟ್ ಮತ್ತು ಸಿಇಟಿ ತರಬೇತಿ ವ್ಯವಸ್ಥೆ ಮಾಡಲಾಗುವುದು ಎಂದರು.

ಕಾಂಗ್ರೆಸ್ ಸರ್ಕಾರ ಚುನಾವಣಾ ಪೂರ್ವ ನೀಡಿದ್ದ 5 ಗ್ಯಾರಂಟಿಗಳ ಪೈಕಿ ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಸಾರಿಗೆ ಬಸ್‌ಗಳಲ್ಲಿ ಉಚಿತ ಸೌಲಭ್ಯ ಕಲ್ಪಿಸಿರುವುದರಿಂದ ಸಾರಿಗೆ ಬಸ್‌ಗಳಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಓಡಾಡಲು ತುಂಬಾ ಕಷ್ಟವಾಗಿದೆ. ಕೆಲವೆಡೆ ಬಸ್‌ಗಳಿಲ್ಲದೇ ಶಾಲಾ ಕಾಲೇಜುಗಳಿಗೆ ತೆರಳಲು ಸಾಧ್ಯವಾಗುತ್ತಿಲ್ಲ. ಎಷ್ಟೋ ದಿನ ಮನೆಯಲ್ಲೇ ಉಳಿಯುವ ಸಂದರ್ಭ ಬಂದಿದೆ ಎಂದು ವಿದ್ಯಾರ್ಥಿಗಳು ಶಾಸಕರಿಗೆ ಹೇಳಿದಾಗ, ಇದಕ್ಕೆ ಸ್ಪಂದಿಸಿದ ಶಾಸಕರು ಎಲ್ಲೆಲ್ಲಿ ಬಸ್ ತೊಂದರೆಯಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಿಗೆ ತಿಳಿಸಿ ನಾನು ಸಾರಿಗೆ ಇಲಾಖೆಯವರೊಂದಿಗೆ ಮಾತನಾಡಿ, ಬಸ್ ವ್ಯವಸ್ಥೆ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಪ್ರಾಂಶುಪಾಲ ಎ.ರಾಮೇಗೌಡ ಮಾತನಾಡಿ, ಹೆಣ್ಣು ಮಕ್ಕಳ ಕಾಲೇಜು ಆವರಣದಲ್ಲಿ ಕಂದಾಯ ಇಲಾಖೆ ಆರ್‌ಐ ಮತ್ತು ವಿಎ ಕಚೇರಿಗಳಿದ್ದು, ಸಾರ್ವಜನಿಕರು ಒಳಬಂದು ವಿವಿಧ ಚಟುವಟಿಕೆಗಳಲ್ಲಿ ತೊಡಗುವುದರಿಂದ ಹೆಣ್ಣು ಮಕ್ಕಳಿಗೆ ಮುಜುಗರವಾಗುತ್ತಿದ್ದು, ತಕ್ಷಣ ಈ ಕಚೇರಿಗಳನ್ನು ಬೇರೆಡೆಗೆ ಸ್ಥಳಾಂತರಿಸಬೇಕು ಎಂದರು.

ಇದೇ ವೇಳೆ ಕಾಲೇಜಿನ ಸಾವಿರಾರು ವಿದ್ಯಾರ್ಥಿನಿಯರಿಗೆ ಬಿಸಿಲು ಮಳೆಯಿಂದ ರಕ್ಷಣೆಗಾಗಿ ಚಾವಣಿ ನಿರ್ಮಿಸಬೇಕು. ಕಾಲೇಜಿನ ಒಳ ಆವರಣದಲ್ಲಿ ಮಳೆ ನೀರಿನಿಂದ ಮಣ್ಣು ಕೊಚ್ಚಿ ಹೋಗುವುದನ್ನು ತಡೆಯಲು ಇಂಟರ್‌ಲಾಕ್ ವ್ಯವಸ್ಥೆಯಾಗಬೇಕು, ಕಾಲೇಜಿನಲ್ಲಿ 2 ಶೌಚಾಲಯ ನಿರ್ಮಾಣವಾಗಬೇಕು, ಪೂರಕ ಪರೀಕ್ಷೆಗಳಾದ ನೀಟ್ ಮತ್ತು ಸಿಇಟಿ ತರಬೇತಿ ತರಗತಿಗಳು ಪ್ರಾರಂಭವಾಗಬೇಕು, ಕಾಲೇಜಿನಲ್ಲಿ ಮತ್ತೆರಡು ಕೊಠಡಿ ನಿರ್ಮಾಣ, 6 ಪ್ರೊಜೆಕ್ಟರ್, ಕಾಲೇಜಿನ ಪ್ರವೇಶ ದ್ವಾರಕ್ಕೆ ಕಮಾನು ಹಾಗೂ ಆಕರ್ಷಕ ನಾಮಫಲಕ ಅಳವಡಿಸಿಕೊಡಬೇಕು ಎಂದು ಶಾಸಕ ಹರೀಶ್‌ಗೌಡರಿಗೆ ಕಾಲೇಜಿನಿಂದ ಮನವಿ ಸಲ್ಲಿಸಲಾಯಿತು.

ಸಿಡಿಸಿ ಸಮಿತಿ ಸದಸ್ಯ ವೀರಭದ್ರಪ್ಪ ಮಾತನಾಡಿದರು. ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಗಳಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷರು ಮತ್ತು ನೂತನ ಸದಸ್ಯರನ್ನು ಸನ್ಮಾನಿಸಲಾಯಿತು.

ದ್ವಿತೀಯ ಪಿಯು ವಿದ್ಯಾರ್ಥಿನಿಯರು ಪ್ರಥಮ ವರ್ಷದ ವಿದ್ಯಾರ್ಥಿನಿಯರಿಗೆ ಸ್ವಾಗತ ಕೋರಿದರು. ಕಾರ್ಯಕ್ರಮದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ನಾಗಮ್ಮ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ತಟ್ಟೆಕೆರೆ ಶ್ರೀನಿವಾಸ್, ನಗರಸಭಾ ಸದಸ್ಯರಾದ ಹರೀಶ್ ಕುಮಾರ್, ಸಮಿತಿ ಸದಸ್ಯರಾದ ಅಸ್ಲಾಕ್ ಕೆಂಪೇಗೌಡ, ಕೆ.ಹೆಚ್.ವೀರಭದ್ರಪ್ಪ, ಪತ್ರಕರ್ತರಾದ ಕೆ.ಕೃಷ್ಣ, ಕೆ.ಪ್ರತಾಪ್, ಶಿವಕುಮಾರ್, ಮಮತಾ, ಅಶೋಕ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ನಾರಾಯಣ್ ಇನ್ನಿತರರಿದ್ದರು.

ಎನ್.ಭುಜಂಗೇಂದ್ರ ನಿಧನ



ನಂಜನಗೂಡು, ಜು.17– ಇಲ್ಲಿನ ಪ್ರಗತಿ ನಗರ ನಿವಾಸಿ, ನಿವೃತ್ತ ಶಿಕ್ಷಕ ಎನ್.ಭುಜಂಗೇಂದ್ರ(75)ಸೋಮವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ಪರಶುರಾಮ ದೇವಾಲಯದ ಬಳಿಯ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿಕ್ಕಮ್ಮ



ಹೆಚ್.ಡಿ.ಕೋಟೆ, ಜು.17– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ಲೇ.ಹುಚ್ಚೇಗೌಡ ಅವರ ಪತ್ನಿ ಚಿಕ್ಕಮ್ಮ(79) ಸೋಮವಾರ ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಸ್ವಗ್ರಾಮದ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾಂಸಾಹಾರ ಸೇವಿಸಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 30ಕ್ಕೂ ಅಧಿಕ ಮಕ್ಕಳು ಅಸ್ವಸ್ಥ

ಪ್ರಾಂಶುಪಾಲರ ತರಾಟೆಗೆ ತೆಗೆದುಕೊಂಡ ಪೋಷಕರು





ಬೇಗೂರು(ನಾಗೇಶ್), ಜು.17– ಇಲ್ಲಿಗೆ ಸಮೀಪದ ಯಡವನಹಳ್ಳಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿಶಾಲೆಯಲ್ಲಿ ಮಾಂಸಾಹಾರ ಸೇವಿಸಿ ಸುಮಾರು 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾನುವಾರ ರಾತ್ರಿ ಅಸ್ವಸ್ಥಗೊಂಡಿದ್ದಾರೆ.

ವಸತಿ ಶಾಲೆಯಲ್ಲಿ ನಿನ್ನೆ ರಾತ್ರಿ ವಿದ್ಯಾರ್ಥಿಗಳಿಗೆ ಮಾಂಸಾಹಾರ ಊಟ ತಯಾರಿಸಿ, ಬಡಿಸಲಾಗಿತ್ತು. ಅದನ್ನು ಸೇವಿಸಿದ 280 ವಿದ್ಯಾರ್ಥಿಗಳಲ್ಲಿ ಸುಮಾರು 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾತ್ರಿ ವಾಂತಿ–ಭೇದಿ ಹಾಗೂ ತಲೆ ಸುತ್ತಿನಿಂದ ಅಸ್ವಸ್ಥಗೊಂಡರು. ಕೂಡಲೇ ಆಟೋದಲ್ಲಿ ಮಕ್ಕಳನ್ನು ಬೇಗೂರಿನ ಸಮುದಾಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ನಂತರ ಮತ್ತೆ ಶಾಲೆಗೆ ಕರೆತರಲಾಗಿತ್ತು. ಸೋಮವಾರ ಬೆಳಗ್ಗೆ ಮತ್ತೆ 14 ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದು, ಕೂಡಲೇ ಅವರನ್ನು ಬೇಗೂರಿನ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಅವರಲ್ಲಿ ರಾಘವಾಪುರದ ಗಗನ್ ಎಂಬ ವಿದ್ಯಾರ್ಥಿ ತೀವ್ರವಾಗಿ ಅಸ್ವಸ್ಥಗೊಂಡ ಹಿನ್ನೆಲೆಯಲ್ಲಿ ಆತನನ್ನು ಮೈಸೂರಿನ ಕೆಆರ್.ಆಸ್ಪತ್ರೆಗೆ ರವಾನಿಸಲಾಗಿದ್ದು ತೀವ್ರ ನಿಗಾ ಘಟಕದಲ್ಲಿರಿಸಲಾಗಿದೆ.

ಪೋಷಕರಿಂದ ತರಾಟೆ: ಇಷ್ಟಕ್ಕೆಲ್ಲಾ ಪ್ರಾಂಶುಪಾಲ ಕುಮಾರಸ್ವಾಮಿಯವರ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿರುವ ಪೋಷಕರು, ಅಸ್ವಸ್ಥಗೊಂಡಿದ್ದ ವಿದ್ಯಾರ್ಥಿಗಳನ್ನು ರಾತ್ರಿ ಆಸ್ಪತ್ರೆಯಲ್ಲಿ ಇರಿಸದೆ ಮತ್ತೆ ವಸತಿ ಶಾಲೆಗೆ ಕರೆದುಕೊಂಡು ಬಂದದ್ದು ಯಾಕೆ. ಅಲ್ಲದೆ, ರಾತ್ರಿ ವಿದ್ಯಾರ್ಥಿಗಳು ಅಸ್ವಸ್ಥಗೊಂಡಿರುವ ವಿಚಾರ ತಿಳಿದರೂ ಆಸ್ಪತ್ರೆಗೆ ಬಾರದೆ ಬೇರೆ ವ್ಯಕ್ತಿಗಳನ್ನು ಕಳುಹಿಸಿದ್ದು ಯಾಕೆ ಎಂದು ಪೋಷಕರು ಪ್ರಾಂಶುಪಾಲರನ್ನು ತರಾಟೆಗೆ ತೆಗೆದುಕೊಂಡರು.

> ಪ್ರಾಂಶುಪಾಲರು, ಅಡುಗೆ ಸಿಬ್ಬಂದಿ ಮತ್ತು ಮಕ್ಕಳಿಂದ ಮಾಹಿತಿ ಪಡೆಯಲಾಗಿದ್ದು, ನೀರು ಹಾಗೂ ನಿನ್ನೆ ಮಕ್ಕಳು ಸೇವಿಸಿದ ಆಹಾರದ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸುವಂತೆ ಸೂಚಿಸಲಾಗಿದೆ. ಈ ವಿಚಾರದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಲಾಗುವುದು.
>
> -ಶ್ರೀಶೈಲಯಮನಪ್ಪ ತಳವಾರ್, ತಹಶೀಲ್ದಾರ್ ಗುಂಡ್ಲುಪೇಟೆ.

ಈ ಬಗ್ಗೆ ಉನ್ನತ ಮಟ್ಟದಲ್ಲಿ ತನಿಖೆಯಾಗಬೇಕು ಎಂದು ಆಗ್ರಹಿಸಿರುವ ಪೋಷಕರು ಈಗಾಗಲೇ ಈ ಶಾಲೆಯಲ್ಲಿ ಮೂರನೇ ಬಾರಿ ಇಂತಹ ಘಟನೆ ನಡೆದಿದೆ. 10 ತಿಂಗಳ ಹಿಂದೆ 15 ಮಕ್ಕಳು ಊಟ ಮಾಡಿ ಅಸ್ವಸ್ಥಗೊಂಡಿದ್ದರು. ಕಳೆದ 3–4 ತಿಂಗಳ ಹಿಂದೆಯೂ ಮಕ್ಕಳು ಹೆಸರುಕಾಳು ಸಾಂಬಾರ್ ಊಟ ಮಾಡಿ ಅಸ್ವಸ್ಥಗೊಂಡಿದ್ದು, ಆಗ ಶಾಲೆಗೆ ಆಸ್ಪತ್ರೆಯ ಸಿಬ್ಬಂದಿಯನ್ನು ಕರೆಸಿ ಚಿಕಿತ್ಸೆ ಕೊಡಿಸಲಾಗಿತ್ತು. ಮಕ್ಕಳು ವಿದ್ಯಾಭ್ಯಾಸ ವಂಚಿತರಾಗಬಾರದು ಎಂದು ಇಲ್ಲಿಗೆ ಕಳುಹಿಸಲಾಗುತ್ತದೆ. ನಮ್ಮ ಮಕ್ಕಳ ಪ್ರಾಣಕ್ಕೆ ಯಾರು ಹೊಣೆ ಎಂದು ಪೋಷಕರು ಪ್ರಾಂಶುಪಾಲ ಕುಮಾರಸ್ವಾಮಿ ಅವರನ್ನು ತರಾಟೆಗೆ ತೆಗೆದುಕೊಂಡಾಗ ಪ್ರಾಂಶುಪಾಲ ಕುಮಾರಸ್ವಾಮಿ ತಬ್ಬಿಬ್ಬಾದರು.

ವಿಷಯ ತಿಳಿದ ಕೂಡಲೇ ಆಸ್ಪತ್ರೆ ಹಾಗೂ ವಸತಿಶಾಲೆಗೆ ತಹಶೀಲ್ದಾರ್ ಶ್ರೀಶೈಲಯಮನಪ್ಪ ತಳವಾರ್ ಹಾಗೂ ಬಿಇಓ ರಾಜಶೇಖರ್, ಡಿಸಿಓ ಮಹದೇವಪ್ರಸಾದ್, ಟಿಹೆಚ್‌ಓ ಗಿರಿಧರ್, ಬೇಗೂರು ಠಾಣೆ ಇನ್ಸ್‌ಪೆಕ್ಟರ್ ಕಿರಣ್‌ಕುಮಾರ್, ಸಬ್‌ಇನ್ಸ್‌ಪೆಕ್ಟರ್ ಚರಣ್‌ಗೌಡ ಭೇಟಿ ನೀಡಿ ಮಕ್ಕಳ ಯೋಗಕ್ಷೇಮ ವಿಚಾರಿಸಿ, ವೈದ್ಯರಿಂದ ಮಾಹಿತಿ ಪಡೆದ ನಂತರ ಮೊರಾರ್ಜಿ ವಸತಿ ಶಾಲೆಯಲ್ಲಿ ಉಳಿದ ಮಕ್ಕಳನ್ನು ಒಂದೆಡೆ ಸೇರಿಸಿ ಮಕ್ಕಳಿಗೆ ಆರೋಗ್ಯ ತಪಾಸಣೆ ಮಾಡಿಸುವಂತೆ ಪ್ರಾಂಶುಪಾಲರಿಗೆ ತಿಳಿಸಿದರು.

ವಸತಿ ಶಾಲೆಯಿಂದ ಆಸ್ಪತ್ರೆಗೆ ಕರೆತರಲಾಗಿದ್ದ ವಿದ್ಯಾರ್ಥಿಗಳನ್ನು ಪೊಲೀಸ್ ಸಿಬ್ಬಂದಿ ಆಸ್ಪತ್ರೆಯ ಹೊರಾಂಗಣದಿಂದ ಎತ್ತಿಕೊಂಡು ಬಂದು ಚಿಕಿತ್ಸೆ ಕೊಡಿಸಲು ನೆರವಾದ ದೃಶ್ಯ ಕಂಡ ಸಾರ್ವಜನಿಕರು ಹಾಗೂ ಆಸ್ಪತ್ರೆಗೆ ಬಂದಿದ್ದ ರೋಗಿಗಳು ಪೊಲೀಸರ ಮಾನವೀಯತೆಗೆ ಶ್ಲಾಘನೆ ವ್ಯಕ್ತಪಡಿಸಿದರು.

ಜೆಡಿಎಸ್ ಜಾತ್ಯತೀತ ಎಂಬ ಟ್ಯಾಗ್ ತೆಗೆಯಬೇಕು: ದಿನೇಶ್ ಗುಂಡೂರಾವ್

ಬೆಂಗಳೂರು: ಜೆಡಿಎಸ್ ಜಾತ್ಯತೀತ ಎಂಬ ಟ್ಯಾಗ್ ತೆಗೆಯಬೇಕಾದ ಅಗತ್ಯವಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಬೆಂಗಳೂರಿನಲ್ಲಿ ನಡೆಯುತ್ತಿರುವ ವಿಪಕ್ಷಗಳ ಸಭೆಗೆ ತಮ್ಮ ಪಕ್ಷಕ್ಕೆ ಆಹ್ವಾನ ನೀಡಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ ನಡುವೆ ಪ್ರತಿಕ್ರಿಯಿಸಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಜೆಡಿಎಸ್‌ಗೆ ಜಾತ್ಯತೀತ ರಾಜಕೀಯದಲ್ಲಿ ನಿಜವಾಗಿ ನಂಬಿಕೆಯಿಲ್ಲ ಎಂಬುದು ನಮಗೆ ತಿಳಿದಿದೆ. ಅವರು ಹಿಂದೆಯೂ ಕೂಡಾ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದಾರೆ ಎಂದರು.

ಮೈಸೂರು ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಸರ್ಕಾರ ಮುಂದಾಗಬೇಕು

ಸದನದಲ್ಲಿ ಶಾಸಕ ಶ್ರೀವತ್ಸ ಆಗ್ರಹ



ಬೆಂಗಳೂರು, ಜು.17(ಎಸ್‌ಬಿಡಿ)– ಮೈಸೂರಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಸರ್ಕಾರ ಮುಂದಾಗಬೇಕು ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಸದನದಲ್ಲಿ ಮನವಿ ಮಾಡಿದ್ದಾರೆ.

ಮೈಸೂರು ಸಾಂಸ್ಕೃತಿಕ ನಗರಿ ಮಾತ್ರವಲ್ಲ ಪಾರಂಪರಿಕ ನಗರಿ ಎಂಬ ಹಿರಿಮೆಯನ್ನು ಹೊಂದಿದೆ. ಆದರೆ ಈ ಬಾರಿ ಬಜೆಟ್‌ನಲ್ಲಿ ಪಾರಂಪರಿಕ ಕಟ್ಟಡಗಳ ಬಗ್ಗೆ ಯಾವುದೇ ಪ್ರಸ್ತಾಪವಾಗಿಲ್ಲ. ದೇವರಾಜ ಮಾರ್ಕೆಟ್, ವಿವಿ ಮಾರ್ಕೆಟ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಸೇರಿದಂತೆ ಎಲ್ಲಾ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಬಗ್ಗೆ ಗಮನ ಹರಿಸಬೇಕೆಂದು ಆಗ್ರಹಿಸಿದರು.

ಮುಂದಿನ ವರ್ಷ ಕೆಆರ್.ಆಸ್ಪತ್ರೆಗೆ ನೂರು ವರ್ಷ ತುಂಬಲಿದೆ ಶತಮಾನೋತ್ಸವ ಸಂದರ್ಭದಲ್ಲಿ ವಿಶೇಷ ಅನುದಾನ ನೀಡಿದರೆ ರಾಜ್ಯದ ಮಾದರಿ ಆಸ್ಪತ್ರೆಯಾಗಿ ಅಭಿವೃದ್ಧಿ ಮಾಡಬಹುದು. ದಸರಾ ವಸ್ತು ಪ್ರದರ್ಶನವನ್ನು ಪ್ರಗತಿ ಮೈದಾನದ ರೀತಿಯಲ್ಲಿ ಅಭಿವೃದ್ಧಿಪಡಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಆದರೆ ಅದಕ್ಕೆ ಅನುದಾನವನ್ನೂ ಮೀಸಲಿಡಬೇಕು. ಬಹುವರ್ಷಗಳ ಬೇಡಿಕೆಯಾಗಿರುವ ದಸರಾ ಪ್ರಾಧಿಕಾರ ರಚಿಸಬೇಕು. ಮೈಸೂರಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಆರಂಭಿಸಬೇಕು. ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆಗೆ ಅನುದಾನ ನೀಡಬೇಕು. ಚಿತ್ರನಗರಿ ನಿರ್ಮಾಣಕ್ಕೆ ಬೇಡಿಕೆಯಂತೆ 100 ಕೋಟಿ ರೂ. ಅನುದಾನ ಕಲ್ಪಿಸಬೇಕೆಂದು ಮನವಿ ಮಾಡಿದರು.



ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರು, ತಮ್ಮ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮಂಚೇಗೌಡನಕೊಪ್ಪಲು ಸರ್ಕಾರಿ ಶಾಲೆಗೆ ಕುರ್ಚಿಗಳು, ಮಕ್ಕಳಿಗೆ ಪುಸ್ತಕ, ಶೂ ವಿತರಿಸಿದರು. ಈ ವೇಳೆ ಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ವಾರ್ಡ್ ಅಧ್ಯಕ್ಷ ಡೆಲ್ಲಿ ರವಿ, ಶ್ರೀಧರ್ ಮತ್ತಿತರರು ಉಪಸ್ಥಿತರಿದ್ದರು.

ನೇರ ಸಂದರ್ಶನ

ಮಂಡ್ಯ, ಜು.17– ಅಂಚೆ ಜೀವ ವಿಮಾ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ಅಂಚೆ ಜೀವ ವಿಮೆ ಪ್ರತಿನಿಧಿಗಳ ನೇಮಕಾತಿಗಾಗಿ ಆ.3ರಂದು ಬೆಳಗ್ಗೆ 10 ಗಂಟೆಗೆ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ವಾಸವಾಗಿರುವ ಅಭ್ಯರ್ಥಿಗಳಿಗೆ ಮಾತ್ರ ಅವಕಾಶವಿದ್ದು, ಹೆಚ್ಚಿನ ಮಾಹಿತಿಗೆ ಅಂಚೆ ವಿಮಾ ಅಧಿಕಾರಿ ನಾಗರಾಜ್ (9483658775) ಅವರನ್ನು ಸಂಪರ್ಕಿಸಬಹುದು ಎಂದು ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇನ್ಫೋಸಿಸ್ ಫೌಂಡೇಷನ್ ಅಭಿವೃದ್ಧಿಪಡಿಸಿದ ಹೆಬ್ಬಾಳು ಕೆರೆಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಭೇಟಿ

● ಕೆರೆಗೆ ತ್ಯಾಜ್ಯ ಸೇರುತ್ತಿರುವ ಬಗ್ಗೆ ಸಾರ್ವಜನಿಕರ ದೂರು ● ಮೈಸೂರು ನಗರ ಪಾಲಿಕೆ ಭಾಗದ ತ್ಯಾಜ್ಯ ವಿಲೇವಾರಿ ಮಾಡದ ಬಗ್ಗೆ ಮನವರಿಕೆ



ಮೈಸೂರು, ಜು.17(ಎಸ್‌ಬಿಡಿ)– ಇನ್ಫೋಸಿಸ್ ಫೌಂಡೇಷನ್ ವತಿಯಿಂದ ಅಭಿವೃದ್ಧಿಪಡಿಸಿ, ನಿರ್ವಹಣೆ ಮಾಡಲಾಗುತ್ತಿರುವ ಹೆಬ್ಬಾಳು ಕೆರೆಗೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೈಸೂರು ನಗರ ಪಾಲಿಕೆ, ಹೂಟಗಳ್ಳಿ ನಗರಸಭೆ, ಕೆಐಎಡಿಬಿ, ಮಾಲಿನ್ಯ ನಿಯಂತ್ರಣ ಮಂಡಳಿ, ಇನ್ಫೋಸಿಸ್ ಸಂಸ್ಥೆ, ಹೆಬ್ಬಾಳು ಕೆರೆ ಹಿತರಕ್ಷಣಾ ಸಮಿತಿ ಪ್ರತಿನಿಧಿಗಳೊಂದಿಗೆ ಕೆರೆ ವೀಕ್ಷಿಸಿದ ಜಿಲ್ಲಾಧಿಕಾರಿಗಳು, ಅಲ್ಲಿನ ನಿರ್ವಹಣೆ ಬಗ್ಗೆ ಪ್ರಶಂಸಿಸಿದರಲ್ಲದೆ, ಸ್ವಚ್ಛತೆಗೆ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ನಿಗಾ ವಹಿಸಬೇಕೆಂದು ಸೂಚನೆ ನೀಡಿದರು.

ಇನ್ಫೋಸಿಸ್ ಫೌಂಡೇಷನ್ ಮೂಲಕ ಸುಧಾಮೂರ್ತಿಯವರು ಸುಮಾರು 105 ಕೋಟಿ ರೂ. ವೆಚ್ಚದಲ್ಲಿ ಹೆಬ್ಬಾಳು ಕೆರೆ ಅಭಿವೃದ್ಧಿಪಡಿಸಿದ್ದು, ಈವರೆಗೂ ಸಮರ್ಪಕವಾಗಿ ನಿರ್ವಹಣೆ ಮಾಡಲಾಗಿದೆ. ಕೆರೆಗಳ ಬಗ್ಗೆ ಅತೀವ ಕಾಳಜಿ ಹೊಂದಿರುವ ಸುಧಾಮೂರ್ತಿಯವರಿಗೆ ಮನವಿ ಮಾಡಿದರೆ ನಿರ್ವಹಣೆಯನ್ನು ಖಂಡಿತವಾಗಿ ಮುಂದುವರೆಸುತ್ತಾರೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಕ್ರಮ ವಹಿಸಬೇಕು. ಕೆರೆ ಆವರಣದಲ್ಲಿ ಎರಡು ಶೌಚಾಲಯಗಳನ್ನು ನಿರ್ಮಿಸಿಕೊಡಬೇಕು ಎಂದು ಹೆಬ್ಬಾಳು ಕೆರೆ ಹಿತರಕ್ಷಣಾ ಸಮಿತಿ ಅಧ್ಯಕ್ಷ ಎಂ.ಆರ್.ರವಿಕುಮಾರ್(ಡೆಲ್ಲಿ) ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

ಕೆರೆಗೆ ಎರಡು ಮಳೆ ನೀರು ಚರಂಡಿಗಳ ಸಂಪರ್ಕವಿದೆ. ತ್ಯಾಜ್ಯ ಕೆರೆಗೆ ಸೇರದಂತೆ ತಡೆಯಲು ಒಳಹರಿವಿನ ಸ್ಥಳದಲ್ಲಿ ಜಾಲರಿಗಳನ್ನು ಅಳವಡಿಸಲಾಗಿದೆ. ಒಂದು ಭಾಗದಲ್ಲಿನ ತ್ಯಾಜ್ಯವನ್ನು ನಗರಸಭೆ ವತಿಯಿಂದ ತೆರವುಗೊಳಿಸಲಾಗುತ್ತದೆ. ಆದರೆ ಮತ್ತೊಂದು ಮಳೆ ನೀರು ಚರಂಡಿ ಭಾಗವನ್ನು ನಿರ್ವಹಿಸಬೇಕಿರುವ ನಗರ ಪಾಲಿಕೆ, ಸಮರ್ಪಕವಾಗಿ ತ್ಯಾಜ್ಯ ತೆರವು ಮಾಡುತ್ತಿಲ್ಲ. ಹಾಗಾಗಿ ನೀರಿನ ಪ್ರಮಾಣ ಹೆಚ್ಚಾದರೆ ಪ್ಲಾಸ್ಟಿಕ್ ಬಾಟಲ್, ಮದ್ಯದ ಬಾಟಲಿ ಇನ್ನಿತರ ತ್ಯಾಜ್ಯ ಕೆರೆ ಸೇರುತ್ತದೆ ಎಂದು ಸ್ಥಳೀಯರು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಕೆರೆಗೆ ತ್ಯಾಜ್ಯ ಸೇರದಂತೆ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ನಿರಂತರ ಪರಿಶೀಲನೆ ನಡೆಸಿ, ನಿಗಾ ವಹಿಸಬೇಕು. ಕೈಗಾರಿಕೆಗಳಿಂದ ಕೆಮಿಕಲ್ ಮಿಶ್ರಿತ ನೀರು ಕೆರೆಗೆ ಹರಿದುಬರದಂತೆ ಎಚ್ಚರ ವಹಿಸಬೇಕು. ಉತ್ತಮವಾಗಿ ಅಭಿವೃದ್ಧಿಪಡಿಸಿರುವ ಕೆರೆ, ಹಾಳಾಗದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.



ತಿದ್ದುಪಡಿ

ದಿ. 16–07–2023 ರಲ್ಲಿ 'ಮೈಸೂರು ಮಿತ್ರ' ಪತ್ರಿಕೆಯ 12ನೇ ಪುಟದಲ್ಲಿ ಪ್ರಕಟವಾದ 'ಕಳೆದಿದೆ' ಜಾಹೀರಾತಿನಲ್ಲಿ ಸವಿತ ಬಿ. ರವರು ದಿ. 4–12–2023 ರಂದು ಎಸ್. ಮಂಜುನಾಥಗುಪ್ತ ಉರುಫ್ ಎಂ.ಎಸ್. ಮಂಜುನಾಥಶೆಟ್ಟಿ ಎಂಬುವವರಿಂದ ನಗರಸಭೆ ಕ್ರಮಾಂಕ 1360/80, ಆಸ್ತಿ ನಂಬರ್ 1363/80, ನಿವೇಶನ ಸಂಖ್ಯೆ 81 ಎಂದು ಪ್ರಕಟವಾಗಿದ್ದು, ಅದನ್ನು ದಿ. 04–12–2003 ಮತ್ತು ನಗರ ಸಭೆ ಕ್ರಮಾಂಕ 1363/80, ಆಸ್ತಿ ಸಂ. 1363/80 ನಿವೇಶನ ಸಂಖ್ಯೆ 81 ಮತ್ತು ಸದರಿ ಕ್ರಯ ಪತ್ರದ ವಿಚಾರದಲ್ಲಿ ನ್ಯಾಯಾಲಯ ದಾವೆ ಇರುವುದಿಲ್ಲ ಎಂದು ಓದಿಕೊಳ್ಳಬೇಕಾಗಿ ಕೋರಿಕೆ.

ಸಹಿ/– ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು